

ಐಕ್ಯರಂಗ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ರಾಜ್ಯಸಮಿತಿಯ ವಾರಪತ್ರಿಕೆ

ಸಂಪುಟ-೧೧ ಸಂಚಿಕೆ ೨೫ ಜೂನ್ ೧೮-೧೯೮೯ ರೂ. 1-25

ಕಾಂಗ್ರೆಸ್ (ಐ)ನ ಸಾಮಾಜಿಕ-ಆರ್ಥಿಕ ನೀತಿಗಳು

ಹೆಚ್ಚೆಚ್ಚು ಜನವಿರೋಧಿ ಸ್ವರೂಪ ಪಡೆಯುತ್ತಿವೆ

ಪಾಲಿಟ್ ಬ್ಯೂರೋ ಎಚ್ಚರಿಕೆ

ದಿನಬಳಕೆಯ ಸರಕುಗಳ ಸತತ ಬೆಲೆಯೇರಿಕೆ, ಕೃಷಿಗಾರರು ಮತ್ತು ಇತರ ಸಣ್ಣ ಉತ್ಪಾದಕರಿಗೆ ನ್ಯಾಯಬೆಲೆ ಸಿಗದಿರುವುದು, ಹೆಚ್ಚುತ್ತಿರುವ ನಿರುದ್ಯೋಗ, ತೆರಿಗೆ, ಸಾಲ ಹಾಗೂ ಜನರ ಇತರ ಸಮಸ್ಯೆಗಳ ಹೆಚ್ಚುತ್ತಿರುವ ಹೊರೆ-ಇವೆಲ್ಲದರ ಮೂಲದಲ್ಲಿರುವುದು ಕಾಂಗ್ರೆಸ್ (ಐ) ಸರಕಾರದ ಸಾಮಾಜಿಕ-ಆರ್ಥಿಕ ಧೋರಣೆಗಳು. ರಾಜೀವ್ ಗಾಂಧಿಯ ಆಳ್ವಿಕೆಯಲ್ಲಿ ಅದು ಇನ್ನೂ ಹೆಚ್ಚೆಚ್ಚು ಜನ-ವಿರೋಧಿ ಆಯಾಮ ಪಡೆಯುತ್ತಿದೆ. ಇದರಿಂದಾಗಿ ಕೈಗಾರಿಕಾ ಮತ್ತು ಕೃಷಿಕಾರ್ಮಿಕರು, ದುಡಿಯುವ ರೈತರು, ಇತರ ದುಡಿಯುವ ಜನ ವಿಭಾಗಗಳು ತಮ್ಮ ದುಡಿಮೆಯ ಮತ್ತು ಜೀವನದ ಮಟ್ಟವನ್ನು ರಕ್ಷಿಸಿಕೊಳ್ಳಲು ಹೆಚ್ಚೆಚ್ಚು ಕಾರ್ಯಾಚರಣೆಗಿಳಿಯಬೇಕಾಗಿ ಬರುತ್ತಿದೆ. ಈ ಸಾಮೂಹಿಕ ಕಾರ್ಯಾಚರಣೆಗಳಿಗೆ ಸಾಧ್ಯವಿದ್ದ ಎಲ್ಲಾ ನೆರವು ನೀಡಬೇಕೆಂದು ಪಕ್ಷದ ಎಲ್ಲಾ ಘಟಕಗಳಿಗೆ ಮತ್ತು ಮಿತ್ರರಿಗೆ ಪಾಲಿಟ್ ಬ್ಯೂರೋ ಕರೆ ನೀಡಿದೆ. ಮೇ 27 ಮತ್ತು 28 ರಂದು ದೆಹಲಿಯಲ್ಲಿ ಸಭೆ ಸೇರಿದ್ದ ಸಿ.ಪಿ.ಐ. (ಎಂ) ಪಾಲಿಟ್‌ಬ್ಯೂರೋ ರಾಷ್ಟ್ರೀಯ ರಾಜಕೀಯ ಸನ್ನಿವೇಶದ ಪರಾಮರ್ಶೆ ನಡೆಸಿತು. ಸಭೆಯ ನಂತರ ನೀಡಿದ ಹೇಳಿಕೆಯಲಿ ಪಾಲಿಟ್‌ಬ್ಯೂರೋ ಈ ಕರೆ ನೀಡಿದೆ.

ಜೂನ್ ತಿಂಗಳಿಂದ ಎಡ ನೇತೃತ್ವದ ...ತ ಹಾಗೂ ಕೃಷಿಕಾರ್ಮಿಕ ಸಂಘಟನೆಗಳ ...ರಿಯ ಮೇರೆಗೆ ಭೂಮಿಗಾಗಿ ...ಡೆಯಲಿರುವ ಧೀರ ಹೋರಾಟಕ್ಕೆ ಸಂಪೂರ್ಣ ...ಬೆಂಬಲ ನೀಡಬೇಕೆಂದು ಪಕ್ಷದ ಎಲ್ಲಾ ...ಘಟಕಗಳಿಗೆ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳಿಗೆ ...ದು ಮನವಿಮಾಡಿಕೊಂಡಿದೆ.

ರಾಜೀವ್ ಸರ್ಕಾರದ ವರ್ಗಧೋರಣೆಗಳು ...ದೇಶವನ್ನು ಒಂದು ಆಂತರಿಕ ಹಾಗೂ ಬಾಹ್ಯ ...ಸಾಲ ಬಲೆಯಲ್ಲಿ ಸಿಲುಕುತ್ತಿವೆ ಎಂದಿರುವ ಪಾಲಿಟ್‌ಬ್ಯೂರೋ ಭಾರತದ ವಿದೇಶ ಸಾಲ ...ಮೀರಿ ಒಂದು ಲಕ್ಷ ಕೋಟಿ ರೂಗಳು ...ಎಂದು ಪಕ್ಷದ ಕೇಂದ್ರ ಸಮಿತಿ ಎಪ್ರಿಲ್‌ನಲ್ಲಿ ...ಹೇಳಿರುವುದು ಈಗ ಖಾತ್ರಿಯಾಗಿದೆ ಎಂದಿದೆ. ...ಒಂದು ರಾಷ್ಟ್ರೀಯ ಪತ್ರಿಕೆಯಲ್ಲಿ ಈ ಬಗ್ಗೆ ...ಒಂದು ಗುಪ್ತವರದಿ ಬೆಳಕಿಗೆ ಬಂದಿದೆ. ...ಸರ್ಕಾರ ಐ.ಎಂ.ಎಫ್. ನ ಶರತ್ತುಗಳಿಗೆಲ್ಲಾ ...ಒಪ್ಪಿ ಇನ್ನೊಮ್ಮೆ ಸಾಲ ಪಡೆಯಲು ಸಿದ್ಧತೆ ...ನಡೆಸುತ್ತಿದ್ದು, ಇದುವರೆಗೂ ಹೇಳಲ್ಪಡದಿರಲು ...ಮುಂಬರುವ ಲೋಕ ಸಭೆ ಚುನಾವಣೆಗಳು ಎಂದು ಪಾಲಿಟ್‌ಬ್ಯೂರೋ ಹೇಳಿಕೆ ತಿಳಿಸಿದೆ.

ಈ ಆರ್ಥಿಕ ಬಿಕ್ಕಟ್ಟಿನಿಂದಾಗಿ ಸರಕಾರ ಅಮೆರಿಕನ್ ಸಾಮ್ರಾಜ್ಯಶಾಹಿಯ ಬ್ಲ್ಯಾಕ್‌ಮೇಲ್‌ಗಳಿಗೆ ಬಲಿಯಾಬೇಕಾಗಿ ಬಂದಿದೆ. ಭಾರತದ ಸ್ವತಂತ್ರ ವೈಜ್ಞಾನಿಕ ಮತ್ತು ರಕ್ಷಣಾ ಸಾಮರ್ಥ್ಯದ ಬಗ್ಗೆ ಗಂಟಲು ಹಿಡಿಯುವಂತೆ ಸಾಮ್ರಾಜ್ಯಶಾಹಿ ಟೀಕಿಸುತ್ತಿದೆ. ಭಾರತ ಹೈಡ್ರೋಜನ್ ಬಾಂಬ್ ತಯಾರಿಸುತ್ತಿದೆಯೆಂದು ಸಿ.ಐ.ಎ. ಮುಖ್ಯಸ್ಥ ಸೆನೆಟ್ ಉಪಸಮಿತಿಯ ಮುಂದೆ ಸುಳ್ಳು ಸಾಕ್ಷಿ ನೀಡುತ್ತಾನೆ. 'ಅಗ್ನಿ' ಕ್ಷಿಪಣಿ ಪ್ರಯೋಗದ ಬಗ್ಗೆ ಅದು ವೈಷಮ್ಯ ಪೂರ್ಣ ಪ್ರತಿಕ್ರಿಯೆ ವ್ಯಕ್ತಪಡಿಸಿದೆ. ಇದರ ಜನತೆಗೇ ಆರ್ಥಿಕ ರಂಗದಲ್ಲೂ "ಸೂಪರ್ 301" ಬ್ಲ್ಯಾಕ್ ಮೇಲ್ ಕೂಡಾ ಒತ್ತಡ ಹೇರುವಲ್ಲಿ ಹೊಸ ಘಟ್ಟವನ್ನು ಅದು ಆರಂಭಿಸಿದೆ. ಜತೆಗೇ ಭಾರತದ ಬಗ್ಗೆ ನೆರೆ ದೇಶಗಳಲ್ಲಿ ವೈಷಮ್ಯ ಹುಟ್ಟಿಸಲು ಪ್ರಯತ್ನ ನಡೆದಿದೆ. ಎಲ್ಲಾ ದೇಶಪ್ರೇಮಿ ಶಕ್ತಿಗಳು ಈ ಕ್ರಮಗಳನ್ನು ಬಲವಾಗಿ ವಿರೋಧಿಸಬೇಕು. ಸರಕಾರ ದೇಶದ ಸಾರ್ವಭೌಮತೆ ಮತ್ತು ಸ್ವಾತಂತ್ರ್ಯಕ್ಕೆ ಸಂಬಂಧಪಟ್ಟ ಈ ಪ್ರಶ್ನೆಯ ಮೇಲೆ ದೃಢ ನಿಲುವು ತಳೆಯುವಂತೆ ಮಾಡಬೇಕೆಂದು ಪಾಲಿಟ್‌ಬ್ಯೂರೋ ಮನವಿ ಮಾಡಿದೆ. ಯಾಕೆಂದರೆ ಉದಾರೀಕರಣ ನೀತಿಯಿಂದ ದೇಶವನ್ನು ಅಮೆರಿಕನ್ ಒತ್ತಡಗಳಿಗೆ ಈಡು ಮಾಡಿರುವ ರಾಜೀವ್ ಸರ್ಕಾರ ಈಗಾಗಲೇ ಬೌದ್ಧಿಕ ಆಸ್ತಿ ಹಕ್ಕುಗಳ ಬಗ್ಗೆ ಚರ್ಚೆ ನಡೆಸಬೇಕೆಂದು ಅಮೆರಿಕಾ ಒತ್ತಡದಿಂದಾಗಿ ಹಿಂದೆ ಸರಿದಿದೆ.

ಸಾಮ್ರಾಜ್ಯಶಾಹಿಗಳ ಒತ್ತಡವನ್ನು ಎದುರಿಸಿಯೂ ಸರಕಾರ ಆರ್ಥಿಕ ನೀತಿಯನ್ನು ಮುಂದುವರಿಸಿದೆ ಎಂದು ಪಾಲಿಟ್‌ಬ್ಯೂರೋ ಗಮನಿಸಿದೆ. ಆದರೆ ಇಲ್ಲಿಯೂ ಸಂಸ್ಥೆ [illegible] ಎಂದು ಅದು ಎಚ್ಚರಿಸಿದೆ. ಯಾಕೆಂದರೆ ವಿರೋಧಪಕ್ಷಗಳಲ್ಲಿ ಮತ್ತು ಆಳುವ ಪಕ್ಷದಲ್ಲೂ ಸಾಮ್ರಾಜ್ಯಶಾಹಿಗೆ ಯಾವುದೇ ರೀತಿಯ ಪ್ರತಿರೋಧವನ್ನು ಹುಸಿಗೊಳಿಸಬಯಸುವ ಶಕ್ತಿಗಳಿವೆ.

ವಿಚ್ಛಿದ್ರಕಾರೀ ಶಕ್ತಿಗಳು ಸಕ್ರಿಯವಾಗಿವೆ

ಈ ರಾಜಕೀಯ ಸನ್ನಿವೇಶದಲ್ಲಿ ಜನರ ಅಸಂತೃಪ್ತಿಯನ್ನು ಬಳಸಿಕೊಂಡು ಜಾತಿವಾದ, ಕೋಮುವಾದ, ಬುಡಕಟ್ಟು ಮತ್ತು ಪ್ರಾದೇಶಿಕ ಪ್ರತ್ಯೇಕವಾದ ಬಲಗೊಳ್ಳುತ್ತಿದೆ. ಇವುಗಳ ವಿರುದ್ಧ ಹೋರಾಡುವ ಬದಲು ಆಳುವ ಪಕ್ಷ ಅವುಗಳೊಡನೆ ಸಮಯಸಾಧಕ ಒಪ್ಪಂದ ಮಾಡಿಕೊಳ್ಳುತ್ತಿದೆ. ಪಂಜಾಬಿನಲ್ಲಿ ಯಾವುದೇ ಹೊಸ ಹೆಜ್ಜೆ ಹಾಕದೇ ಸಮಸ್ಯೆಯನ್ನು ಹಾಗೆಯೇ ಬಿಟ್ಟು ಅದರ ಚುನಾವಣಾ ಲಾಭ ಪಡೆಯಲು ಪ್ರಯತ್ನಿಸುತ್ತಿದೆ. ಈ ನಡುವೆ ಭಯೋತ್ಪಾದಕರು ತಮ್ಮ ಕೊಲೆಗಡುಕತನ ಮುಂದುವರಿಸಿದ್ದಾರೆ. ಮೇ 10 ರಂದು ದೆಹಲಿಯಲ್ಲಿ ಸಿ.ಪಿ.ಐ. (ಎಂ) ಹಾಗೂ ಸಿ.ಪಿ.ಐ. ಜಂಟಿಯಾಗಿ ಪಂಜಾಬ್ ಸಮಸ್ಯೆಯ ತಕ್ಷಣ ರಾಜಕೀಯ ಇತ್ಯರ್ಥಕ್ಕಾಗಿ ಸತ್ಯಾಗ್ರಹ ನಡೆಸಿದ್ದನ್ನು ಗಮನಿಸಿದ ಪಾಲಿಟ್‌ಬ್ಯೂರೋ ಎಲ್ಲಾ ದೇಶಪ್ರೇಮಿ ಮತ್ತು ಶಾಂತಿಪ್ರಿಯ ಶಕ್ತಿಗಳು ರಾಜೀವ್ ಗಾಂಧಿ ಸರಕಾರದ ಮೇಲೆ ಈ ಬಗ್ಗೆ ಒತ್ತಡ ಹೇರಬೇಕೆಂದು ಕರೆ ನೀಡಿದೆ.

ಜಮ್ಮು-ಕಾಶ್ಮೀರದ ಸ್ಥಿತಿಯನ್ನು ಅವಲೋಕಿಸಿದ ಪಾಲಿಟ್‌ಬ್ಯೂರೋ ಪರಿಸ್ಥಿತಿ ಆತಂಕಕಾರಿಯಾಗಿದೆ. ಇದು ದೇಶದ ಐಕ್ಯತೆಗೊಂದು ಗಂಭೀರ ಬೆದರಿಕೆಯೊಡ್ಡಿದೆ. ಪ್ರತ್ಯೇಕತಾವಾದಿ ಶಕ್ತಿಗಳಿಗೆ ಹಿಂದೆ ಆಡಳಿತ ನೀಡಿದ [illegible] ಅಸ್ಥಿರಗೊಳ್ಳುತ್ತದೆ ಎಂದು ಅದು ಎಚ್ಚರಿಸಿದೆ.

ಸಂಸದೀಯ ವ್ಯವಸ್ಥೆಯ ಅಪಮೌಲ್ಯ: ಸಾರ್ವಜನಿಕ ಲೆಕ್ಕ ಪತ್ರ ಸಮಿತಿಗೆ ವಿರೋಧಪಕ್ಷದ ಸದಸ್ಯರನ್ನು ಅಧ್ಯಕ್ಷರಾಗಿ ನೇಮಿಸುವ ಪರಂಪರೆಯ ಮುರಿತ, ಲೋಕಸಭಾಧ್ಯಕ್ಷರ ವರ್ತನೆ, ಸಂಸತ್ತಿನ ಕಲಾಪಗಳ ನಿಯಮಗಳ ತಿದ್ದುಪಡಿ, ಲೋಕಸಭಾಧ್ಯಕ್ಷರ ವಿರುದ್ಧ ಆಪಾದನೆಗಳ ಬಗ್ಗೆ ವಿಚಾರಣೆಗೆ ನಿರಾಕರಣೆ ಇವೆಲ್ಲಾ ಸಂಸದೀಯ ಪ್ರಜಾಸತ್ತೆಯನ್ನು ಬುಡಮೇಲು ಮಾಡುವ ಕ್ರಮಗಳು ಎಂದು ಪಾಲಿಟ್‌ಬ್ಯೂರೋ ಖಂಡಿಸಿದೆ. ಪಂಜಾಬ್ ಮಸೂದೆ ಹಾಗೂ ಜವಾಹರ ಉದ್ಯೋಗ ಯೋಜನೆ ಸಂವಿಧಾನದ ಒಕ್ಕೂಟ ರಚನೆಯ ಮೇಲೆಯೇ ಮಾಡಿರುವ ಪ್ರಹಾರ ಎಂದಿರುವ ಪಾಲಿಟ್‌ಬ್ಯೂರೋ 64 ನೇ ಸಂವಿಧಾನ ತಿದ್ದುಪಡಿ ಮಸೂದೆಯ ಮುಖ್ಯ

8 ನೇ ಪುಟಕ್ಕೆ

ಶ್ರೀಲಂಕಾದ ಸಮಗ್ರತೆ, ಶಾಂತಿ ಕಾಪಾಡಲು ಭಾರತ-ಶ್ರೀಲಂಕಾ ಸಂಬಂಧಗಳನ್ನು ರಕ್ಷಿಸಲು ಮನವಿ

ಭಾರತ-ಶ್ರೀಲಂಕಾ ಒಪ್ಪಂದಕ್ಕೆ ಸಂಬಂಧಪಟ್ಟಂತೆ ಇತ್ತೀಚಿಗಿನ ಬೆಳವಣಿಗೆಗಳ ಬಗ್ಗೆ ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೋ ತನ್ನ ತೀವ್ರ ಆತಂಕ ವ್ಯಕ್ತಪಡಿಸಿದೆ.

ಜೂನ್ 9 ರಂದು ನೀಡಿದ ಹೇಳಿಕೆಯೊಂದರಲ್ಲಿ ಪಾಲಿಟ್‌ಬ್ಯೂರೋ ಭಾರತದ ಶಾಂತಿರಕ್ಷಣಾ ಪಡೆ ವಾಪಸ್ಸು ಪಡೆಯಬೇಕೆಂದು ಶ್ರೀಲಂಕಾ ಸರ್ಕಾರದ ಏಕಪಕ್ಷೀಯ ಘೋಷಣೆಯ ಬಗ್ಗೆ ಕಳವಳ ವ್ಯಕ್ತಪಡಿಸಿದೆ.

ಭಾರತ-ಶ್ರೀಲಂಕಾ ಒಪ್ಪಂದದ ಪ್ರಕಾರ ಈ ಪಡೆಯನ್ನು ಶ್ರೀಲಂಕಾಕ್ಕೆ ಕಳುಹಿಸಲಾಗಿತ್ತು. ಈ ಒಪ್ಪಂದ ಶ್ರೀಲಂಕಾದ ಐಕ್ಯತೆಯ ಚೌಕಟ್ಟಿನೊಳಗೆ ಈಶಾನ್ಯ ಭಾಗದ ತಮಿಳು ಅಲ್ಪಸಂಖ್ಯಾತರ ಸ್ವಾಯತ್ತತೆಯನ್ನು ಕಾಪಾಡುತ್ತದೆ ಹಾಗೂ ಆ ದೇಶದಲ್ಲಿ ಶಾಂತಿ ನೆಲೆಸಲು ನೆರವಾಗುತ್ತದೆ ಎಂಬ ಕಾರಣಕ್ಕೆ ಸಿ.ಪಿ.ಐ. (ಎಂ) ಅದನ್ನು ಬೆಂಬಲಿಸಿತ್ತು.

ಒಪ್ಪಂದವನ್ನು ನಿರ್ಲಕ್ಷಿಸಿ ಶ್ರೀಲಂಕಾ ಮಾಡಿರುವ ಈ ಏಕಪಕ್ಷೀಯ ಘೋಷಣೆ ಭಾರತ ಸರ್ಕಾರವನ್ನು ಇಕ್ಕಟ್ಟಿನಲ್ಲಿ ಸಿಲುಕಿಸಿದೆ. ಈ ಬೆಳವಣಿಗೆಗಳ ಬಗ್ಗೆ ಭಾರತ ಸರ್ಕಾರ ತನ್ನ ಆತಂಕ ವ್ಯಕ್ತಪಡಿಸಬೇಕು. ಆದರೂ ಶ್ರೀಲಂಕಾ ಸರ್ಕಾರ ಹಠ ಹಿಡಿದರೆ ಭಾರತಕ್ಕೆ ಬೇರೆ ದಾರಿಯಿಲ್ಲ. ಒಪ್ಪಂದವನ್ನು ಆರಂಭದಿಂದಲೇ ಬೆಂಬಲಿಸಿದ ತಮಿಳು ಅಲ್ಪಸಂಖ್ಯಾತರು ಈ ಏಕಪಕ್ಷೀಯ ಘೋಷಣೆಯ ವಿರುದ್ಧ ದನಿಯೆತ್ತಿದ್ದಾರೆ.

ಜೆ.ವಿ.ಪಿ. ಮತ್ತು ಸಿಂಹಳೀ ಸಂಕುಚಿತವಾದಿಗಳು ಸಂಕುಚಿತ ಭಾವನೆಗಳನ್ನು ಬಡಿದೆಬ್ಬಿಸುತ್ತ, ಭಾರತೀಯ ಮೂಲದ ಜನರ ಮೇಲೆ ಹಲ್ಲೆ ನಡೆಸುವ ಬೆದರಿಕೆ ನೀಡಿರುವ ಹಿನ್ನೆಲೆಯಲ್ಲಿ ಈ ಬೆಳವಣಿಗೆಗಳಾಗಿವೆ. ಇದು ಬಿಗುವನ್ನು ಮತ್ತಷ್ಟು ಉಲ್ಬಣಿಸುತ್ತದೆ. ಈ ಸನ್ನಿವೇಶದಲ್ಲಿ ಅಡಕವಾಗಿರುವ ಅಪಾಯವನ್ನು ಶ್ರೀಲಂಕಾ ಸರ್ಕಾರ ಕಾಣಬೇಕು. ಒಪ್ಪಂದದ ಅಂಶಗಳನ್ನು ಅನುಷ್ಠಾನಕ್ಕೆ ತಂದು ಒಂದು ಅಖಂಡ ಶ್ರೀಲಂಕಾದ ಚೌಕಟ್ಟಿನೊಳಗೆ ತಮಿಳು ಅಲ್ಪಸಂಖ್ಯಾತರಿಗೆ ಸ್ವಾಯತ್ತತೆ ದೊರೆಯುವಂತೆ ಮಾಡುವ ಬದಲು ಅದು ಸಂಕುಚಿತವಾದಿಗಳ ಬಲೆಗೆ ಬೀಳುತ್ತಿದೆ. ತಮಿಳು ಅಲ್ಪ ಸಂಖ್ಯಾತ ಮತ್ತು ಭಾರತೀಯ ಮೂಲದ ಜನರಿಗೆ ಶ್ರೀಲಂಕಾ ಸರ್ಕಾರ ಭದ್ರತೆ ಒದಗಿಸಬೇಕು ಎಂದು ಪಾಲಿಟ್ ಬ್ಯೂರೋ ಕೇಳಿದೆ.

ಈ ಪ್ರದೇಶದ ದೇಶಗಳನ್ನು ಅಸ್ಥಿರಗೊಳಿಸಲು ಅಮೆರಿಕನ್ ಸಾಮ್ರಾಜ್ಯಶಾಹಿ ಸಕಲ ಪ್ರಯತ್ನ ನಡೆಸುತ್ತಿದೆ ಎಂಬುದನ್ನು ನೆನಪಿಸಿರುವ ಪಾಲಿಟ್‌ಬ್ಯೂರೋ ಭಾರತ-ಶ್ರೀಲಂಕಾ ಒಪ್ಪಂದವನ್ನು ಒಡೆಯುವ ಕ್ರಮ ಅಮೆರಿಕನ್ ಸಾಮ್ರಾಜ್ಯಶಾಹಿಗೆ ತನ್ನ ತಂತ್ರಗಳನ್ನು ಜಾರಿಗೊಳಿಸಲು ನೆರವಾಗುತ್ತದೆ ಎಂದು ಅಭಿಪ್ರಾಯಪಟ್ಟಿದೆ. ಶ್ರೀಲಂಕಾ ಸರ್ಕಾರ, ವಿಶೇಷವಾಗಿ ಶ್ರೀಲಂಕಾದ ಪ್ರಜಾಪ್ರಭುತ್ವ ಶಕ್ತಿಗಳು ಈ ಸಂದರ್ಭದಲ್ಲಿ ಶಾಂತಿ ಕಾಪಾಡಲು, ಶ್ರೀಲಂಕಾದ ಸಮಗ್ರತೆ ಮತ್ತು ಸಾರ್ವಭೌಮತೆ ಹಾಗೂ ಭಾರತ-ಶ್ರೀಲಂಕಾ ನಡುವೆ ಉತ್ತಮ ನೆರೆಹೊರೆ ಸಂಬಂಧಗಳನ್ನು ರಕ್ಷಿಸಲು ದೃಢವಾಗಿ ಎದ್ದು ನಿಲ್ಲಬೇಕೆಂದು ಮನವಿ ಮಾಡಿಕೊಂಡಿದೆ.

ಒಳ ಪುಟಗಳಲ್ಲಿ

ಭಾಷಾ ನೀತಿಯ ಕುರಿತು ಹೈಕೋರ್ಟ್ ತೀರ್ಪು

—ಒಂದು ವಿಶ್ಲೇಷಣಾ

ಒಂದನೇ ತರಗತಿಯಿಂದಲೇ ಕನ್ನಡ ಮಾತೃಭಾಷೆಯಾಗಿಲ್ಲದವರಿಗೂ ಕನ್ನಡವನ್ನು ಕಡ್ಡಾಯವಾಗಿ ಕಲಿಸಬೇಕೆನ್ನುವ ಹಾಗೂ ಹೈಸ್ಕೂಲು ಹಂತದಲ್ಲಿ 125 ಅಂಕಗಳಿಗೆ ಕನ್ನಡವನ್ನು ಕಡ್ಡಾಯ ಪ್ರಥಮ ಭಾಷೆ ಮಾಡುವ ಕರ್ನಾಟಕ ಸರ್ಕಾರದ 1982ರ ಆಜ್ಞೆ ಸಂವಿಧಾನದ ಉಲ್ಲಂಘನೆ ಮಾಡಿದೆಯೆಂದು ಇತ್ತೀಚೆಗೆ ಕರ್ನಾಟಕ ಹೈಕೋರ್ಟ್ ತೀರ್ಪು ನೀಡಿದೆ. ಸಿ.ಪಿ.ಐ.(ಎಂ) ರಾಜ್ಯಸಮಿತಿ ಸದಸ್ಯ ಕಾಂ.ಎಸ್.ಆರ್.ಆರಾಧ್ಯ ಈ ತೀರ್ಪನ್ನು ಇಲ್ಲಿ ವಿಶ್ಲೇಷಿಸಿದ್ದಾರೆ.

1980 ರ ದಶಕದ ಪ್ರಾರಂಭದೊಂದಿಗೇ ರಾಜ್ಯದಲ್ಲಿ ಭಾಷಾ ವಿವಾದವೊಂದು ತಲೆ ಎತ್ತಿ ಅಲ್ಪ ಸಮಯದಲ್ಲೇ ವ್ಯಾಪಕ ಚಳುವಳಿಗೆ ಎಡೆಮಾಡಿ ಕೊಟ್ಟಿತ್ತು. ಶಾಲಾ ಶಿಕ್ಷಣದಲ್ಲಿ ಸಂಸ್ಕೃತ ಭಾಷೆಯ ಸ್ಥಾನ-ಮಾನದ ಕುರಿತು ಭಿನ್ನಾಭಿಪ್ರಾಯ ತಲೆದೋರಿ ಸರ್ಕಾರವು ಡಾ||ಗೋಕಾಕ್ ಆಯೋಗವನ್ನು ರಚಿಸಿ ಸದರಿ ಪ್ರಶ್ನೆಯನ್ನು ಪರಿಶೀಲಿಸಿ ಅಧ್ಯಯನ ಮಾಡಿ ವರದಿಯೊಂದನ್ನು ಸಲ್ಲಿಸಲು ಕೇಳಿಕೊಂಡಿತು. ಸಂಸ್ಕೃತ ವಿಷಯದ ಪಠ್ಯಕ್ರಮ ಬಹಳ ಸರಳವಾಗಿದ್ದ ಕಾರಣ ಕನ್ನಡ ಮಾತೃಭಾಷೆಯ ವಿದ್ಯಾರ್ಥಿಗಳೂ ಸಹಾ ಸುಲಭವಾಗಿ ಹೆಚ್ಚಿನ ಅಂಕಗಳನ್ನು ಗಳಿಸುವ ಉದ್ದೇಶದಿಂದ ಸಂಸ್ಕೃತವನ್ನು ಪ್ರಥಮ್ಯ ಭಾಷೆಯಾಗಿ ಸ್ವೀಕರಿಸುವ ಪ್ರವೃತ್ತಿ ಬಲವಾಗಿ ಬೆಳೆಯುತ್ತಿತ್ತು. ಇದರಿಂದ ಕನ್ನಡ ಭಾಷೆಯ ಕಲಿಕೆಗೆ ಪ್ರೋತ್ಸಾಹ ದೊರೆಯಲಾರದೆಂದು ಸಂಸ್ಕೃತ ಭಾಷೆಯನ್ನು ಪ್ರಥಮ ಭಾಷೆಗಳ ಪಟ್ಟಿಯಿಂದ ತೆಗೆದು ಹಾಕಬೇಕೆಂದು ತೀವ್ರ ಒತ್ತಾಯ ಬಂದಿತ್ತು. ಗೋಕಾಕ್ ಆಯೋಗವು ಇದೇ ಅಭಿಪ್ರಾಯವನ್ನು ಸಮರ್ಥಿಸುವುದರೊಂದಿಗೆ ಕನ್ನಡ ಭಾಷೆಯನ್ನು ಪ್ರೌಢಶಾಲೆಯ ಹಂತದಲ್ಲಿ 'ಏಕೈಕ ಪ್ರಥಮ ಭಾಷೆಯಾಗಿ ಕಡ್ಡಾಯಗೊಳಿಸಬೇಕೆಂಬ ಹೊಸ ಶಿಫಾರಸ್ಸೊಂದನ್ನು ಸಹ ನೀಡಿತು. ಈ ಹಿನ್ನಲೆಯಲ್ಲಿ ಗೋಕಾಕ್ ವರದಿಯನ್ನು ಜಾರಿಗೊಳಿಸಬೇಕೆಂದು ರಾಜ್ಯದಾದ್ಯಂತ ಪ್ರಬಲವಾದ ಚಳುವಳಿ ಬೆಳೆದು ಬಂದು ದಿ: 20-7-1982 ರಂದು ಸರ್ಕಾರಿ ಆಜ್ಞೆಯೊಂದು ಹೊರಬಿತ್ತು. ದಿ: 11-8-1982 ರಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರು ಆಜ್ಞೆಯ ಜಾರಿಗಾಗಿ ಸುತ್ತೋಲೆಯೊಂದನ್ನು ಸಹ ಹೊರಡಿಸಿದರು.

ಗೋಕಾಕ್ ಆಯೋಗವು 8ನೇ ತರಗತಿಯಿಂದ ಕನ್ನಡವನ್ನು 150 ಅಂಕಗಳಿಗೆ ಕಡ್ಡಾಯ ಪ್ರಥಮ ಭಾಷೆಯಾಗಿ ಪಠ್ಯಕ್ರಮದಲ್ಲಿ ಅಳವಡಿಸಿ 3ನೇ ತರಗತಿಯಿಂದಲೇ ಕನ್ನಡ ಮಾತೃ ಭಾಷೆಯಲ್ಲದ ವಿದ್ಯಾರ್ಥಿಗಳಿಗೆ ಕನ್ನಡ ಭಾಷೆಯ ಕಲಿಕೆಯ ಪ್ರಾರಂಭಿಸಬೇಕೆಂದು ಶಿಫಾರಸ್ಸು ನೀಡಿತ್ತೆಂಬುದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಆದರೆ ಸರ್ಕಾರವು ಕೆಲವೊಂದು ಮಾರ್ಪಾಡುಗಳನ್ನು ಮಾಡಿ ಒಂದನೇ ತರಗತಿಯಿಂದಲೇ ಕನ್ನಡ ಕಲಿಕೆಯನ್ನು ಕಡ್ಡಾಯವಾಗಿ ಪ್ರಾರಂಭಿಸುವ ಹಾಗೂ ಹೈಸ್ಕೂಲ್ ಮಟ್ಟದಲ್ಲಿ 125 ಅಂಕಗಳಿಗೆ ಕನ್ನಡವನ್ನು ಕಡ್ಡಾಯ ಪ್ರಥಮ ಭಾಷೆಯಾಗಿ ಅಳವಡಿಸಲು ನಿರ್ಧರಿಸಿದ ಪ್ರಕಾರ ಮೇಲ್ಕಾಣಿಸಿದ ಆಜ್ಞೆಯನ್ನು ಹೊರಡಿಸಿತ್ತು. ಸದರಿ ಆಜ್ಞೆಯ ಸಂವಿಧಾನ ಬದ್ಧತೆಯನ್ನು ಪ್ರಶ್ನಿಸಿ ಭಾಷಾ ಅಲ್ಪಸಂಖ್ಯಾತರ ಸಂರಕ್ಷಣಾ ಸಮಿತಿಯು ರಾಜ್ಯ ಹೈಕೋರ್ಟಿನಲ್ಲಿ ರಿಟ್ ಅರ್ಜಿಯೊಂದನ್ನು ಸಲ್ಲಿಸಿದ್ದು ಇತ್ತೀಚೆಗೆ ಸರ್ವಶ್ರೀ ರಾಮಾಜೋಯಿಸ್, ರಾಜೇಂದ್ರಬಾಬು ಹಾಗೂ ಬಾಲಕೃಷ್ಣ ರವರನ್ನೊಳಗೊಂಡ ಪೂರ್ಣಪೀಠವು ತನ್ನ ತೀರ್ಪನ್ನು ಪ್ರಕಟಿಸಿರುತ್ತದೆ.

ಮೂವರು ನ್ಯಾಯಾಧೀಶರ ಪೈಕಿ ಶ್ರೀ ಬಾಲಕೃಷ್ಣರವರು ಭಿನ್ನಮತ ವ್ಯಕ್ತಪಡಿಸಿದ್ದು ಬಹುಮತದ ಆಧಾರದಲ್ಲಿ ತೀರ್ಪನ್ನು ನೀಡಲಾಗಿದೆ. ಸರ್ಕಾರಿ ಆಜ್ಞೆಯು ಭಾಷಾ ಅಲ್ಪಸಂಖ್ಯಾತ ವಿಭಾಗಗಳಿಗೆ ಸೇರಿದ ಮಕ್ಕಳಿಗೆ ಪ್ರಾಥಮಿಕ ಹಂತದಲ್ಲೇ ಕನ್ನಡ ಭಾಷೆಯನ್ನು ಕಡ್ಡಾಯ ವಿಷಯವಾಗಿಯೂ ಹಾಗೂ ಪ್ರೌಢಶಾಲೆಯ ಹಂತದಲ್ಲಿ 'ಏಕೈಕ ಪ್ರಥಮ ಭಾಷೆಯಾಗಿ ಕಡ್ಡಾಯ ಪಡಿಸುವುದರಿಂದ ಮತ್ತು ಭಾಷಾ ಅಲ್ಪಸಂಖ್ಯಾತರ ವಿದ್ಯಾ ಸಂಸ್ಥೆಗಳಲ್ಲೂ ಇದೇ ಸೂತ್ರವನ್ನು ಅಳವಡಿಸುವುದರಿಂದ ಸಂವಿಧಾನದ 29 (1) 3 0 (1) ಹಾಗೂ 14ನೇ ವಿಧಿಗಳ ಉಲ್ಲಂಘನೆಯಾಗುವುದೆಂದು ಪೂರ್ಣಪೀಠವು ಅಭಿಪ್ರಾಯಪಟ್ಟಿರುತ್ತದೆ. ಇದೇ ಕಾರಣಗಳಿಂದಾಗಿ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರ ಸುತ್ತೋಲೆಯೂ ಸಂವಿಧಾನದ ಮೇಲ್ಕಾಣಿಸಿದ ವಿಧಿಗಳ ಉಲ್ಲಂಘಿಸುವುದೆಂದು ತಿಳಿಸಲಾಗಿದೆ. ಶ್ರೀ ಬಾಲಕೃಷ್ಣ ರವರು ಸದರಿ ಆಜ್ಞೆಯು ಸಂವಿಧಾನದ ಯಾವುದೇ ನಿಯಮಗಳನ್ನು ಉಲ್ಲಂಘಿಸುವುದಿಲ್ಲವೆಂದು ಪ್ರತಿಪಾದಿಸಿರುತ್ತಾರೆ.

ಇದೇ ಸಂದರ್ಭದಲ್ಲಿ ಸರ್ಕಾರವು ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಸರ್ವೇಸಾಮಾನ್ಯವಾಗಿಯೂ ತರಗತಿಯ ಮಟ್ಟದಿಂದ ಮಾತೃಭಾಷೆಯೊಂದಿಗೆ ಮತ್ತೊಂದು ಭಾಷೆಯನ್ನು ಕಲಿಸಲಾಗುತ್ತಿದೆಯೋ ಆ ತರಗತಿಯಿಂದ ಕನ್ನಡವನ್ನು ಎರಡು ಭಾಷೆಗಳಲ್ಲೊಂದಾಗಿ ಅಳವಡಿಸಬಹುದೆಂದು ಪೂರ್ಣಪೀಠವು ಸೂಚಿಸಿರುತ್ತದೆ. ಇದರೊಂದಿಗೆ ಪ್ರೌಢಶಾಲೆಗಳಲ್ಲಿ ಕನ್ನಡವನ್ನು ಮೂರು ಭಾಷೆಗಳಲ್ಲೊಂದಾಗಿ ಕಡ್ಡಾಯ ಪಡಿಸಬಹುದೆಂದು ಸಹ ಅಭಿಪ್ರಾಯ ಪಡಲಾಗಿದೆ.

ಗೋಕಾಕ್ ಆಯೋಗದ ಶಿಫಾರಸ್ಸಿನ ಹಿನ್ನಲೆಯಲ್ಲಿ ಇತರೆ ರಾಜ್ಯಗಳಲ್ಲಿ ಯಾವ ನಿಯಮಾವಳಿಯನ್ನು ಅನುಸರಿಸಲಾಗುತ್ತಿದೆಯೆಂಬ ಕುರಿತು ಮಾಹಿತಿ ಪಡೆಯಲು ನ್ಯಾಯಾಲಯವು ಸರ್ಕಾರಕ್ಕೆ ನೀಡಿದ ನಿರ್ದೇಶನದ ಮೇರೆಗೆ ಕೆಳಕಂಡ ಅಂಶಗಳು ಬೆಳಕಿಗೆ ಬಂದಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ.

1' ಕೇರಳ, ಆಂಧ್ರಪ್ರದೇಶ ಮತ್ತು ತಮಿಳುನಾಡು ಮುಂತಾದ ರಾಜ್ಯಗಳ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳು ಪ್ರಾದೇಶಿಕ ಭಾಷೆ ಅಥವಾ ಮಾತೃಭಾಷೆಯನ್ನು ಕಲಿಯಬಹುದಾಗಿದೆ.

(ಅ) ಪ್ರಾದೇಶಿಕ ಭಾಷೆಯನ್ನು ಕಡ್ಡಾಯ ವಿಷಯವಾಗಿ ಅಳವಡಿಸಿಲ್ಲವಾದ್ದರಿಂದ ಭಾಷಾ ಅಥವಾ ಧಾರ್ಮಿಕ ಅಲ್ಪ ಸಂಖ್ಯಾತರು ಸ್ಥಾಪಿಸಿದ ಶಾಲೆಗಳಲ್ಲಿಯೂ ರಾಜ್ಯದ ಅಧಿಕೃತ ಮತ್ತು-ಅಥವಾ ಪ್ರಾದೇಶಿಕ ಭಾಷೆಯನ್ನು ಭಾಷಾ ಅಲ್ಪ ಸಂಖ್ಯಾತರ ಮಕ್ಕಳಿಗೆ ತಮ್ಮ ಮಾತೃಭಾಷೆಯೊಂದಿಗೆ ಕಡ್ಡಾಯವಾಗಿ ಕಲಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

(ಆ) ಇತರೆ ಸರ್ಕಾರಿ ಅಥವಾ ಸರ್ಕಾರದ ಮಾನ್ಯತೆ ಪಡೆದ ಪ್ರಾಥಮಿಕ ಶಾಲೆಗಳಿಗೆ ಮೇಲ್ಕಾಣಿಸಿದ ನಿಯಮವು ಅನ್ವಯಿಸುತ್ತದೆ.

2' ಕೇರಳ ರಾಜ್ಯವು ಪ್ರೌಢಶಾಲೆಯ ಮಟ್ಟದಲ್ಲಿ ತ್ರಿಭಾಷಾ ಸೂತ್ರವನ್ನು ಅನುಸರಿಸುತ್ತಿದೆ. ಪ್ರಥಮ ಭಾಷೆಗಳ ಪಟ್ಟಿಯ 'ಎ' ಗುಂಪಿನಲ್ಲಿ ಒಂಬತ್ತು ಭಾಷೆಗಳಿರುತ್ತವೆ. (ಮಲಯಾಳಂ, ತಮಿಳು, ಕನ್ನಡ, ಸಂಸ್ಕೃತ, ಅರಾಬಿಕ್, ಹಿಂದಿ, ಗುಜರಾತಿ, ಉರ್ದು, ಅಡಿಷನಲ್ ಇಂಗ್ಲೀಷ್)

—ಎಸ್.ಆರ್.ಆರಾಧ್ಯ.

(ಅ) 'ಬಿ' ಗುಂಪಿನಲ್ಲಿ (ಭಾಷಾ ಮತ್ತು-ಅಥವಾ ಧಾರ್ಮಿಕ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಅನ್ವಯ) ಮಲಯಾಳಂ, ತಮಿಳು, ಕನ್ನಡ ಮತ್ತು ಸ್ಪೆಷಲ್ ಇಂಗ್ಲೀಷ್ ಭಾಷೆಗಳನ್ನೂ ಸೇರಿಸಲಾಗಿದೆ.

> ಕೇರಳ, ಆಂಧ್ರಪ್ರದೇಶ, ತಮಿಳುನಾಡುಗಳಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಪ್ರಾದೇಶಿಕ ಭಾಷೆ ಕಡ್ಡಾಯ ವಿಷಯವಲ್ಲ. ಹೈಸ್ಕೂಲು ಹಂತದಲ್ಲಿ ದ್ವಿಭಾಷಾ ಸೂತ್ರವಿರುವ ತಮಿಳುನಾಡು ಹಾಗೂ ತ್ರಿಭಾಷಾ ಸೂತ್ರವಿರುವ ಆಂಧ್ರಪ್ರದೇಶದಲ್ಲಿ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆ ಪ್ರಥಮ ಭಾಷೆಯಾಗಿರುತ್ತದೆ. ಕೇರಳದಲ್ಲಿ ಪ್ರಥಮ ಭಾಷೆಯ ಎರಡು ಪಟ್ಟಿಗಳಿವೆ. ಮಹಾರಾಷ್ಟ್ರದಲ್ಲಿ ಮಾಧ್ಯಮದ ಭಾಷೆ ಮತ್ತು ಪ್ರಥಮ ಭಾಷೆ ಒಂದೇ ಆಗಿರುತ್ತದೆ.
>
> ಇದು ಇತರ ರಾಜ್ಯಗಳಲ್ಲಿನ ಸ್ಥಿತಿಯ ಮಾಹಿತಿ ಪಡೆಯಬೇಕೆಂದು ನ್ಯಾಯಾಲಯ ಸರ್ಕಾರಕ್ಕೆ ನೀಡಿದ ನಿರ್ದೇಶನದಿಂದ ತಿಳಿದು ಬಂದ ಸಂಗತಿ.

(ಆ) ಇತರೆ ಸರ್ಕಾರಿ ಅಥವಾ ಸರ್ಕಾರದ ಮಾನ್ಯತೆ ಪಡೆದ ಪ್ರೌಢ ಶಾಲೆಗಳಿಗೆ ಸಂಬಂಧಿಸಿದಂತೆ ತಮಿಳುನಾಡಿನಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಮಟ್ಟದಲ್ಲಿ ದ್ವಿಭಾಷಾ ಸೂತ್ರವನ್ನು ಅನುಸರಿಸಲಾಗುತ್ತಿದೆ. ಪ್ರಥಮ ಭಾಷೆಯು ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯಾಗಿರುತ್ತದೆ. ಆಂಧ್ರಪ್ರದೇಶದಲ್ಲಿ ಪ್ರೌಢಶಾಲಾ ಮಟ್ಟದಲ್ಲಿ ತ್ರಿಭಾಷಾ ಸೂತ್ರವು ಅಸ್ತಿತ್ವದಲ್ಲಿರುತ್ತದೆ. ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆ ಪ್ರಥಮ ಸೂತ್ರವು ಜಾರಿಯಲ್ಲಿದ್ದು ವಿದ್ಯಾರ್ಥಿಯು ಯಾವ ಮಾಧ್ಯಮವನ್ನು ಸ್ವೀಕರಿಸುವನೆಂಬುದರ ಮೇಲೆ ಮೂರು ಭಾಷೆಗಳನ್ನು ಆಯ್ಕೆ ಮಾಡಿಕೊಳ್ಳಬಹುದಾಗಿರುತ್ತದೆ. ವಿದ್ಯಾರ್ಥಿಯ ಮಾಧ್ಯಮ ಭಾಷೆ ಮತ್ತು ಪ್ರಥಮ ಭಾಷೆ ಒಂದೇ ಆಗಿರುತ್ತದೆ.

ಹೈಕೋರ್ಟ್ ತೀರ್ಪಿನ ಮೇಲೆ ಸುಪ್ರೀಂ ಕೋರ್ಟಿಗೆ ಮನವಿ ಸಲ್ಲಿಸುವುದಾಗಿ ಆಗ ಸಚಿವರಾಗಿದ್ದ ಶ್ರೀ ಎಂ.ಪಿ. ಪ್ರಕಾಶ್ ರವರು ತಿಳಿಸಿದ್ದು ಅಂತಿಮವಾಗಿ ದೇಶದ ಅತ್ಯುನ್ನತ ನ್ಯಾಯಾಲಯದ ತೀರ್ಪಿಗೆ ಬದ್ಧವಾಗಬೇಕಾಗುವುದೆಂದು ಸಹ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದರು. ಕಳೆದ ಫೆಬ್ರವರಿ 23 ರಂದು ಬೆಂಗಳೂರು ವಿಶ್ವವಿದ್ಯಾಲಯದ ಸೆನೆಟ್ ಸಭಾಂಗಣದಲ್ಲಿ 'ಜನಪರ ಸಾಹಿತ್ಯ ಪರಿಷತ್' ವೇದಿಕೆಯ ಆಶ್ರಯದಲ್ಲಿ ಹೈಕೋರ್ಟ್ ತೀರ್ಪಿನ ಕುರಿತು ವಿಚಾರ ಗೋಷ್ಠಿಯನ್ನು ಏರ್ಪಡಿಸಲಾಗಿತ್ತು. ಈ ಹಿನ್ನಲೆಯಲ್ಲಿ ಕರ್ನಾಟಕದಲ್ಲಿ ಅನುಸರಿಸಬೇಕಾದ ಭಾಷಾ ನೀತಿಯ ಬಗ್ಗೆ ಗಂಭೀರವಾಗಿ ಪರಿಶೀಲಿಸಬೇಕಾಗಿದೆ.

ಸಿಪಿಐ (ಎಂ) ಪಕ್ಷದ ಕಾರ್ಯಕ್ರಮವು ಜನತಾ ಪ್ರಜಾಪ್ರಭುತ್ವ ಸರ್ಕಾರ ಅನುಸರಿಸಬಹುದಾದ ಭಾಷಾ ನೀತಿಯ ಬಗ್ಗೆ ಈ ರೀತಿ ಹೇಳುತ್ತದೆ.

"ಸಂಸತ್ತಿನಲ್ಲಿ ಮತ್ತು ಕೇಂದ್ರದ ಆಡಳಿತದಲ್ಲಿ ಎಲ್ಲಾ ರಾಷ್ಟ್ರೀಯ ಭಾಷೆಗಳ ಸಮಾನತೆಯನ್ನು ಮಾನ್ಯ ಮಾಡಲಾಗುತ್ತದೆ. ಸದಸ್ಯರು ಯಾವ ರಾಷ್ಟ್ರೀಯ ಭಾಷೆಯಲ್ಲಾದರೂ ಮಾತನಾಡುವ ಹಕ್ಕು ಪಡೆದಿರುತ್ತಾರೆ. ಅದೇ ವೇಳೆಯಲ್ಲಿಯೇ ಇತರೆ ರಾಷ್ಟ್ರೀಯ ಭಾಷೆಗಳಲ್ಲಿ ಅನುವಾದವನ್ನು ಒದಗಿಸಲಾಗುತ್ತದೆ. ಎಲ್ಲಾ ಕಾಯಿದೆಗಳು, ಸರ್ಕಾರಿ ಆದೇಶಗಳು ಮತ್ತು ನಿರ್ಣಯಗಳನ್ನು ಎಲ್ಲಾ ರಾಷ್ಟ್ರೀಯ ಭಾಷೆಗಳಲ್ಲೂ ಒದಗಿಸಲಾಗುತ್ತದೆ. ಆಡಳಿತ ಭಾಷೆಯಾಗಿ ಹಿಂದಿಯ ಬಳಕೆಯನ್ನು ಒತ್ತಾಯಿಸುವುದಿಲ್ಲ. ಬೆಳೆಯುತ್ತಿರುವ ಆರ್ಥಿಕ-ಸಾಮಾಜಿಕ-ಬೌದ್ಧಿಕ ಸಂಪರ್ಕಗಳಲ್ಲಿ ಭಾರತದ ವಿವಿಧ ರಾಜ್ಯಗಳ ಜನರು ಬಳಕೆಯಿಂದ ತಮ್ಮ ಅಗತ್ಯಗಳಿಗೆ ಸೂಕ್ತವಾದ ಪರಸ್ಪರ ಸಂಪರ್ಕದ ಭಾಷೆಯನ್ನು ಅಭಿವೃದ್ಧಿಪಡಿಸಿಕೊಳ್ಳುತ್ತಾರೆ. ಆಡಳಿತ, ಶಾಸಕಾಂಗ, ನ್ಯಾಯಾಂಗ ಮತ್ತು ಶಿಕ್ಷಣ ಮಾಧ್ಯಮದಲ್ಲಿ ಇಂಗ್ಲೀಷಿನ ಬಳಕೆಯನ್ನು ಕೈಬಿಡಲಾಗುತ್ತದೆ ಮತ್ತು ಅದರ ಸ್ಥಾನದಲ್ಲಿ ರಾಷ್ಟ್ರೀಯ ಭಾಷೆಗಳು ಬರುತ್ತವೆ. ಶಿಕ್ಷಣ ಸಂಸ್ಥೆಗಳಲ್ಲಿ ಜನರು ತಮ್ಮ ತಾಯ್ನುಡಿಯಲ್ಲಿ ಶಿಕ್ಷಣ ಪಡೆಯುವ ಹಕ್ಕು; ಎಲ್ಲಾ ಸಾರ್ವಜನಿಕ ಮತ್ತು ಸರ್ಕಾರಿ ಸಂಸ್ಥೆಗಳ ಆಡಳಿತದಲ್ಲಿ ಆಯಾ ಭಾಷಾ ಪ್ರಾಂತದ ರಾಷ್ಟ್ರೀಯ ಭಾಷೆಯ ಬಳಕೆ; ಅತ್ಯುನ್ನತ ಮಟ್ಟದವರೆಗೆ ಅದನ್ನೇ ಶಿಕ್ಷಣ ಮಾಧ್ಯಮವಾಗಿ ಬಳಸುವುದು: ರಾಜ್ಯದ ಭಾಷೆಯೊಂದಿಗೆ ಅಗತ್ಯವಿರುವ ಕಡೆ ಅಲ್ಪಸಂಖ್ಯಾತರ ಅಥವಾ ಪ್ರಾದೇಶಿಕ ಭಾಷೆಯನ್ನು ಬಳಸುವ ಅವಕಾಶಗಳನ್ನು ಅನುಷ್ಠಾನಕ್ಕೆ ತರಲಾಗುತ್ತದೆ. ಉರ್ದು ಭಾಷೆ ಮತ್ತು ಲಿಪಿಯನ್ನು ರಕ್ಷಿಸಲಾಗುತ್ತದೆ.

1974 ರಲ್ಲಿ ಕಲ್ಕತ್ತದಲ್ಲಿ ಜರುಗಿದ ಎಸ್.ಎಫ್.ಐ. 2ನೇ ಅಖಿಲ ಭಾರತ ಸಮ್ಮೇಳನವು ವೈಜ್ಞಾನಿಕ ಮತ್ತು ಪ್ರಜಾಸತ್ತಾತ್ಮಕ ಶಿಕ್ಷಣ ನೀತಿಯ ಬಗ್ಗೆ ಒಂದು ವಿಶೇಷ ನಿರ್ಣಯವನ್ನು ಅಂಗೀಕರಿಸಿರುತ್ತದೆ. ಈ ದಸ್ತಾವೇಜಿನಲ್ಲಿ ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಮಾತೃಭಾಷೆಯ ಮಾಧ್ಯಮದಲ್ಲಿ ಶಿಕ್ಷಣವನ್ನು ನೀಡಬೇಕು: ಮಾತೃಭಾಷೆಯಲ್ಲದೆ, ಬೇರೆ ಯಾವುದೇ ಎರಡನೆಯ ಭಾಷೆಯ ಕಲಿಕೆಯ ಹೊರೆಯನ್ನು ಹೇರಬಾರದೆಂದು ಸ್ಪಷ್ಟಪಡಿಸಲಾಗಿದೆ. ಪ್ರೌಢಶಾಲೆಯ ಹಂತದಲ್ಲಿ ಮಾತೃಭಾಷೆಯಲ್ಲದೆ, ಒಂದು ಅಥವಾ ಎರಡು ಭಾಷೆಗಳನ್ನು ಕಲಿಯುವುದು ಐಚ್ಛಿಕವಾಗಿರಬೇಕೆಂದು ಹೇಳುತ್ತದೆ. ಪದವಿ ಪೂರ್ವ ಶಿಕ್ಷಣದ ಹಂತದಲ್ಲಿ ವಿದ್ಯಾರ್ಥಿಯು ತಾನು ಆಯ್ದುಕೊಂಡ ವಿಷಯಗಳಲ್ಲಿ ವಿಶೇಷ ಪರಿಣತಿ ಸಾಧಿಸಲು ಅನುವು ಮಾಡಿಕೊಡಲು ಪಠ್ಯಕ್ರಮದಲ್ಲಿ ಭಾಷಾ ವಿಷಯಗಳನ್ನು ಸಂಪೂರ್ಣವಾಗಿ ತೆಗೆದು ಹಾಕಬೇಕೆಂದು ಅಭಿಪ್ರಾಯ ಪಡಲಾಗಿದೆ. ತ್ರಿಭಾಷಾ ಸೂತ್ರವನ್ನು ರದ್ದುಗೊಳಿಸ ಬೇಕೆಂದು ಸಹ ಒತ್ತಾಯಿಸಲಾಗಿದೆ. ವಿಶ್ವ ವಿದ್ಯಾಲಯ ಹಂತದವರೆಗಿನ ಎಲ್ಲಾ ರೀತಿಯ ಶಿಕ್ಷಣ ಮಾಧ್ಯಮವು ವಿದ್ಯಾರ್ಥಿಯ ಮಾತೃಭಾಷೆ, ಪ್ರಾದೇಶಿಕ ಅಥವಾ ರಾಜ್ಯ ಭಾಷೆಯಾಗಿರಬೇಕು.

ಮೇಲಿನ ಎಲ್ಲಾ ಅಂಶಗಳನ್ನೂ ಸಮಗ್ರವಾಗಿ ಪರಿಶೀಲಿಸಿದರೆ ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಮಕ್ಕಳಿಗೆ ಎರಡನೆಯ ಭಾಷೆಯೊಂದರ ಕಲಿಕೆಯ ಹೊರೆಯನ್ನು ಹೇರುವುದು ಸೂಕ್ತವಲ್ಲವೆಂಬುದು ಸ್ಪಷ್ಟವಾಗುತ್ತದೆ. ಈ ಹಂತದಲ್ಲಿ ಮಕ್ಕಳು ತಮ್ಮ ಮಾತೃಭಾಷೆಯ ಕಲಿಕೆಯಲ್ಲಿ ಹೆಚ್ಚಿನ ಪರಿಣತಿ ಸಾಧಿಸಲು ಸಂಪೂರ್ಣ ಅವಕಾಶ ನೀಡುವುದು ಅಗತ್ಯವಾಗಿದೆ. ಇತ್ತೀಚೆಗೆ ಪಶ್ಚಿಮ ಬಂಗಾಳ ಎಡರಂಗ ಸರ್ಕಾರವು ಪ್ರಾಥಮಿಕ ಶಾಲೆಗಳ ಪಠ್ಯಕ್ರಮದಿಂದ ಇಂಗ್ಲೀಷ್ ಭಾಷೆಯ ಕಲಿಕೆಯನ್ನು ರದ್ದುಗೊಳಿಸಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ. ಆದ್ದರಿಂದ ಭಾಷಾ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಒಂದನೇ ತರಗತಿಯಿಂದಲೇ ಮಾತೃಭಾಷೆಯ ಜೊತೆಯಲ್ಲಿ ಕನ್ನಡ ಭಾಷೆಯ ಕಲಿಕೆಯನ್ನು ಸಹ ಒತ್ತಾಯಿಸುವುದು ಅವೈಜ್ಞಾನಿಕ ಹಾಗೂ ತಾರತಮ್ಯ ನೀತಿಯಾಗುತ್ತದೆ. ಇದೇ ರೀತಿಯಲ್ಲಿ 8ನೇ ತರಗತಿಯಿಂದ ಕನ್ನಡ ಭಾಷೆಯನ್ನು 'ಏಕೈಕ ಪ್ರಥಮ ಭಾಷೆಯಾಗಿ ಕಡ್ಡಾಯ ಪಡಿಸುವುದು ಭಾಷಾ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಕನ್ನಡ ಮಾತೃಭಾಷೆಯಾಗಿರುವ ವಿದ್ಯಾರ್ಥಿಗಳೊಂದಿಗೆ ಅಸಮಾನ ಸ್ಪರ್ಧೆಗೆ ಇಳಿಯಬೇಕಾಗುವುದಲ್ಲದೆ ತಮ್ಮದೇ ಮಾತೃಭಾಷೆಯನ್ನು ಪ್ರಥಮ ಭಾಷೆಯಾಗಿ ಕಲಿಯುವ ಅವಕಾಶ ನಿರಾಕರಿಸಿದಂತಾಗುತ್ತದೆ. ಇದರಿಂದಾಗಿ ರಾಜ್ಯ ಹೈಕೋರ್ಟಿನ ತೀರ್ಪು ಸಮಂಜಸವೂ ಹಾಗೂ ಸಂವಿಧಾನಬದ್ಧವೂ ಆಗಿದೆಯೆಂದು ಹೇಳಬಹುದಾಗಿದೆ.

ರಾಜ್ಯ ಹೈಕೋರ್ಟ್ ನಿರ್ದೇಶಕ್ಕನುಗುಣವಾಗಿ ಮಾಧ್ಯಮಿಕ ಹಂತದಿಂದ (5ನೇ ತರಗತಿಯಿಂದ) ಕನ್ನಡ ಭಾಷೆಯ ಕಲಿಕೆಯನ್ನು ಪ್ರಾರಂಭಿಸುವುದು ಸೂಕ್ತವೆನಿಸುತ್ತದೆ. ಪ್ರೌಢಶಾಲೆಯ ಮಟ್ಟದಲ್ಲಿ ಮೂರು ಭಾಷೆಗಳಲ್ಲಿ ಯಾವುದಾದರೂ ಒಂದು ಭಾಷೆಯಾಗಿ ಕಡ್ಡಾಯಗೊಳಿಸಬಹುದೆಂದು ಸೂಚಿಸಲಾಗಿದೆ. ಕರ್ನಾಟಕದಲ್ಲಿ ನೆಲೆಸಿರುವ ಅಥವಾ ನೆಲೆಸಲು ಬಯಸುವ ಭಾಷಾ ಅಲ್ಪ ಸಂಖ್ಯಾತರು ತಮ್ಮ ಹಿತರಕ್ಷಣೆಗಾಗಿಯೂ ಹಾಗೂ ಸಾಮಾಜಿಕ ಸಾಮರಸ್ಯದ ದೃಷ್ಟಿಯಿಂದಲೂ ರಾಜ್ಯದ ಜನಜೀವನದಲ್ಲಿ ಬೆರೆಯಲು ಕನ್ನಡ ಭಾಷೆಯನ್ನು ಕಲಿಯುವಂತೆ ಪ್ರೋತ್ಸಾಹಿಸಬೇಕಾಗಿದೆ. ಆದರೆ ಇದೇ ಸಂದರ್ಭದಲ್ಲಿ ಭಾಷಾ ಅಲ್ಪಸಂಖ್ಯಾತರ ಸಂವಿಧಾನ ಬದ್ಧ ಹಕ್ಕುಗಳಿಗೆ ಯಾವುದೇ ರೀತಿಯಲ್ಲೂ ಚ್ಯುತಿ ಬಾರದಂತೆ ಎಚ್ಚರ ವಹಿಸಬೇಕಾಗಿದೆ. ಯಾವುದೇ ಒಂದು

6 ನೇ ಪುಟಕ್ಕೆ

> ಕರ್ನಾಟಕದಲ್ಲಿ ನೆಲೆಸಿರುವ ಅಥವಾ ನೆಲೆಸಲು ಬಯಸುವ ಭಾಷಾ ಅಲ್ಪಸಂಖ್ಯಾತರು ತಮ್ಮ ಹಿತರಕ್ಷಣೆಗಾಗಿ ಮತ್ತು ರಾಜ್ಯದ ಜನಜೀವನದಲ್ಲಿ ಬೆರೆಯಲು ಕನ್ನಡ ಭಾಷೆ ಕಲಿಯುವಂತೆ ಪ್ರೋತ್ಸಾಹಿಸಬೇಕು. ಆದರೆ ಇದೇ ಸಂದರ್ಭದಲ್ಲಿ ಅವರ ಸಂವಿಧಾನ ಬದ್ಧ ಹಕ್ಕುಗಳಿಗೆ ಚ್ಯುತಿ ಬಾರದಂತೆ ಎಚ್ಚರಿಕೆ ವಹಿಸಬೇಕು.

ರಾಷ್ಟ್ರಪತಿ ಆಡಳಿತದಲ್ಲಿ ಹೆಚ್ಚಿದ ಪೊಲೀಸ್ ದಬ್ಬಾಳಿಕೆ

ಸುಮಾರು 7 ತಿಂಗಳಿನಿಂದಲೂ ಅಕ್ರಮ ಬೀಗಮುದ್ರೆಯಾಗಿ 7.000 ಸಾವಿರಕ್ಕೂ ಅಧಿಕ ಕಾರ್ಮಿಕರನ್ನು ಹಾಗೂ ಅವರ ಕುಟುಂಬವನ್ನು ಬೀದಿಪಾಲು ಮಾಡಿರುವ ಭಿನ್ನಿಮಿಲ್ ಆಡಳಿತವರ್ಗದ ಕಾರ್ಮಿಕ ವಿರೋಧಿ ನೀತಿಯನ್ನು ಹಾಗೂ ಸರ್ಕಾರದ ನೀತಿಯನ್ನು ಖಂಡಿಸಿ ಕೂಡಲೇ ಮಧ್ಯಪ್ರವೇಶಿಸಿ ಕಾರ್ಖಾನೆ ಬೀಗ ಮುದ್ರೆ ತೆಗೆಯುವಂತೆ ಒತ್ತಾಯಿಸಿ ಸಿ.ಐ.ಟಿ.ಯು ನೇತೃತ್ವದಲ್ಲಿ ನೂರಾರು ಜನ ಕಾರ್ಮಿಕರು ನಗರದ ಮೈಸೂರು ಬ್ಯಾಂಕ್ ವೃತ್ತದಿಂದ ಮೆರವಣಿಗೆ ನಡೆಸಿದರು.

ಶಾಂತ ರೀತಿಯಲ್ಲಿ ಮೆರವಣಿಗೆಯಲ್ಲಿ ಸಾಗಿ ಬರುತ್ತಿದ್ದ ಕಾರ್ಮಿಕರನ್ನು ಕೆ.ಆರ್. ವೃತ್ತದ ಬಳಿ ಪೊಲೀಸರು ತಡೆದು ರಾಜ್ಯಪಾಲರಿಗೆ ಮನವಿಸಲ್ಲಿಸಲು ಬಿಡದೆ ಸಿ.ಐ.ಟಿ.ಯು. ನಾಯಕ ಹಾಗೂ ಬಿನ್ನಿ ಕಾರ್ಮಿಕ ಸಂಘದ ಅಧ್ಯಕ್ಷ ಕಾ॥ಕೆ.ಎಸ್. ಸುಬ್ರಮಣ್ಯಂ ಹಾಗೂ ಉಪಾಧ್ಯಕ್ಷ ಕಾ॥ ಆರ್.ಶ್ರೀನಿವಾಸ್‌ರವರ ಮೇಲೆ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿರುವುದನ್ನು ಬಿನ್ನಿ ಕಾರ್ಮಿಕರ ಸೌಹಾರ್ದ ಸಮಿತಿ ಸಂಚಾಲಕ ಕಾ॥ಕೆ.ವಿ.ಶ್ರೀನಿವಾಸ್‌ರವರು ತೀವ್ರವಾಗಿ ಖಂಡಿಸಿದ್ದಾರೆ.

ರಾಜಭವನದ ಮುಂದೆ ಧರಣಿ ನಡೆಸಿ ಮನವಿ ಸಲ್ಲಿಸುವಂತಹ ಪ್ರಜಾಪ್ರಭುತ್ವ ಹಕ್ಕುಗಳಿಗೂ ಅವಕಾಶ ನೀಡದೆ ದಮನ ಮಾಡುವ ಪೊಲೀಸ್ ದೌರ್ಜನ್ಯವನ್ನು ಕಾರ್ಮಿಕ ವರ್ಗ ಒಗ್ಗಟಿನಿಂದ ಮತ್ತು ದೃಢವಾಗಿ ಎದುರಿಸಬೇಕೆಂದು ಅವರು ಕರೆನೀಡಿದ್ದಾರೆ. ರಾಷ್ಟ್ರಪತಿ ಆಡಳಿತ ರಾಜ್ಯದಲ್ಲಿ ಜಾರಿಯಾದ ಮೇಲೆ ಪೊಲೀಸ್ ದೌರ್ಜನ್ಯ ಹೆಚ್ಚಿರುವುದರ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿ ಕರ್ನಾಟಕದ ಜನತೆಗೆ ಮುಂದೆ ಏನು ಕಾದಿದೆ ಎಂಬುದನ್ನು ಇದು ಎತ್ತಿತೋರಿಸುತ್ತದೆ ಎಂದು ಅವರು ಎಚ್ಚರಿಸಿ ಇಂತಹ ಸರ್ವಾಧಿಕಾರಿ ಪ್ರವೃತ್ತಿಯ ಕಾಂಗ್ರೆಯನ್ನು ಮುಂದಿನ ಚುನಾವಣೆಗಳಲ್ಲಿ ಸೋಲಿಸುವಂತೆ ಅವರು ಕರೆ ನೀಡಿದ್ದಾರೆ.

ಸೌಹಾರ್ದ ಬೆಂಬಲ

ಬಿನ್ನಿಮಿಲ್ ತೆರೆಯುವಂತೆ ರಾಜ್ಯಪಾಲರನ್ನು ಆಗ್ರಹಿಸಿ ಮೆರವಣಿಗೆಯಲ್ಲಿ ಶಾಂತಿಯುತವಾಗಿ ತೆರಳುತ್ತಿದ್ದ ಕಾರ್ಮಿಕರ ಮೇಲೆ ನಡೆಸಿದ ಪೊಲೀಸ್ ದಬ್ಬಾಳಿಕೆಯನ್ನು ಬೆಂಗಳೂರು ನಾರ್ತ್ ಇಂಡಸ್ಟ್ರೀಯಲ್ ಕಾರ್ಮಿಕರ ಸಂಘ ಖಂಡಿಸಿ ಬಿನ್ನಿ ಕಾರ್ಮಿಕರ ಹೋರಾಟಕ್ಕೆ ತನ್ನ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದೆ. ಮಾಲೀಕರು ಹಠಮಾರಿ ಧೋರಣೆ ಬಿಟ್ಟು ಬೇಕರತ್ತಾಗಿ ತೆರೆಯುವಂತೆ ಮಧ್ಯಪ್ರವೇಶ ಮಾಡಬೇಕೆಂದು ರಾಜ್ಯಪಾಲರನ್ನು ಸಂಘ ಒತ್ತಾಯಿಸುತ್ತದೆ ಎಂದು ಪ್ರಧಾನ ಕಾರ್ಯದರ್ಶಿ ಕಾ॥ ಎ.ಎಂ.ಜಾನ್ ವಿನ್ಸೆಂಟ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಫೀಡ್ಸ್ ಕಾರ್ಮಿಕರ ಬೆಂಬಲ

ಬಿನ್ನಿ ಕಾರ್ಮಿಕರ ನ್ಯಾಯ ಸಮ್ಮತ ಬೇಡಿಕೆಗಳನ್ನು ಈಡೇರಿಸಬೇಕೆಂದು ಉಚ್ಛನ್ಯಾಯಾಲಯದ ತೀರ್ಪಾಗಿ 2 ತಿಂಗಳು ಕಳೆದಿದ್ದರೂ ಅದನ್ನು ತಿರಸ್ಕರಿಸಿ ಕಾರ್ಖಾನೆ ಬೀಗ ಮುದ್ರೆ ತೆರೆಯದೇ ಕಾರ್ಮಿಕರಿಗೆ ದ್ರೋಹಬಗೆದಿರುವ ಮಾಲೀಕರ ಮೇಲೆ ಕ್ರಮಕೈಗೊಂಡು ಬಿನ್ನಿ ಕಾರ್ಮಿಕರಿಗೆ ನ್ಯಾಯದೊರಕಿಸುವಂತೆ ಬೆಂಗಳೂರು ನಗರದ ಮೈಸೂರು ರಸ್ತೆಯಲ್ಲಿರುವ ಮೈಸೂರು ಫೀಡ್ಸ್ ಕಾರ್ಮಿಕರ ಸಂಘ ರಾಜ್ಯಪಾಲರನ್ನು ಒತ್ತಾಯಿಸಿದೆ.

ಬೀಡಿ ಕಾರ್ಮಿಕರ ನಾಯಕ ಅಬ್ದುಲ್ ಮಜೀದ್ ಮೇಲೆ ಗೂಂಡಾ ಹಲ್ಲೆ.

ಬೀಡಿ ಕೈಗಾರಿಕೆಯಲ್ಲಿ ಕಾಂಟ್ರಾಕ್ಟ್ ಪದ್ಧತಿ ರದ್ದುಗೊಳಿಸಬೇಕೆಂದು ಆಗ್ರಹಿಸಿ ಏಪ್ರಿಲ್ 18ರಂದು ನೀಡಿದ ಮುಷ್ಕರದ ಕರೆಯಂತೆ ಕೋಲಾರದಲ್ಲಿ ಮುಷ್ಕರ ನಿರತ ಸಂದರ್ಭದಲ್ಲಿ ಇಲ್ಲಿನ ಬೀಡಿ ಫ್ಯಾಕ್ಟರಿ ಮಾಲೀಕರು ಕೆಲ ಗೂಂಡಾಗಳನ್ನು ಬಿಟ್ಟು ಸಿ.ಐ.ಟಿ.ಯು. ಮುಖಂಡ ಕಾ॥ಅಬ್ದುಲ್ ಮಜೀದ್‌ರವರ ಮೇಲೆ ಹಲ್ಲೆ ನಡೆಸಿದ್ದನ್ನು ಪ್ರತಿಭಟಿಸಿ ಕೋಲಾರ ಮತ್ತು ಮುಳಬಾಗಿಲಿನಲ್ಲಿ ಏಪ್ರಿಲ್ 25ರಂದು ಬೀಡಿ ಕಾರ್ಮಿಕರು ಯಶಸ್ವಿ ಮುಷ್ಕರ ನಡೆಸಲಾಗಿದೆ. ನಂತರ ನಡೆದ ಕಾರ್ಮಿಕರ ಸಭೆಯಲ್ಲಿ ಸಿ.ಪಿ.ಐ. (ಎಂ) ಶಾಸಕ ಕಾ॥ಆರ್. ವೆಂಕಟ ರಾಮಯ್ಯನವರು ಮಾತನಾಡಿ ಹಲ್ಲೆಯನ್ನು ತೀವ್ರವಾಗಿ ಖಂಡಿಸಿದರು.

ಹಲ್ಲೆ ನಡೆಸಿದ ವ್ಯಕ್ತಿಗಳ ವಿರುದ್ಧ ಕ್ರಮ ತೆಗೆದು ಕೊಂಡಿರುವುದಾಗಿ ಹಾಗೂ ಕಾಂಟ್ರಾಕ್ಟ್‌ದಾರರು ತಮ್ಮ ತಪ್ಪನ್ನು

ಕುಂದಾಪುರ : ಜನಜಾಗೃತಿ ಪ್ರಚಾರ ಸಭೆ

ರಾಜ್ಯದಲ್ಲಿ ಜನತಾದಳ ಸರ್ಕಾರ ವಜಾಗೊಳಿಸಿ ರಾಷ್ಟ್ರಪತಿ ಆಡಳಿತ ಜಾರಿ ಮಾಡಿದ ಕಾಂಗ್ರೆಸ ಸರ್ವಾಧಿಕಾರಿ ನೀತಿ ಖಂಡಿಸಿ ರಾಜ್ಯಾದ್ಯಂತ ರಾಜಕೀಯ ಪ್ರಚಾರ ಸಭೆ ನಡೆಸಲು ಸಿ.ಪಿ.ಐ (ಎಂ) ರಾಜ್ಯ ಸಮಿತಿ ನೀಡಿದ ಕರೆಯಂತೆ ಕುಂದಾಪುರದಲ್ಲಿ ಮೇ 30 ರಿಂದ ಜೂನ್ 1 ರವರೆಗೆ ತಾಲೋಕಿನಾದ್ಯಾಂತ ಟೆಂಪೋ ಜಾಥದ ಮೂಲಕ ವ್ಯಾಪಕ ಪ್ರಚಾರ ಕಾರ್ಯ ನಡೆಸಲಾಯಿತು. ತಾಲೋಕಿನ ಕೋಟೇಶ್ವರ, ಕೊಲ್ಲೂರು, ಸಿದ್ಧಾಪುರ, ಅಂಪಾರು, ಕಂಡ್ಲೂರು, ಬಸ್ರೂರು, ಶಿರೂರು, ಬೈಂದೂರು, ಮುಳ್ಳಿಕಟ್ಟೆ ಮೊದಲಾದೆಡೆಗಳಲ್ಲಿ ಸಾರ್ವಜನಿಕ ಸಭೆಗಳನ್ನು ನಡೆಸಿ ಸುಮಾರು 4 ಸಾವಿರ ಜನರು ಪಾಲ್ಗೊಳುವಂತೆ ಮಾಡಲಾಯಿತು. ದೇಶಕ್ಕೆ ಸ್ವಾತಂತ್ರ್ಯ ದೊರೆತು ನಾಲ್ಕು ದಶಕಗಳು ಕಳೆದರೂ ಜನತೆಯ ಯಾವ ಮೂಲಭೂತ ಸಮಸ್ಯೆ ಬಗೆಹರಿಸುವ, ಜನರ ಜೀವನ ಮಟ್ಟ ಸುಧಾರಿಸುವ ಪ್ರಾಮಾಣಿಕ ಕಾರ್ಯಕ್ರಮಗಳನ್ನು ರೂಪಿಸುವ ಬದಲು ಪಂಚಾಯತ್ ರಾಜ್, ಜವಾಹರ್ ರೋಜಗಾರ್ ಯೋಜನೆ ಮೊದಲಾದ ಕಣ್ಣೊರೆಸುವ ತಂತ್ರ ಅನುಸರಿಸುತ್ತಿರುವ ಕಾಂಗ್ರೆಸ್ (ಐ) ಪಕ್ಷವನ್ನು ಮುಂದಿನ ಚುನಾವಣೆ ಯಲ್ಲಿ ಮಣ್ಣು ಮುಕಿಸುವಂತೆ ಸಿ.ಪಿ.ಐ.(ಎಂ) ರಾಜ್ಯಸಮಿತಿ ಸದಸ್ಯ ಕಾ॥ ಅಬ್ರಹಾಂ ಕರ್ಕಡ ಕರೆನೀಡಿದರು. ಅವರು ಜೂನ್ 1 ರಂದು ಕುಂದಾಪುರದಲ್ಲಿ ಜರುಗಿದ ಪ್ರಚಾರಜಾಥ ಸಮಾರೋಪ ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಿದ್ದರು. ದೇಶಾದ್ಯಂತ ಜನಪ್ರಿಯತೆ ಕಳೆದು ಕೊಂಡು ರಾಜ್ಯದಲ್ಲಿ ಜನತಾದಳ ಸರ್ಕಾರ ಉರುಳಿಸಿ ಹಿಂಬಾಗಿಲಿನಿಂದ ಅಧಿಕಾರಕ್ಕೆ ಬರಲು ಪ್ರಯತ್ನಿಸುತ್ತಿದೆ ಎಂದು ಹೇಳಿದರು. ಉದ್ಯೋಗ ಶಿಕ್ಷಣದ ಕೀಳಿಕೆ ಬಗೆ ಹರಿಸದ ರಾಜೀವ್ ಗಾಂಧಿ ಸರಕಾರ ಬೆಂಬಲಿಸದೇ ವಿದ್ಯಾರ್ಥಿ-ಯುವಜನತೆ ಮುಂದಿನ ಚುನಾವಣೆಯಲ್ಲಿ ಎಡ-ಪ್ರಜಾಸತ್ತಾತ್ಮಕ ಪಕ್ಷಗಳನ್ನು ಬೆಂಬಲಿಸ ಬೇಕೆಂದು ಅವರು ಕರೆನೀಡಿದರು. ಪ್ರಚಾರ ಸಭೆಗಳಲ್ಲಿ ಜಿಲ್ಲೆಯ ಮುಖಂಡರುಗಳಾದ ಕಾ॥ ಸಿ.ನಾರಾಯಣ, ದಾಸ್ ಬಂಡಾರಿ, ಆರ್.ಜಯಕುಮಾರ್, ಮಂಜುನಾಥ್, ಮಹಾಬಲ ವಡೇರ ಹೋಬಳಿ, ಎಸ್.ಆರ್.ಲೀಲಾವತಿಯವರು ನೇತೃತ್ವ ವಹಿಸಿದ್ದರು.

ವಿರಾಜಪೇಟೆ : ಮಹಿಳಾ ಸಂಘಟನೆ ಆರಂಭ

ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ವಿರಾಜಪೇಟೆ ಘಟಕದ ಪ್ರಾರಂಭೋತ್ಸವ ಸಭೆಯು ಮೇ 13 ರಂದು ಕಾ॥ ಲತೀಫ್ ರ ಅಧ್ಯಕ್ಷತೆಯಲ್ಲಿ ಜರುಗಿತು. ಕಾ॥ ಶ್ರೀಮತಿ ಬಿ.ಎಸ್. ವಾರಿಜ ಎಲ್ಲರನ್ನು ಸ್ವಾಗತಿಸಿದರು. ಮಹಿಳಾ ಸಂಘಟನೆ ಧ್ಯೇಯ ಧೋರಣೆ ಕುರಿತು ನ್ಯಾಯವಾದಿ ಹಾಗೂ ಡಿ.ವೈ.ಎಫ್.ಐ. ತಾಲೋಕು ಅಧ್ಯಕ್ಷ ಕಾ॥ ಐ.ಆರ್. ಪ್ರಮೋದ್ ತಿಳಿಸಿದರು. ಕಾಳಯ್ಯ ಮತ್ತು ಅಧ್ಯಾಪಕ ಬಿ.ಸಿ. ರಾಜುರವರು ಸಭೆಯಿಲ್ಲಿ ಮಾತನಾಡಿದರು. 7 ಜನ ಮಹಿಳೆಯರ ಸಂಘಟನಾ ಸಮಿತಿ ಆಯ್ಕೆ ಮಾಡಲಾಯಿತು.

ಮನೆ ಖಾಯಂಗಾಗಿ ಹೋರಾಟ

ಹೊಸಪೇಟೆಯಲ್ಲಿರುವ ಭಗತ್‌ಸಿಂಗ್ ನಗರಕ್ಕೆ ನಾಗರೀಕ ಸೌಲಭ್ಯ ನೀಡಬೇಕೆಂದು ಒತ್ತಾಯಿಸಿ ಡಿ.ವೈ.ಎಫ್.ಐ. ನೇತೃತ್ವದಲ್ಲಿ ಸರದಿ ಉಪವಾಸ ಸತ್ಯಾಗ್ರಹ ಕೈಗೊಳ್ಳಲಾಯಿತು.

ಭಗತ್‌ಸಿಂಗ್ ನಗರವನ್ನು ಕೊಳಚೆ ಪ್ರದೇಶವೆಂದು ಘೋಷಿಸಿ ನಿವೇಶನದ ಪಟ್ಟಾ ನೀಡಿ, ಮಹಿಳೆಯರಿಗೆ ಸಾರ್ವಜನಿಕ ಶೌಚ್ಚಾಲಯ ಕಟ್ಟಿಸಬೇಕು, ರೇಷನ್ ಕಾರ್ಡ್ ನೀಡಬೇಕು ಹಾಗೂ ನಾಗರೀಕ ಸೌಲಭ್ಯ ನೀಡಬೇಕೆಂದು ಘೋಷಣೆ ಕೂಗುತ್ತಾ 200 ಕ್ಕೂ ಮೇಲ್ಪಟ್ಟ ನಾಗರೀಕರು ಮೆರವಣಿಗೆ ನಡೆಸಿ, ಸಹಾಯಕ ಆಯುಕ್ತರ ಕಛೇರಿ ಎದುರು ಅನಿರ್ದಿಷ್ಟ ಕಾಲದ ಸರದಿ ಉಪವಾಸ ಸತ್ಯಾಗ್ರಹವನ್ನು ಏಪ್ರಿಲ್ 17 ರಂದು ಆರಂಭಿಸಿದರು. ಯುವ ನಾಯಕರಾದ ಕಾ॥ ವೆಂಕಟರಮಣ, ನಾಗರಾಜ್, ಶ್ರೀನಿವಾಸ್, ಚಂದ್ರಬಾಬು, ಗೋಪಾಲ ಸ್ವಾಮಿ ನೇತೃತ್ವವಹಿಸಿದ್ದರು.

ಜಿಲ್ಲಾ ನಾಯಕ ಸುರೇಶ್ ಕುಷ್ಟಗಿ, ಮಹೇಶ್, ರವರುಗಳು ಮಾತನಾಡಿ ಸಮಸ್ಯೆಗಳ ಈಡೇರಿಕೆಗಾಗಿ ಪಿಕೆಟಿಂಗ್, ರಸ್ತೆರೋಖೋ ಚಳುವಳಿಗೆ ಸಿದ್ಧರಾಗಬೇಕೆಂದು ಕರೆ ನೀಡಿದರು.

ಜುಲೈ 1 ರಿಂದ 8 ಪ್ಯಾಂಗ್‌ಯಾಂಗ್‌ನಲ್ಲಿ 13ನೇ ವಿದ್ಯಾರ್ಥಿ-ಯುವಜನ ಉತ್ಸವ

ಇದೇ ಜುಲೈ 1 ರಿಂದ 8 ರವರೆಗೆ ಜನತಾ ಪ್ರಜಾಸತ್ತಾತ್ಮಕ ಕೋರಿಯಾ ಗಣರಾಜ್ಯದ ಪ್ಯಾಂಗ್ ಯಾಂಗ್ ನಗರದಲ್ಲಿ 13 ನೆಯ ಜಾಗತಿಕ ವಿದ್ಯಾರ್ಥಿ-ಯುವಜನ ಉತ್ಸವ ಜರುಗಲಿದೆ. 12ನೆಯ ಉತ್ಸವ 1985 ರಲ್ಲಿ ಮಾಸ್ಕೋ ನಗರದಲ್ಲಿ ಜರುಗಿತ್ತು.

'ಸಾಮ್ರಾಜ್ಯಶಾಹಿ ವಿರೋಧಿ-ಸೌಹಾರ್ದತೆ-ಶಾಂತಿ ಮತ್ತು ಸ್ನೇಹ' ಕ್ಕಾಗಿ ಎಂಬ ಪ್ರಮುಖ ಘೋಷಣೆಯಾಧಾರದಲ್ಲಿ ನಡೆಯುವ ಈ ಜಾಗತಿಕ ಮೇಳದಲ್ಲಿ ಮೇಲಿನ ಉದ್ದೇಶವನ್ನು ಒಪ್ಪುವ ಎಲ್ಲಾ ಸಂಘಟನೆಗಳಿಂದ 30,000 ಕ್ಕೂ ಅಧಿಕ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಭಾರತದಿಂದ ಭಾಗವಹಿಸುವವರಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಮತ್ತು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ) ಸಂಘಟನೆಗಳಿಂದ 55 ಪ್ರತಿನಿಧಿಗಳಿದ್ದಾರೆ. ಈ ಎರಡು ಸಂಘಟನೆಗಳು ಅಂತರಾಷ್ಟ್ರೀಯ ವಿದ್ಯಾರ್ಥಿ ಸಂಘ (ಐ.ಯು.ಎಸ್), ಪ್ರಜಾಸತ್ತಾತ್ಮಕ ಯುವಜನ ಜಾಗತಿಕ ಫೆಡರೇಷನ್ (ಡಬ್ಲ್ಯು.ಎಫ್.ಡಿ.ವೈ) ನ ಸದಸ್ಯರಾದ ಬಳಿಕ ಪಾಲ್ಗೊಳ್ಳುತ್ತಿರುವುದು ಇದೇ ಪ್ರಥಮ.

ಈ ಮೇಳದಲ್ಲಿ ಎರಡು ಸಂಘಟನೆಗಳನ್ನು ಪ್ರತಿನಿಧಿಸಿ ಕರ್ನಾಟಕ ದಿಂದ ಎಸ್.ಎಫ್.ಐ. ರಾಜ್ಯ ಸಮಿತಿ ಕಾರ್ಯದರ್ಶಿ ಕಾ॥ ಎಸ್.ವೈ.ಗುರುಶಾಂತ್ ಭಾಗವಹಿಸಲು ಜೂನ್ 23 ರಂದು ಬೆಂಗಳೂರಿನಿಂದ ದೆಹಲಿಗೆ ಹೊರಡಲಿದ್ದಾರೆ.

ಧಾರವಾಡ: ಕೃಷಿ ವಿ.ವಿ.ಭ್ರಷ್ಟ ಆಡಳಿತದ ವಿರುದ್ಧ ವಿದ್ಯಾರ್ಥಿಗಳ ಉಗ್ರ ಚಳುವಳಿ

ಧಾರವಾಡ ಕೃಷಿ ವಿಶ್ವವಿದ್ಯಾಲಯ 6ನೇ ಟ್ರೈಮಿಸ್ಟರ್‌ನಲ್ಲಿ 1.5 ಸಿ.ಜಿ.ಪಿ.ಎ.ಯನ್ನು ಪಡೆಯದ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾಲಯದಿಂದ ಹೊರಹಾಕುವ ಆಕಾಡೆಮಿಕ್ ಪ್ರೊಬೆಷನ್ ರೂಲ್‌ಗೆ ತದ್ವಿರುದ್ಧವಾದ ನೀತಿ ಅನುಸರಿಸಿ ವಿದ್ಯಾರ್ಥಿಗಳ ಭವಿಷ್ಯದ ಜೊತೆ ಚೆಲ್ಲಾಟವಾಡುತ್ತಿದೆ.

ವಿಶ್ವವಿದ್ಯಾಲಯದ ಇಂತಹ ಸರ್ವಾಧಿಕಾರಿ, ನೌಕರಶಾಹಿ ಶೈಕ್ಷಣಿಕ ನೀತಿಯ ಫಲವಾಗಿ 29 ಮಂದಿ ವಿದ್ಯಾರ್ಥಿಗಳು ಈ ಭ್ರಷ್ಟ ಕಾನೂನಿಗೆ ಬಲಿಯಾದರು. ಹೀಗೆ ಹೊರ ಹಾಕಲ್ಪಟ್ಟ ಬಹುತೇಕ ವಿದ್ಯಾರ್ಥಿಗಳು ಹರಿಜನ, ಹಿಂದುಳಿದವರಾಗಿದ್ದು ಇದರಿಂದ ಮೀಸಲಾತಿಯ ಸೌಲಭ್ಯವನ್ನು ವಿ.ವಿ. ಈ ವಿದ್ಯಾರ್ಥಿಗಳಿಗೆ ನಿರಾಕರಿಸಿದಂತಾಗಿದೆ. ಪ್ರತಿ ವರ್ಷ 25 ರಿಂದ 30 ವಿದ್ಯಾರ್ಥಿಗಳನ್ನು ಹೊರಹಾಕುವ ವಿ.ವಿ.ಯ ಈ ನೀತಿ ತೀವ್ರ ಖಂಡನೀಯ.

ಇಲ್ಲಿಗೆ ವಿಶ್ವವಿದ್ಯಾಲಯದ ಕ್ರೂರ ನೀತಿಗಳು ಮುಗಿಯಲಿಲ್ಲ. 1988ರ ಉನ್ನತ ಸ್ನಾತಕೋತ್ತರ ಪರೀಕ್ಷೆಯಲ್ಲಿ ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳಿಗೆ ಇದುವರೆ ಏಗೂ ಪ್ರಶಸ್ತಿ ನೀಡದೆ ವಂಚಿಸಲಾಗಿದೆ. ಅಖಿಲಭಾರತ ಶೈಕ್ಷಣಿಕ ಪ್ರವಾಸವನ್ನು ರದ್ದುಗೊಳಿಸಿ, ಕಂಸಡೆನ್ಸಡ್ ಪರೀಕ್ಷಾ ವಿಧಾನ ನಿಲ್ಲಿಸಲಾಗಿದೆ. ಪ್ರತಿ ಟ್ರೈಮಿಸ್ಟರ್ ನಲ್ಲಿಯೂ ಸ್ನಾತಕೋತ್ತರ ವಿದ್ಯಾರ್ಥಿಗಳನ್ನು ಹಾಸ್ಟಲ್ ಬಿಡಿಸಲಾಗುತ್ತಿದೆ.

ವಿಶ್ವವಿದ್ಯಾಲಯ ನೀತಿ ನಿರೂಪಣೆ ಮಾಡುವ ಯಾವ ಸಮಿತಿಯಲ್ಲೂ ವಿದ್ಯಾರ್ಥಿಪ್ರತಿನಿಧಿಗಳಿಗೆ ಪ್ರಾತಿನಿಧ್ಯವಿಲ್ಲ. ಕೃಷಿ ವಿ.ವಿ.ಯ ಇಂತಹ ಬೇಜವಾಬ್ದಾರಿಯುತ ವರ್ತನೆಯಿಂದಾಗಿ ವಿದ್ಯಾರ್ಥಿಗಳು ಸಂಕಷ್ಟಕೀಡಾಗಿದ್ದಾರೆ. ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಈ ವಿದ್ಯಾರ್ಥಿಗಳನ್ನು ಸಂಘಟಿಸಿ ಹೋರಾಟಕ್ಕಿಳಿದಿದೆ. ಜೂನ್ 5 ರಂದು ಉಪಕುಲಪತಿಯವರ ಕಛೇರಿ ಎದುರು ಅಮರಣಾಂತ ಉಪವಾಸ ಸತ್ಯಾಗ್ರಹ ನಡೆಸಿದ ವಿದ್ಯಾರ್ಥಿ ಗಳನ್ನು ಬಂಧಿಸಿ ಜೈಲಿಗೆ ಹಾಕ ಲಾಯಿತು.

ವಿ.ವಿ.ಯ ಹಾಗೂ ಪೊಲೀಸ್ ದಬ್ಬಾಳಿಕೆಯನ್ನು ಪ್ರತಿಭಟಿಸಿ ಬಂಧಿತ ವಿದ್ಯಾರ್ಥಿ ಮುಖಂಡರನ್ನೂ ಬಿಡುಗಡೆ ಗೊಳಿಸಬೇಕೆಂದು ಆಗ್ರಹಿಸಿ 9 ರಂದು ತರಗತಿ ಬಹಿಷ್ಕರಿಸಿ ಚಳುವಳಿಯನ್ನು ತೀವ್ರಗೊಳಿಸಲಾಯಿತು. ಚಳುವಳಿ ಉಗ್ರ ರೂಪತಾಳುವ ಪರಿಸ್ಥಿತಿ ನಿರ್ಮಾಣವಾದಾಗ ಉಪಕುಲಪತಿಗಳು ಪೊಲೀಸ್ ಅಧಿಕಾರಿಗಳ ಸಮ್ಮುಖದಲ್ಲಿ ವಿದ್ಯಾರ್ಥಿ ಪ್ರತಿನಿಧಿಗಳೊಂದಿಗೆ ಜೂನ್ 10 ರಂದು ಮಾತುಕತೆ ನಡೆಸಿದರು.

ಆಕಾಡೆಮಿಕ್ ಕೌನ್ಸಿಲ್ ಸಭೆ ಕರೆದು ಬೇಡಿಕೆಗಳ ಕುರಿತು ಚರ್ಚಿಸುವುದಾಗಿ ಉಪಕುಲಪತಿಗಳು ಭರವಸೆ ನೀಡಿದರಿಂದ ಚಳುವಳಿಯನ್ನು ತಾತ್ಕಾಲಿಕವಾಗಿ ಹಿಂತೆಗೆದುಕೊಳ್ಳಲಾಗಿದೆ. ಬೇಡಿಕೆಗಳ ಕುರಿತು ಸಕಾರಾತ್ಮಕ ಪ್ರತಿಕ್ರಿಯೆ ಕಂಡು ಬರದೇ ಹೋದಲ್ಲಿ ಚಳುವಳಿಯನ್ನು ತೀವ್ರಗೊಳಿಸುವುದಾಗಿ ವಿದ್ಯಾರ್ಥಿ ಕ್ರಿಯಾ ಸಮಿತಿ ಸಂಚಾಲಕ ಹಾಗೂ ಎಸ್.ಎಫ್.ಐ. ರಾಜ್ಯ ಅಧ್ಯಕ್ಷ ಕಾ॥ ಜೆ.ಸಿ. ಬೈಯಾರೆಡ್ಡಿ ಯವರು ಎಚ್ಚರಿಸಿದ್ದಾರೆ.

ವಿದ್ಯಾರ್ಥಿಗಳಿಗೆ ವಿಜ್ಞಾನ ಶಿಬಿರ

ಕೋಲಾರ ನಗರದಲ್ಲಿ ಮೆ 8 ರಿಂದ 14 ರವರೆಗೆ ಜಿಲ್ಲಾಮಟ್ಟದ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ "ಬೇಸಿಗೆ ವಿಜ್ಞಾನ ಶಿಬಿರ"ವನ್ನು ಏರ್ಪಡಿಸಲಾಗಿತ್ತು. ಈ ಶಿಬಿರವನ್ನು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಘಟಕಗಳಾದ ವಿಜ್ಞಾನ ಬಳಗ ಮತ್ತು ಮಹಿಳಾ ವಿಜ್ಞಾನ ಬಳಗ ಘಟಕಗಳ ಜಂಟಿ ಆಶ್ರಯದಲ್ಲಿ ನಡೆಸಲಾಯಿತು.

ಶಿಬಿರದಲ್ಲಿ ಜಿಲ್ಲೆಯಾದ್ಯಂತದಿಂದ ಸುಮಾರು 50 ಜನ ವಿದ್ಯಾರ್ಥಿ ಪ್ರತಿನಿಧಿಗಳು ಭಾಗವಹಿಸಿದ್ದ ಶಿಬಿರದ ಉದ್ಘಾಟನೆಯನ್ನು ಜಿಲ್ಲಾ ಪರಿಷತ್ ಅಧ್ಯಕ್ಷರಾದ ಶ್ರೀ.ಬಿ.ಎಂ.ಕೃಷ್ಣಪ್ಪನವರು ನೆರವೇರಿಸಿ, ಮಾತನಾಡುತ್ತ ನಮ್ಮ ವಿಜ್ಞಾನ ಮತ್ತು ತಂತ್ರಜ್ಞಾನ ಇನ್ನೂ ಬೆಳೆಯ ಬೇಕಾಗಿದೆ ಮತ್ತು ಪಾಶ್ಚಿಮಾತ್ಯರಿಗೆ ನಾವು ಸಮಾನರಾಗಿ ಬೇಕಾಗಿದ್ದು, ಮಕ್ಕಳು ಇಂದಿನಿಂದಲೇ ಆ ಪ್ರವೃತ್ತಿಯನ್ನು ಬೆಳೆಸಿಕೊಳ್ಳ ಬೇಕಾಗಿದೆಯೆಂದರು.

ಈ ಶಿಬಿರದಲ್ಲಿ ಹಲವಾರು ತಜ್ಞರಿಂದ ವಿಜ್ಞಾನ ಮಾಡಲ್ಸ್, ಪಪೆಟ್ರಿ, ಒರಿಗ್ಯಾಮಿ, ವಿಜ್ಞಾನ ನಾಟಕ ಮುಂತಾದುವುಗಳ ಬಗ್ಗೆ ತರಬೇತಿಯನ್ನು ನೀಡಲಾಯಿತು. ಶಿಬಿರವನ್ನು ಗುಟಗಿಲ್‌ನ ಉಪಾಧ್ಯಾಯರಾದ ಶ್ರೀ.ಎಂ. ನಾಗರಾಜ್‌ರವರು ನಡೆಸಿಕೊಟ್ಟರು ಮತ್ತು ಬೆಳಗಾವಿ ವಿಜ್ಞಾನ ಕೇಂದ್ರದ ನಿರ್ದೇಶಕರಾದ ಶ್ರೀ.D.R.ಬಳೂರಗಿ ಯವರು ವಿಜ್ಞಾನ ಮಾಡಲ್‌ನ ಬಗ್ಗೆ ತರಬೇತಿ ನೀಡಿದರು.

ಮುಕ್ತಾಯ ದಿವಸದಂದು ಜಿಲ್ಲಾಧಿಕಾರಿ ಶ್ರೀ.ಜಿ.ಶಶಿಕಾಂತರಾವ್ ಶಿಬಿರದ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದರು. ನಂತರ ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಮತ್ತು ಬೀದಿನಾಟಕ "ಕರಿ, ಕರಿಯಣ್ಣ ಕರಿ, ಕರಿ, ಬುಡದಿಂದಲೆ......" ಹಾಗೂ ಪರಿಸರ ನಾಶದ ಬಗ್ಗೆಯ ನಾಟಕಗಳನ್ನು ಪ್ರದರ್ಶಿಸಲಾಯಿತು. ಈ ನಾಟಕಗಳು ಕೋಲಾರದ ಜನತೆಯ ಜನಮನ್ನಣೆ ಪಡೆದವು ಎಂದು ವಿಜ್ಞಾನ ಬಳಗದ ಸಂಚಾಲಕ ಸಿ.ಟಿ.ವೆಂಕಟರೆಡ್ಡಿಯವರು ತಿಳಿಸಿದ್ದಾರೆ.

'ಕೇಂದ್ರದ ... ತಪ್ಪುಗಳು ವ...

ಸಂಗ್ರಹ...

ಸಂವಿಧಾನ ಕೇಂದ್ರ ಸರ್ಕಾರಕ್ಕೆ ನೀಡಿದ ಆಯುಧದ ದುಷ್ಟ ಪ್ರಯೋಗ ಕರ್ನಾಟಕದ ಬೊಮ್ಮಾಯಿ ಸರ್ಕಾರದ ಮೇಲೆ ಆಗಿದೆ. ಸಂವಿಧಾನದ ರಕ್ಷಣೆಯ ಹೆಸರಿನಲ್ಲಿ ಪ್ರಜಾಪ್ರಭುತ್ವದ ಮೇಲೆ, ಜನತೆಯ ಮೇಲೆ ಹೇಯ ಆಕ್ರಮಣ ವಾಗಿದೆ. ಮೊದಲನೇಯದೇನಿಲ್ಲ ಈ ಆಕ್ರಮಣ. ಆದರೆ 'ಸರ್ಕಾರಿಯಾ ಆಯೋಗ' ವರದಿ ನೀಡಿದ ನಂತರದಲ್ಲಿ ಮೊದಲಬಾರಿಗೆ ನಡೆದದ್ದು ಈ ದುಷ್ಟ ದಮನಕಾರಿ ದಾಳಿ. ಸರ್ಕಾರಿಯಾ ಆಯೋಗದ ವರದಿಯ ಪರಿಣಾಮ ವೇನೆಂಬ ಪ್ರಶ್ನೆಗೆ ಪೂರ್ಣವಾದ, ಅಷ್ಟೇ ಮಾರ್ಮಿಕವಾದ ಉತ್ತರವನ್ನು ಈ ಒಂದೇ ಘಟನೆ ಹೇಳುತ್ತದೆ.

ಕೇಂದ್ರ-ರಾಜ್ಯಗಳ ಸಂಬಂಧ, ಹಿನ್ನೆಲೆಯಲ್ಲಿನ ಸರ್ಕಾರಿಯಾ ಆಯೋಗ, ಅದರ ವರದಿ, ಇತ್ಯಾದಿಗಳು ಇತ್ತೀಚಿನ ದಿನಗಳಲ್ಲಿ ಎಲ್ಲ ಕಡೆಗೂ ಚರ್ಚೆಯ ವಿಷಯವಾಗುತ್ತಿವೆ. ಅವು ಕಾಂಗ್ರೆಸ್‌ನ ದಮನಕಾರಿ ಆಡಳಿತದ ವಿರುದ್ಧ ಮೂಡಿಬರುತ್ತಿರುವ ಪ್ರತಿರೋಧ ಮತ್ತು ಕಾಂಗ್ರೆಸ್ ಆಡಳಿತದ ಮೇಲಿನ ಹಿಡಿತವನ್ನು ಕಳೆದುಕೊಳ್ಳುತ್ತಿರುವ ಹಿಡಿತದ ಸಂಕೇತವೂ ಹೌದು. ಕೈಲಾಗದವ ಮೈ ಪರಚಿ ಕೊಂಡಂತೆ ಕಾಂಗ್ರೆಸ್ ತನ್ನ ಸಮತೋಲವನ್ನೇ ಕಳೆದುಕೊಳ್ಳುತ್ತಿದೆ.

ಸ್ವಾತಂತ್ರ್ಯ ಬಂದಂದಿನಿಂದ ಸುಮಾರು ನಾಲ್ಕು ದಶಕಗಳ ದೀರ್ಘ ಕಾಲ (ನಡುವೆ ಕೆಲವು ತಿಂಗಳುಗಳ ಜನತಾ ಆಡಳಿತವನ್ನು ಬಿಟ್ಟರೆ) ಒಂದೇ ಸಮನೆ ಕೇಂದ್ರದಲ್ಲಿ ಆಡಳಿತ ಯಂತ್ರವನ್ನು ಹಿಡಿದಿರುವ ಕಾಂಗ್ರೆಸ್ ಹಿರಿಯಣ್ಣನಾಗುತ್ತಲೇ ನಡೆದಿದೆ. ರಾಜ್ಯಗಳಲ್ಲಿ ವಿರೋಧ ಪಕ್ಷಗಳು ಅಧಿಕಾರಕ್ಕೆ ಬರುತ್ತ ಕಾಂಗ್ರೆ ಬಲ ಶಿಥಿಲಗೊಳ್ಳುತ್ತ ನಡೆದಂತೆಲ್ಲ ರಾಜ್ಯಗಳ ಮೇಲಿನ ಅದರ ಅನಪೇಕ್ಷಿತ ದಾಳಿ ಹೆಚ್ಚಾಗುತ್ತಲೇ ನಡೆದಿದೆ. ಈ ಕ್ರಿಯೆಗಳ ಮಧ್ಯೆ ಪ್ರಜಾಪ್ರಭುತ್ವ ಕೊರಗುತ್ತಲೇ ಇದೆ.

ತ್ರಿಪುರದಲ್ಲಿ ಚುನಾವಣೆ ಮೂರು ದಿನವಿರುವಾಗ ರಾಜ್ಯ ಸರ್ಕಾರದೊಡನೆ ಸಮಾಲೋಚಿಸದೆ, ಏಕಪಕ್ಷೀಯವಾಗಿ ನಿರ್ಧಾರ ಕೈಗೊಂಡು (ಪೂರ್ವಯೋಜಿತವಾದ ಕಾರ್ಯಾಚರಣೆ ಇದೆಂಬುದು ಈಗ ಎಲ್ಲರಿಗೂ ಮನದಟ್ಟಾಗಿ ಹೋಗಿದೆ) ಸೇನೆ ಕಳುಹಿಸಿ ಚುನಾವಣೆ ಗೆದ್ದಿದ್ದು ಕೇಂದ್ರ ಸರ್ಕಾರ ಯಾವ ಮಟ್ಟದಲ್ಲಿದೆ ಮತ್ತು ಯಾವ ಮಟ್ಟಕ್ಕೆ ಇಳಿಯ ಬಲ್ಲುದೆಂಬುದರ ಮುನ್ಸೂಚನೆಯಾಗಿತ್ತು. ಇಂತಹ ಘಟನೆಗಳ ಪಟ್ಟಿ ಮಾಡುತ್ತ ಹೋದರೆ ಅದು ದೀರ್ಘವಾಗಿ ಬೆಳೆಯಬಲ್ಲದು.

ಆದರೆ ಕಾಂಗ್ರೆ ತನ್ನ ಅಧಿಕಾರದ ಮತ್ತಿನಲ್ಲಿ ಮನಗಾಣದೇ ಹೋಗಿರುವುದು ಇಂತಹ ನಿರ್ಲಜ್ಜ ದಮನಕಾರಿ ಕೃತ್ಯಗಳಿಂದ ಅದು ಜನತೆಯ ಪ್ರತಿರೋಧವನ್ನು ಶಾಶ್ವತವಾಗಿ ಅಡಗಿಸಲಾರದೆಂಬುದು. ಜನತೆಯ ದಮನ ನಡೆದಂತೆಲ್ಲ ಪ್ರತಿರೋಧ ನೂರ್ಮಡಿಸುತ್ತದೆ. ಅಂತಹ ಪ್ರತಿಭಟನೆಯ ಸ್ವರ ಮೊಳಗಿದಾಗಲೇ ನೇಮಕವಾದದ್ದು 'ಸರ್ಕಾರಿಯಾ ಆಯೋಗ' ಕೇಂದ್ರ-ರಾಜ್ಯಗಳ ಸಂಬಂಧಗಳನ್ನು ಇಲ್ಲಿಯ ವರೆಗಿನ ಅನುಭವಗಳ ಹಿನ್ನೆಲೆಯಲ್ಲಿ ಆಳ ಅಧ್ಯಯನ ಮಾಡಿ ತೊಡಕುಗಳಿಗೆ ಪರಿಹಾರ ಸೂಚಿಸಲು, ಆಯೋಗದ ವರದಿಗೆ ಎಂತಹ ಮಹತ್ವವನ್ನು ಕೇಂದ್ರ ನೀಡಿದೆ ಎಂಬುದು ಈಗ ಸ್ಪಷ್ಟ. ವರದಿ ಎಂತಹ ನಿಲುವನ್ನು ಪ್ರತಿಬಿಂಬಿಸಿದೆ ಎಂಬುದೂ ಚರ್ಚಾರ್ಹ ವಿಷಯ. ಆಯೋಗ ವರದಿ ಸಲ್ಲಿಸಿ ವರ್ಷವೇ ಕಳೆದಿದೆ. ಕೇಂದ್ರ ರಾಜ್ಯಗಳ ಸಂಬಂಧ ಇನ್ನೂ ಜೀವಂತ ಸಮಸ್ಯೆ.

ಚಾರಿತ್ರಿಕ ಬೆಳವಣಿಗೆ

ಸ್ವಾತಂತ್ರ್ಯನಂತರದ ಭಾರತದಲ್ಲಿನ ಕೇಂದ್ರ-ರಾಜ್ಯಗಳ ಸಮಸ್ಯೆಯ ಬೆಳವಣಿಗೆ ವಿಶಿಷ್ಟವಾದದ್ದು. ಭಾರತ ಮಿಲಿಯ ಗಟ್ಟಲೆ ಜನರುಳ್ಳ, ವಿವಿಧ ಭಾಷೆಗಳನ್ನು ಮಾತನಾಡುವ ಬೇರೆ ಬೇರೆ ರಾಷ್ಟ್ರೀಯತೆಯನ್ನೊಳಗೊಂಡ ದೊಡ್ಡ ದೊಡ್ಡ ಪ್ರಾಂತಗಳನ್ನೊಳಗೊಂಡಿತ್ತು. ಎಲ್ಲ ನವವಿಮೋಚಿತ ದೇಶಗಳಿಗಿದು ಸಾಮಾನ್ಯವಾಗಿತ್ತು. ಈ ವೈರುಧ್ಯ ಇಷ್ಟು ದೊಡ್ಡ ಬಿರುಕಾಗಿ ಬೆಳೆದದ್ದು ಹೇಗೆ?

ಭಾರತದ ಹಿರಿಬೂರ್ಜ್ವಾಗಳಿಗೆ ಅತೀ ಕೇಂದ್ರಿಕೃತವಾದ ಪ್ರಭುತ್ವ ಬೇಕಾಗಿತ್ತು. ಅಂತಹ ಒಂದು ಪ್ರಭುತ್ವ ಭಾರತದ ವಿಶಾಲವಾದ ಮಾರುಕಟ್ಟೆಯನ್ನು ಬಂಡವಾಳಿಗರ ಬೆಳವಣಿಗೆಗಾಗಿ ಮೀಸಲಿಡಲು ಅನುವು ಮಾಡಿಕೊಡುತ್ತಿತ್ತು.

ಆದರೆ ಅನಂತರದ ಕೆಲವೇ ವರ್ಷಗಳಲ್ಲಿ ಆರ್ಥಿಕ ಬಿಕ್ಕಟ್ಟು ತೀವ್ರಗೊಳ್ಳತೊಡಗಿದಂತೆಲ್ಲಾ ರಾಜ್ಯಗಳಲ್ಲಿನ ಸ್ಥಳೀಯ ಬೂರ್ಜ್ವಾಗಳ ಹಿತಾಸಕ್ತಿಗಳಿಗೆ ಹೊಡೆತ ಬೀಳತೊಡಗಿತು. ಇದರ ಜೊತೆಗೇ ಹಲವು ರಾಜ್ಯಗಳಲ್ಲಿ ಕಾಂಗ್ರೆಸ್ಸೇತರ ಪಕ್ಷಗಳು ಅಧಿಕಾರಕ್ಕೆ ಬರತೊಡಗಿದವು. ಕೇಂದ್ರದಲ್ಲಿ ಆಳುತ್ತಿದ್ದ ಕಾಂಗ್ರೆಸ್ ಸರ್ಕಾರದ ಧೋರಣೆಗಳ ವಿರುದ್ಧ ಹಲವಾರು ಧ್ವನಿಗಳು ಕೇಳತೊಡಗಿದವು. ಹಾಗೇ ಕೇಳಿಬಂದ ಧ್ವನಿಗಳೆಲ್ಲ ಪ್ರಗತಿಪರವಾಗಿರಲಿಲ್ಲ. ಆ ಧ್ವನಿಗಳಲ್ಲಿ ವಿಚ್ಛಿದ್ರಕಾರಿಗಳು ಪ್ರಾಂತೀಯ ವಾದಿಗಳು, ಭಾಷಾಂಧರು-ಇತ್ಯಾದಿಗಳೆಲ್ಲ ಕಾಣಿಸುತ್ತಿದ್ದರು. ಆದ್ದರಿಂದ ಸ್ಪಷ್ಟ ಸೈದ್ಧಾಂತಿಕ ನಿಲುವು ತಳೆಯುವುದು ಮತ್ತು ಪ್ರತಿಗಾಮಿ ಶಕ್ತಿಗಳನ್ನು ಬೇರ್ಪಡಿಸುತ್ತಲೇ ಕಾಂಗ್ರೆಸ್ ಧೋರಣೆಗಳ ವಿರುದ್ಧ ಹೋರಾಡುವ ಅನಿವಾರ್ಯತೆ ಒದಗಿಬಂತು. ಇಂತಹ ಸಂದರ್ಭದಲ್ಲಿ ಎಡಪಕ್ಷಗಳ ಪಾತ್ರ ಹಿರಿದಾಗುತ್ತ ನಡೆಯಿತು. ಎಡಪಕ್ಷಗಳು ಮತ್ತು ಮುಂಚೂಣಿಯಲ್ಲಿದ್ದ ನಮ್ಮ ಪಕ್ಷ ಕೇಂದ್ರ ಸರ್ಕಾರದ ಕಾಲಿಗೆ ದೊಡ್ಡ ತೊಡಕಾಗಿ ಪರಿಣಮಿಸಿದ್ದು ಇದೇ ಕಾರಣಕ್ಕೆ.

ಹೊಸದಾಗಿ ವಿಮೋಚನೆಗೊಂಡ ಭಾರತದಂತಹ ದೇಶಕ್ಕೆ ಕೇಂದ್ರೀಕರಣ ಸಾಮಾಜಿಕ ಅನಿವಾರ್ಯತೆಯಾಗಿ ಒದಗಿಬಂತು. ಸ್ವಾತಂತ್ರ್ಯಪೂರ್ವದಲ್ಲಿ ಜಿನ್ನಾ ಮತ್ತು ಮುಸ್ಲಿಂ ಲೀಗ್ ದುರ್ಬಲ ಕೇಂದ್ರಕ್ಕಾಗಿ ಬೇಡಿಕೆಯನ್ನಿಟ್ಟಿದ್ದರು. ಆದರೆ ಅಂತಹ ದುರ್ಬಲ ಕೇಂದ್ರ ಸಾಮ್ರಾಜ್ಯಶಾಹಿಗಳಿಗೆ ಅನುಕೂಲ ಪರಿಸ್ಥಿತಿಯನ್ನು ಒದಗಿಸಿ ಕೊಡುತ್ತಿತ್ತು. ಕಾಶ್ಮೀರ, ಟ್ರಾವಂಕೂರು, ನಿಝಾಮ್, ಇವರುಗಳ ಪ್ರತಿರೋಧವನ್ನು ತಮ್ಮ ಆಸಕ್ತಿಗಳಿಗನ್ನು ಗುಣವಾಗಿ ದುಡಿಸಿಕೊಳ್ಳಲು ಮತ್ತು ಅವು ಭಾರತದ ಒಕ್ಕೂಟವನ್ನು ಸೇರದಂತೆ ತಡೆಯಲು ಸಾಮ್ರಾಜ್ಯಶಾಹಿಗಳು ಹೊಂಚುಹಾಕಿದ್ದರು.

"ಭಾರತದ ರಾಷ್ಟ್ರೀಯತೆ ಇನ್ನೂ ರೂಪುಗೊಳ್ಳುತ್ತ ಬೆಳೆಯುತ್ತಿರುವ ಕೂಸು ಮತ್ತು ಅದನ್ನು ಪೋಷಿಸಿ ಬೆಳೆಸುವ ಅವಶ್ಯಕತೆಯಿದೆಯೆಂಬುದನ್ನು ರಾಷ್ಟ್ರ ನಾಯಕರು ಅರಿತಿದ್ದರು. ಆದ್ದರಿಂದಲೇ ಅವರು ಪ್ರಬಲವಾದ ಕೇಂದ್ರವಿರುವಂತಹ ಸಂವಿಧಾನ ರಚನೆಯನ್ನು ಹುಟ್ಟುಹಾಕಿದರು. ಇದು ಅವಿಭಾಜ್ಯ ಮತ್ತು ಸಮಗ್ರ ಭಾರತದ ಬೆಳವಣಿಗೆಗೆ ಅನುವು ಮಾಡಿಕೊಡುವ ಪ್ರಬಲ ಕೇಂದ್ರ ಸರ್ಕಾರಕ್ಕೆ ಅವಕಾಶ ಮಾಡಿಕೊಡುತ್ತಿತ್ತು."

> ಕೇಂದ್ರ ಹಲವು ತಪ್ಪುಗಳನ್ನು ಮಾಡಿದೆ. ಅವನ್ನು ತಿದ್ದಿಕೊಳ್ಳಬೇಕು. ಆದರೆ ಮುಂದೆ ಈ ರೀತಿ ದುರ್ಬಳಕೆಯಾಗದಂತೆ ಸಂವಿಧಾನಾತ್ಮಕ ಲಗಾಮು ಹಾಕುವ ಅವಶ್ಯಕತೆಯಿಲ್ಲ. ಯಾಕೆಂದರೆ ದೇಶದ ಏಕತೆ ಕಾಪಾಡುವ ಅಪಾರ ಜವಾಬ್ದಾರಿ ಅದರ ಮೇಲಿದೆ - ಇದು ಆಯೋಗದ ವರದಿಯಾದ್ಯಂತ ಪ್ರತಿಬಿಂಬಿತವಾಗಿರುವ ಧೋರಣೆ.

ಎಂ.ಸಿ.ಸೇತಲ್ವಾಡ್‌ರನ್ನು ಸರ್ಕಾರಿಯಾ ಆಯೋಗ ಉದ್ಧರಿಸಿದ್ದು.

ಭಾರತದ ರಾಷ್ಟ್ರೀಯತೆ ಬೆಳೆಸಬೇಕಾಗಿದ್ದ, ಸಾಮ್ರಾಜ್ಯಶಾಹಿಗಳ ಹುನ್ನಾರುಗಳಿಗೆ ತಕ್ಕ ಉತ್ತರ ನೀಡಬೇಕಾಗಿದ್ದ ಸಂವಿಧಾನ ಚಾರಿತ್ರಿಕ ಅವಶ್ಯಕತೆಗಳನ್ನು ಪೂರೈಸುವುದರೊಂದಿಗೇ ತನ್ನ ಗರ್ಭದಲ್ಲಿ ಅಹಿತಕರ ಘಟನೆಗಳಿಗೆ ಅವಕಾಶಗಳನ್ನು ಧರಿಸಿತ್ತು. ದೇಶದ ಯಾವುದೇ ಭಾಗದಲ್ಲಿ ಯಾವುದೇ ಸಮಸ್ಯೆ ತಲೆ ಎತ್ತಿದಾಗಲೂ ಮಧ್ಯಪ್ರವೇಶ ಮಾಡುವ ಅಧಿಕಾರಾಯುಧವನ್ನು ಸಂವಿಧಾನ ಕೇಂದ್ರ ಸರ್ಕಾರಕ್ಕೆ ಒದಗಿಸಿತ್ತು. ಇದರ ಹೊರತಾಗಿ ನಾಲ್ಕು ದಶಕಗಳ ಆಡಳಿತದಲ್ಲಿ ಕೇಂದ್ರ ಸರ್ಕಾರ ಹಲವು ಅಧಿಕಾರಗಳನ್ನು ತಾನೇ ಧರಿಸಿದೆ. ಈ ಅಗಾಧ ಅಧಿಕಾರಗಳ ಬತ್ತಳಿಕೆಯನ್ನು ವಿರೋಧ ಪಕ್ಷಗಳು ಅಧಿಕಾರಕ್ಕೆ ಬಂದ ರಾಜ್ಯಗಳ ಮೇಲೆಲ್ಲ ಅದು ಪ್ರಯೋಗಿಸತೊಡಗಿದಾಗ ಸಮಸ್ಯೆಯ ಕಿಡಿಗಳು ಸಿಡಿಯತೊಡಗಿದವು.

ಸರ್ಕಾರಿಯಾ ಆಯೋಗದ ವರದಿ ಏನು ಹೇಳುತ್ತದೆ?

ಕೇಂದ್ರ-ರಾಜ್ಯಗಳ ಸಂಬಂಧದ ಇಡೀ ಪ್ರಶ್ನೆಯ ಬಗೆಗೆ ಆಯೋಗ ಎಂತಹ ಧೋರಣೆ ತಳೆದಿದೆಯೆಂಬುದನ್ನು ತಿಳಿದರೆ ಆಯೋಗದ ವರದಿ ಸೂಚಿಸಬಹುದಾದ ಬದಲಾವಣೆಗಳನ್ನು ಯಾರೇ ಆದರೂ ಊಹಿಸಬಹುದು. ಸ್ಥೂಲವಾಗಿ ಹೇಳುವುದಾದರೆ ಆಯೋಗ ವರದಿಯಾದ್ಯಂತ ತಳೆದ ಧೋರಣೆ ಇದು 'ಕೇಂದ್ರ ಹಲವು ತಪ್ಪುಗಳನ್ನು ಮಾಡಿದೆ. ಅವುಗಳನ್ನು ಅದು ತಿದ್ದಿಕೊಳ್ಳಬೇಕು. ಆದರೆ ಕೇಂದ್ರದ ಮೇಲೆ ಸಂವಿಧಾನಾತ್ಮಕ ಲಗಾಮುಗಳನ್ನು ಹಾಕುವ ಅವಶ್ಯಕತೆಯಿಲ್ಲ. ದೇಶದ ಏಕತೆ ಕಾಪಾಡುವ ಅಪಾರ ಪ್ರಮಾಣದ ಜವಾಬ್ದಾರಿ ಕೇಂದ್ರದ ಮೇಲಿರುವುದರಿಂದ ಕೇಂದ್ರಕ್ಕೆ ವಿಶೇಷ ಅಧಿಕಾರಗಳ ಅವಶ್ಯಕತೆಯಿದೆ. ಈ ಧೋರಣೆ ಆಯೋಗದ ವರದಿಯಾದ್ಯಂತ ಪ್ರತಿಬಿಂಬಿತವಾಗಿದೆ.

ಕೇಂದ್ರ-ರಾಜ್ಯಗಳ ಸಂಬಂಧದ ಪ್ರಶ್ನೆಗಳಿಗೆಲ್ಲ ಕಳಸ ಪ್ರಾಯವಾದದ್ದು ರಾಜ್ಯಪಾಲರ ಹುದ್ದೆ. ಅಂತೆಯೇ ಈ ಸಂಬಂಧಗಳ ಯಾವುದೇ ಎಳೆಯನ್ನು ಹಿಡಿದಾಗಲೂ ವಿವಾದದ ಕೇಂದ್ರವಾಗುವುದು ಈ ಹುದ್ದೆ. ಇಂದಿನ ಸಂದರ್ಭದಲ್ಲಂತೂ ಇದು ಇನ್ನೂ ನಿಚ್ಚಳವಾಗುತ್ತಿದೆ. ಕೇಂದ್ರ ಸರ್ಕಾರದ ದೂತನಾಗಿ ಕಾರ್ಯನಿರ್ವಹಿಸುತ್ತ ಕೇಂದ್ರದ ಪಕ್ಷಪಾತದ ಧೋರಣೆಯನ್ನು ಕಾರ್ಯರೂಪಕ್ಕೆ ತರುತ್ತ ಹುದ್ದೆಯ ಗಂಭೀರತೆಯನ್ನೇ ಕೆಡಿಸುವಲ್ಲಿ ಹಲವು ರಾಜ್ಯಪಾಲರುಗಳು ಪೈಪೋಟಿ ನಡೆಸುತ್ತಿರುವಂತಿದೆ. ರಾಜ್ಯಪಾಲರುಗಳ ನೇಮಕಾತಿಯೂ ಹಾಗೇ ಆಗುತ್ತಿದೆ. ಕಾಂಗ್ರೆಸ್ ಪಕ್ಷದ ಸಕ್ರಿಯ ಸದಸ್ಯರು, ಹಿರಿಯ ಪೊಲೀಸ್ ಅಧಿಕಾರಿಗಳು, ಮಿಲಿಟರಿಯ ಅಧಿಕಾರಿಗಳನ್ನು ರಾಜ್ಯಪಾಲರನ್ನಾಗಿ ನೇಮಿಸುವ ಹೀನ ಸಂಪ್ರದಾಯವನ್ನು ಕಾಂಗ್ರೆಸ್ ಬೆಳೆಸಿದೆ.

ಇಂತಹ ರಾಜ್ಯಪಾಲರ ಹುದ್ದೆಯನ್ನು ಆಯೋಗದ ವರದಿ ವೈಭವೀಕರಿಸುತ್ತದೆ. ಇಂತಹ ವೈಭವೀಕರಣ ಕೇಂದ್ರ ಸರ್ಕಾರ ಮತ್ತು ರಾಜ್ಯಪಾಲರುಗಳು ಜನತೆಯ ವಿರೋಧಿಗಳು ಮತ್ತು ಅವರು ಪಾರ್ಲಿಮೆಂಟರಿ ಪ್ರಜಾಪ್ರಭುತ್ವವನ್ನು ಬುಡ ಮೇಲು ಮಾಡುವವರು ಎಂಬ ಸರಳ ಸತ್ಯವನ್ನೇ ಮರೆಮಾಚುತ್ತದೆ.

> ರಾಜ್ಯಪಾಲರ ಹುದ್ದೆಯ ದುರುಪಯೋಗಗಳನ್ನು ಉದಾಹರಿಸುವ ಆಯೋಗ ಅವು ಪುನರಾವರ್ತನೆಯಾಗದಂತೆ ಯಾವುದೇ ಮೂರ್ತ ಸೂಚನೆಗಳನ್ನು ನೀಡದೆ ಕೇವಲ ಸದಾಶಯಗಳನ್ನಷ್ಟೇ ವ್ಯಕ್ತಪಡಿಸುತ್ತದೆ. ರಾಜ್ಯಪಾಲಕ ಹುದ್ದೆಯನ್ನು ವೈಭವೀಕರಿಸುತ್ತದೆ.

ಸ್ವಾತಂತ್ರ್ಯನಂತರದ ನಾಲ್ಕು ದಶಕಗಳ ಇತಿಹಾಸದಲ್ಲಿ ರಾಜ್ಯಪಾಲರುಗಳು ಸಂವಿಧಾನದ ಉಲ್ಲಂಘನೆ ಮಾಡಿದ ಉದಾಹರಣೆಗಳು ವಿಫಲವಾಗಿವೆ. ಕೇಂದ್ರಕ್ಕೆ ವಿರುದ್ಧವಾದ ರಾಜ್ಯಗಳ ಮೇಲೆ ರಾಷ್ಟ್ರಪತಿ ಆಡಳಿತ ಹೇರುವುದು ಸಾಮಾನ್ಯವಾಗಿ ಹೋಗಿದೆ. ರಾಜ್ಯಗಳು ತರಬಯಸಿದ ಮಸೂದೆಗಳಿಗೆ 'ರಾಷ್ಟ್ರಪತಿಗಳ ಒಪ್ಪಿಗೆ' ಎಂಬ ಅನಗತ್ಯ ವಿಧಿಯ ನೆಪದಲ್ಲಿ ಮಸೂದೆಗಳನ್ನು ದೀರ್ಘಕಾಲ ತಡೆಹಿಡಿಯುವುದು ಸಾಮಾನ್ಯವಾಗಿದೆ. ಇಂತಹವು ಗಳನ್ನು ಕೆಲವುಕಡೆ ಉದಾಹರಿಸುವ ಆಯೋಗದ ವರದಿ ಇವು ಪುನಃ ಘಟಿಸದಂತೆ ತಡೆಯಲು ಯಾವುದೇ ಮೂರ್ತ ಸೂಚನೆಗಳನ್ನೂ ನೀಡದೆ ಸದಾಶಯಗಳನ್ನು ಮಾತ್ರವೇ ವ್ಯಕ್ತಪಡಿಸುತ್ತದೆ. ರಾಜ್ಯಗಳ ಸ್ವಾಯತ್ತತೆಯನ್ನೇ ಈ ಕ್ರಮಗಳು ದಮನಿಸುತ್ತವೆ ಎಂಬ ಆಳ ವಿಶ್ಲೇಷಣಾತ್ಮಕ ಧೋರಣೆಯನ್ನು ಆಯೋಗ ಯಾವ ಹಂತದಲ್ಲೂ ತಳೆಯುವುದಿಲ್ಲ.

ಮಂತ್ರಿ ಮಂಡಲ ರಚನೆ, ಶಾಸನ ಸಭೆಯ ಕರೆಯುವಿಕೆ ಇತ್ಯಾದಿಗಳ ಬಗೆಗೆ ಕೆಲವು ಸೂಚನೆಗಳನ್ನು ಆಯೋಗ ನೀಡುತ್ತದೆ. ಆದರೆ ರಾಜ್ಯಪಾಲರ ಹುದ್ದೆಯ ಕಾರ್ಯ ನಿರ್ವಹಣೆಯ ಬಗೆಗೆ ಯಾವುದೇ ಕ್ರಿಯಾತ್ಮಕ ಸೂಚನೆಗಳನ್ನು ಅದು ನೀಡುವುದಿಲ್ಲ. ಆದ್ದರಿಂದ ಅದು ನೀಡುವ ಸೂಚನೆಗಳೆಲ್ಲ ಶುಷ್ಕ ಆಶಯಗಳಾಗಿ ಮಾತ್ರ ಉಳಿಯುತ್ತವೆ.

ರಾಷ್ಟ್ರಪತಿ ಆಡಳಿತ.

(ಸಂವಿಧಾನದ 352 ಮತ್ತು 356ನೇ ವಿಧಿಗಳ ಪ್ರಕಾರ) ರಾಜ್ಯಗಳ ಮೇಲೆ 75ಕ್ಕೂ ಹೆಚ್ಚು ಸಾಗಿ ರಾಷ್ಟ್ರಪತಿಗಳ ಆಡಳಿತವನ್ನು ಹೇರಲಾಗಿದೆ. ಪ್ರಾರಂಭದ ವರ್ಷಗಳಲ್ಲಿ ಈ ಆಕ್ರಮವನ್ನು ಕೃಚಿತ್ ಆಗಿ ಬಳಸಲಾಯಿತು. 1967ರವರೆಗೆ ಹನ್ನೆರಡು ಬಾರಿ ಮಾತ್ರ ರಾಷ್ಟ್ರಪತಿ ಆಡಳಿತವನ್ನು ಹೇರಲಾಯಿತು. ನಂತರದ 18 ವರ್ಷಗಳಲ್ಲಿ 62 ಸಾರಿ ಈ ಕ್ರಮದ ಸಹಾಯ ಪಡೆಯಲಾಯಿತು. ಹದಿಮೂರು ಸಂದರ್ಭಗಳಲ್ಲಿ ಮಂತ್ರಿ ಮಂಡಲ ವಿಧಾನ ಸಭೆಯಲ್ಲಿ ಬಹುಮತ ಹೊಂದಿದ್ದಾಗ್ಯೂ ಅವುಗಳನ್ನು ವಜಾಗೊಳಿಸಲಾಯಿತು. ಇವೆಲ್ಲವುಗಳನ್ನು ದಾಖಲಿಸುವ ಆಯೋಗ ಸಂವಿಧಾನದ ಸಂಬಂಧಪಟ್ಟ ವಿಧಿಗಳು ಹಾಗೇ ಉಳಿಯಬೇಕೆಂಬ ಅಭಿಪ್ರಾಯ ಪಡುತ್ತದೆ! ಆಯೋಗ ಇದಕ್ಕೆ ನೀಡುವ ಕಾರಣ ವಿಚ್ಛಿದ್ರಕಾರಕ ಶಕ್ತಿಗಳ ಸವಾಲನ್ನೆದುರಿಸಲು ಅವುಗಳ ಅವಶ್ಯಕತೆ ಇದೆ!

ಅಂತರಾಜ್ಯ ಮಂಡಳಿ

ಸಂವಿಧಾನದ 268ನೇ ವಿಧಿ ಇಂತಹ ಒಂದು ಮಂಡಳಿಯ ರಚನೆಗೆ ಅವಕಾಶ ಮಾಡಿಕೊಡುತ್ತದೆ. ಆದರೆ ಕೇಂದ್ರ ಮಂಡಳಿಯ ರಚನೆಯನ್ನು ಪ್ರತಿರೋಧಿಸಿದೆ. ಆಯೋಗ ಮಂಡಳಿಯ ರಚನೆಗೆ ಶಿಫಾರಸು ಮಾಡಿದೆ.

ಯೋಜನಾ ಆಯೋಗ ಮತ್ತು ರಾಷ್ಟ್ರೀಯ ಅಭಿವೃದ್ಧಿ ಮಂಡಳಿ

ಈ ಎರಡೂ ಕಾರ್ಯಗಳ ದುರುಪಯೋಗವನ್ನು ಗಮನಿಸುವ ಆಯೋಗ ಕೆಲವು ಮೂರ್ತ ಶಿಫಾರಸುಗಳನ್ನು ನೀಡುತ್ತದೆ. ಆದರೆ ಇಲ್ಲೂ ಸಹ ಆಯೋಗ ಸಂವಿಧಾನಾತ್ಮಕ ಬದ್ಧತೆಯನ್ನು ಹೇರಲು ನಿರಾಕರಿಸುತ್ತದೆ.

ಹೋರಾಟ ಅಗತ್ಯ

ಆಯೋಗ ಹಲವು ಸೂಚನೆಗಳನ್ನು ಶಿಫಾರಸುಗಳನ್ನು ಮಾಡಿದೆ. ಅದರಲ್ಲಿ ಹಲವು ದೋಷಗಳೂ ಇರಬಹುದು. ಆಯೋಗ ಮಾಡಿರುವುದು ಆರಂಭಿಕ ಕೆಲಸವನ್ನು ಮಾತ್ರ. ಪ್ರಜಾಪ್ರಭುತ್ವ ಬೆಳೆಯುವುದೇ ಜನತೆಯ ಒತ್ತಡದಿಂದ. ಜನತೆ ಹೋರಾಟಗಳ ಮೂಲಕ ಪ್ರಜಾಪ್ರಭುತ್ವದ ಕ್ರಾಂತಿಯ ಸಾಧನೆಯನ್ನು ಸಾಧಿಸಬೇಕಾಗಿದೆ. ಆಯೋಗ ತನ್ನ ಕೆಲಸ ಮುಗಿಸಿದೆ ಅದು ಬಿಟ್ಟಲ್ಲಿಂದ ಜನತೆ ಆ ಕಾರ್ಯವನ್ನು ಕೈಗೆತ್ತಿಕೊಳ್ಳ ಬೇಕಾಗಿದೆ.

ಬೆಳೆಯ...

ಸರ್ಕಾರಿಯಾ ಆಯೋಗ ಕೇಂದ್ರ ರಾಜ್ಯಗಳ ಸಂಬಂಧ ಕುರಿತಂತೆ ತಮ್ಮ ಅನುಭವವನ್ನು ತಿಳಿಸುವಂತೆ ಬರೆದ ಪತ್ರಕ್ಕೆ ಇ.ಎಂ.ಎಸ್ ನಂಬೂದ್ರಿಪಾಡ್ ಬರೆದ ಉತ್ತರದ ಅಂಶಗಳು ಇಲ್ಲಿವೆ.

ಕೇಂದ್ರದಲ್ಲಿ ಆಳುವ ಪಕ್ಷದ ಸರ್ವಾಧಿಕಾರೀ ಪ್ರವೃತ್ತಿ ಈಗ ಎಲ್ಲರಿಗೂ ಅರ್ಥವಾಗುತ್ತಿದೆ. ಆದರೆ ಸ್ವಾತಂತ್ರ್ಯಾ ನಂತರದ ಮೊದಲ ದಶಕದಲ್ಲೇ ಕಾಣಬಹುದು ಎಂದು ಈ ಪತ್ರದಿಂದ ತಿಳಿಯುತ್ತದೆ.

ಶಾಸಕರುಗಳ ಸಭೆಯಲ್ಲಿ ಕೇರಳ ಕಮ್ಯೂನಿಸ್ಟ್ ಪಕ್ಷದ ಶಾಸಾಂಗದ ನಾಯಕನಾಗಿ ನಾನು 1957 ರಲ್ಲಿ ವಿಧಿಬದ್ಧವಾಗಿ ಚುನಾಯಿತನಾದಾಗ ಮುಖ್ಯಮಂತ್ರಿಯಾಗಿರುವ ನನ್ನ ಹಕ್ಕನ್ನು ರಾಜ್ಯಪಾಲರ ಮುಂದಿಟ್ಟೆ. ಆದರೆ ರಾಜ್ಯಪಾಲರು ನನ್ನ ಈ ಹಕ್ಕನ್ನು ನಿರಾಕರಿಸಿದರು. ಐದು ಜನ ಪಕ್ಷೇತರ

...ಟ್ಟುಗಳನ್ನು ದಾಖಲಿಸಿದೆ ! ...ಕಳಿಸದಂತೆ ಕ್ರಮಗಳಿಲ್ಲ !

...ಸ್. ಮಣಿ.

ಶಾಸಕರೊಡನೆ ಅವರು ಪ್ರತ್ಯಕ್ಷ ಸಂದರ್ಶನ ನಡೆಸಿದರು. ನಮ್ಮ ಪಕ್ಷದ ಚಿಹ್ನೆಯ ಮೇಲೆ ಆರಿಸಿ ಬಂದ ಅವರು ತಮ್ಮ ಬೆಂಬಲ ನೀಡುವಲ್ಲಿ ದೃಢವಾಗಿದ್ದಾರೆಂಬುದು ಖಚಿತವಾದ ಮೇಲೆ ರಾಜ್ಯಪಾಲರು ನನ್ನನ್ನು ಸರಕಾರ ರಚಿಸುವಂತೆ ಆಹ್ವಾನಿಸಿದರು.

ನನ್ನನ್ನು ಸರ್ಕಾರ ರಚಿಸುವಂತೆ ಕೋರಿಯಾದ ನಂತರವೂ ರಾಜ್ಯಪಾಲರು ಆಂಗ್ಲೋ-ಇಂಡಿಯನ್ ಸ್ಥಾನಕ್ಕೆ ತಾವೇ ನಾಮಕರಣ ಮಾಡಿದರು. ಒಮ್ಮೆ ಸರ್ಕಾರ ರಚನೆಯಾದ ಮೇಲೆ ರಾಜ್ಯಪಾಲರ ಪಾತ್ರ ಈ ನಾಮಕರಣದಲ್ಲಿ ಇರಬಾರದು. ಮತ್ತು ಅಂತಹ ನೇಮಕಾತಿ ಸರ್ಕಾರದ ಶಿಫಾರಸ್ಸಿನ ಮೇಲೆ ಆಗಬೇಕೆಂದು ನಾನು ಈ ನಾಮಕರಣವನ್ನು ವಿರೋಧಿಸಿದೆ. ಆದರೆ ರಾಜ್ಯಪಾಲರು ತಮ್ಮದೇ ನಾಮಕರಣ ಮಾಡೇ ಬಿಟ್ಟರು. ಹಾಗೇ ನೇಮಕವಾದ ಕಾಂಗ್ರೆಸ್ಸಿಗರು.

ಶಿಕ್ಷಣ ಮಸೂದೆ ಈ ಎರಡೂ ಮಸೂದೆಗಳು ಸ್ವಲವಾಗಿ ಕೇಂದ್ರ ಸರ್ಕಾರದ ನೀತಿಗಳಿಗನುಗುಣವಾಗಿದ್ದವು. ಹಾಗೇ ನೋಡಿದರೆ ಹಲವು ಕಾಂಗ್ರೆಸಿಗರೇ ಕಾಂಗ್ರೆಸ್ಸೇತರ-ಕಮ್ಯೂನಿಸ್ಟ್ ಸರ್ಕಾರ ತಮ್ಮ ಪಕ್ಷದ ನೀತಿಗಳ ಅನುಷ್ಠಾನದ ಘೋಷಣೆ ಮಾಡಬೇಕಾಯಿತಲ್ಲ ಎಂದು ಖೇದ ಗೊಂಡಿದ್ದರು.

ಇಂತಹ ಮಸೂದೆಯನ್ನು ಪಟ್ಟಭದ್ರ ಹಿತಾಸಕ್ತಿಗಳು ವಿರೋಧಿಸಿದವು. ಅವಕ್ಕೆ ಕಾಂಗ್ರೆಸ್ಸಿನ ಬೆಂಬಲ ಪೂರ್ಣವಾಗಿ ದೊರೆಯಿತು. "ವಿಮೋಚನಾ ಹೋರಾಟವೆಂಬ ನಾಟಕ ನಡೆಯಿತು. ಈ ಪರಿಸ್ಥಿತಿಯ ಪ್ರಯೋಜನ ಪಡೆದುಕೊಂಡು ಕೇಂದ್ರ ಸರ್ಕಾರ ಕೇರಳ ಸರ್ಕಾರವನ್ನು ವಜಾ ಮಾಡಿತು. . . . ಸಂವಿಧಾನದ 356 ನೇ ವಿಧಿ ಹಾಗೇ ಉಳಿದರೆ ಇಂತಹ ಘಟನೆಗಳು ಪುನಃ ಘಟಿಸುವುದಿಲ್ಲವೇ?

ತತ್ಸಂಬಂಧಿತ ಅವಕಾಶಗಳೊಂದಿಗೆ ತೆಗೆದು ಹಾಕುವುದು.

ರಾಜ್ಯದ ಪಟ್ಟಿಯಲ್ಲಿ ಸೇರಿರುವ ವಿಷಯಗಳ ಮೇಲಿನ ಶಾಸನ ಮತ್ತು ಕಾರ್ಯದ ನಿರ್ವಹಣೆಯಲ್ಲಿ ರಾಜ್ಯ ಶಾಸಕಾಂಗ ಮತ್ತು ಕಾರ್ಯಾಂಗಕ್ಕೇ ಪರಮಾಧಿಕಾರ ನೀಡುವುದು........

> ಆಯೋಗ ಹಲವು ಶಿಫಾರಸ್ಸುಗಳನ್ನು ಮಾಡಿದೆ. ಸೂಚನೆಗಳನ್ನು ಕೊಟ್ಟಿದೆ. ಅದು ಮಾಡಿರುವುದು ಆರಂಭಿಕ ಕೆಲಸ ಮಾತ್ರ. ತನ್ನ ಕೆಲಸ ಮುಗಿಸಿದೆ. ಅದು ಬಿಟ್ಟಲ್ಲಿಂದ ಜನತೆ ಆ ಕಾಯಕವನ್ನು ಕೈಗೆತ್ತಿಕೊಳ್ಳಬೇಕು. ಪ್ರಜಾಪ್ರಭುತ್ವ ಬೆಳೆಯುವುದೇ ಜನತೆಯ ಒತ್ತಡದಿಂದ.

ಐದು ಜನ ಪಕ್ಷೇತರರನ್ನೂ ಸೇರಿಸಿದರೆ ನಾವು 65 ಸ್ಥಾನಗಳನ್ನು ಗೆದ್ದಿದ್ದೆವು. ವಿರೋಧ ಪಕ್ಷಗಳು 61 ಸ್ಥಾನಗಳನ್ನು ಗೆದ್ದಿದ್ದರೂ. ರಾಜ್ಯಪಾಲರ ಈ ನೇಮಕಾತಿ ವಿರೋಧ ಪಕ್ಷದ ಬಲವನ್ನು 62 ಕ್ಕೇರಿಸಿತು. ರಾಜ್ಯಪಾಲರು ಮೊದಲು ಐದು ಪಕ್ಷೇತರರನ್ನು ಪ್ರತ್ಯಕ್ಷವಾಗಿ ಭೇಟಿ ಮಾಡಿದ್ದು ಅವರ ಒಗ್ಗಟ್ಟನ್ನು ಮುರಿಯಲು ಆದರೆ ಅದು ಸಾಧ್ಯವಾಗಲಿಲ್ಲವೆಂಬುದು ಬೇರೆ ಮಾತು. ಹೀಗೆ ರಾಜ್ಯಪಾಲರ ಹುದ್ದೆ ತನಗೆ ಆ ಸ್ಥಾನ ನೀಡಿದ ಪಕ್ಷದ ಪರವಾಗಿ ಕೆಲಸ ಮಾಡಿತು. . . .

(ಕೇರಳದ 1965 ರ ಮಧ್ಯಕಾಲಿನ ಚುನಾವಣೆಗಳ ಅನುಭವವೂ ಬೇರೆಯಾಗಿಲ್ಲ. ಆ ಚುನಾವಣೆಯಲ್ಲಿ

...ೊಗ್ಗಿನಲ್ಲಿ

ಯಾವುದೇ ಪಕ್ಷಕ್ಕೆ ಸ್ಪಷ್ಟ ಬಹುಮತ ದೊರೆಯಲಿಲ್ಲ. ಆದರೆ ನನ್ನ ಪಕ್ಷ ಅತ್ಯಂತ ಹೆಚ್ಚಿನ ಸ್ಥಾನಗಳನ್ನು ಗೆದ್ದ ಪಕ್ಷವಾಗಿತ್ತು. ನಾನು ರಾಜ್ಯಪಾಲರನ್ನು ಭೇಟಿ ಮಾಡಿ ನನಗೆ ಸರ್ಕಾರ ರಚಿಸಲು ಅವಕಾಶ ಮಾಡಿಕೊಡುವಂತೆ ಕೇಳಿದೆ. ಕೆಲವು ವಿರೋಧ ಪಕ್ಷಗಳು ನನಗೆ ಬೆಂಬಲ ಕೊಡುವ ಸಂಭವವಿತ್ತು. ಇದಕ್ಕೆ ಬಂಧನದಲ್ಲಿದ್ದ ನನ್ನ ಪಕ್ಷದ 29 ಶಾಸಕರ ಬಿಡುಗಡೆಯಾಗಬೇಕಿತ್ತು. ಆದರೆ ರಾಜ್ಯಪಾಲರು ಯಾವುದೇ ಪಕ್ಷದಿಂದ ಸರ್ಕಾರವನ್ನು ರಚಿಸಲು ಸಾಧ್ಯವಿಲ್ಲವೆಂದು ನನ್ನ ಕೋರಿಕೆಯನ್ನು ನಿರಾಕರಿಸಿದರು. . . .

--

ಮುಖ್ಯಾಯಕ್ಕೆ ಮುನ್ನ ಇನ್ನೆರಡು ಘಟನೆಗಳು

ಮುಖ್ಯಮಂತ್ರಿಯಾಗಿ ನನ್ನ ಮೊದಲ ಅವಧಿ ಅಂದರೆ 1957-59 ರಲ್ಲಿ, ಎರಡು ಮಸೂದೆಗಳನ್ನು ಶಾಸನ ಸಭೆ ಸ್ವೀಕರಿಸಿತು. ಕಾರ್ಮಿಕ ಸಂಬಂಧಗಳ ಮಸೂದೆ ಮತ್ತು

ಪುನಃ ಕೇರಳ ಸರ್ಕಾರದ ನೇತೃತ್ವವನ್ನು ನಾನು 1967-69ರಲ್ಲಿ ವಹಿಸಿದಾಗ ಸಂವಿಧಾನಾತ್ಮಕ ವಿವಾದವೊಂದು ತಲೆದೋರಿತು. ಕೇಂದ್ರ ಸರ್ಕಾರದ ನೌಕರರು ಒಂದು ದಿನದ ಮುಷ್ಕರ ನಡೆಸುವವರಿದ್ದರು ಕೇಂದ್ರ ಸರ್ಕಾರದ ಗೃಹಖಾತೆ ಇದನ್ನು ಗಂಭೀರವಾಗಿ ಪರಿಗಣಿಸಲು ನಿರ್ಧರಿಸಿತು. ಮುಷ್ಕರಕ್ಕೆ ಪ್ರಚೋದಿಸುವವರನ್ನು ವಿಚಾರಣೆಯಿಲ್ಲದೆ ಬಂಧನದಲ್ಲಿಡಬೇಕೆಂಬ ನಿರ್ದೇಶನಗಳನ್ನು ರಾಜ್ಯ ಸರ್ಕಾರಗಳಿಗೆ ಕೊಡಲಾಯಿತು. ನನ್ನ ಸರ್ಕಾರ ಇದನ್ನು ಸರಿಯಾದ ಕ್ರಮವೆಂದು ಪರಿಗಣಿಸಲಿ. ನಾವು ಯಾರನ್ನೂ ಬಂಧನದಲ್ಲಿಡಲು ನಿರಾಕರಿಸಿದೆವು. ಕೇಂದ್ರ ಮೀಸಲು ಪಡೆಯ ಸೇವೆಯನ್ನು ನಾವು ನಿರಾಕರಿಸಿದೆವು. ಅಂದಿನ ಕೇಂದ್ರ ಗೃಹ ಮಂತ್ರಿಗಳಾದ ವೈ.ಬಿ. ಚವ್ಹಾಣರು ನನಗೆ ಕೇಂದ್ರದ ನಿರ್ದೇಶನವನ್ನು ಆಚರಣೆಗೆ ತರದೇ ಇರುವುದಕ್ಕೆ ಸಂಬಂಧಿಸಿದಂತೆ ಸಂವಿಧಾನದಲ್ಲಿ ಇರುವ ವಿಧಿಯನ್ನು ನನ್ನ ಸರ್ಕಾರದ ವಿರುದ್ಧ ಉಪಯೋಗಿಸಬಹುದೆಂಬ ಎಚ್ಚರಿಕೆಯ ತಂತಿ ಸಂದೇಶವೊಂದನ್ನು ಕಳುಹಿಸಿದರು. ನಾನು ನನ್ನ ನಿಲುವಿಗೆ ದೃಢವಾಗಿ ಅಂಟಿಕೊಂಡು ಸಂವಿಧಾನದಲ್ಲಿ ಅವಕಾಶ ಮಾಡಿರುವಂತೆ ಅಂತರ-ರಾಜ್ಯಮಂಡಳಿಯನ್ನು ರಚಿಸುವಂತೆ ಕೇಳಿದೆ. ನನ್ನ ಈ ಬೇಡಿಕೆಯನ್ನು ಕೇಂದ್ರ ಸರ್ಕಾರ ನಿರಾಕರಿಸಿತು. ಕೇಂದ್ರ ಸರ್ಕಾರ ಈ ವಿಷಯವನ್ನು ಮುಂದುವರಿಸಲಿಲ್ಲ. ಕಾರ್ಯರಿಂದ ಬಿಕ್ಕಟ್ಟು ಉದ್ಭವವಾಗಲಿಲ್ಲ.

ನನ್ನ ಅನುಭವಗಳಿಂದ ನಾನು ಕೆಳಕಂಡ ಸಲಹೆಗಳನ್ನು ಮಾಡುತ್ತೇನೆ.

1. ರಾಜ್ಯಪಾಲರು ತಮ್ಮ ಹುದ್ದೆಯನ್ನು ರಾಜ್ಯದ ಸಂವಿಧಾನಿಕ ವ್ಯವಸ್ಥೆಯ ಐಕ್ಯತೆಯ ಚಕ್ರವಾಗಿ ಉಪಯೋಗಿಸಿಕೊಳ್ಳುವುದನ್ನು ತಡೆಯಲು ಅವರ ಅಧಿಕಾರ ಮತ್ತು ಕಾರ್ಯಗಳನ್ನು ಪುನರ್ನಿರ್ಮಿಸುವುದು.

2. ಸಂವಿಧಾನದ 356ನೇ ವಿಧಿಯನ್ನು

ಹಿರಿಯಣ್ಣನಿಗೆ ಲಗಾಮು ಸಲ್ಲ

ರಾಷ್ಟ್ರಾಧ್ಯಕ್ಷರ ಸಮ್ಮತಿಗಾಗಿ ತಡೆ ಹಿಡಿದ ಮಸೂದೆಗಳ ವಿಲೇವಾರಿಯ ಬಗ್ಗೆ ಸರ್ಕಾರಿಯಾ ಆಯೋಗ ಹೇಳುತ್ತದೆ: "ಈ ವಿಷಯದಲ್ಲಿ, ಹಿತಕರವಾದ ಸಂಪ್ರದಾಯದಂತೆ ರಾಷ್ಟ್ರಾಧ್ಯಕ್ಷರ ಅವಗಾಹನೆಗಾಗಿ ತಡೆ ಹಿಡಿದ ಮಸೂದೆಯನ್ನು ಕೇಂದ್ರ ಸರ್ಕಾರಕ್ಕೆ ಅದು ತಲುಪಿದ ನಾಲ್ಕು ತಿಂಗಳೊಳಗಾಗಿ ವಿಲೇವಾರಿ ಮಾಡಬೇಕು" ಈ ವಿಷಯದಲ್ಲಿ, ರಾಜ್ಯಗಳ ಅನುಭವ ಏನು ?

ಮಸೂದೆಗಳ ಸಂಖ್ಯೆ	ವಿಲೇವಾರಿಗೆ ತೆಗೆದುಕೊಂಡ ಅವಧಿ
1. ಆರು ಮಸೂದೆಗಳು	1 1/2 ವರ್ಷಗಳು
2. ಐದು ಮಸೂದೆಗಳು	3 ವರ್ಷಗಳ ನಂತರ
3. ಮೂರು ಮಸೂದೆಗಳು	6 ವರ್ಷಗಳ ನಂತರ
4. ಒಂದು ಮಸೂದೆ	13 ವರ್ಷಗಳ ನಂತರ

ಮೇಲ್ಕಾಣಿಸಿದ ಸತ್ಸಂಪ್ರದಾಯದ ಪಾಲನೆ ಮಾಡುವಂತೆ ಸಲಹೆ ಮಾಡುವ ಆಯೋಗ ಮುಂದೆ ಹೇಳುತ್ತದೆ: "ಆದರೆ ಈ ಮತ್ತು ಇತರ ಸಮಯ ಮಿತಿಯನ್ನು ಸಂವಿಧಾನದಲ್ಲಿ ಸೇರ್ಪಡೆ ಮಾಡುವ ಅವಶ್ಯಕತೆಯಿಲ್ಲ" ಅಂದರೆ ಕೇಂದ್ರ ಸರ್ಕಾರ ಮಾಡುವ ವಿಳಂಬ ಅಂತಹ ಪ್ರಮಾದವಲ್ಲ. ಹಿರಿಯಣ್ಣ ಮಾಡುವ ತಪ್ಪು ಒಪ್ಪೆಂದು ಅರ್ಥವೆ?

ನಮ್ಮ ಪಕ್ಷ ಮುಂಚೂಣಿಯಲ್ಲಿ

ಕೇಂದ್ರ- ರಾಜ್ಯ ಸಂಬಂಧಗಳನ್ನು ಉತ್ತಮಪಡಿಸುವ ಹೋರಾಟದ ಮುಂಚೂಣಿಯಲ್ಲಿ ನಮ್ಮ ಪಕ್ಷ ಸದಾ ಇದೆ. ಉತ್ತಮ ಸಂಬಂಧ ಮೂಡಿ ಬರಬೇಕಾದಲ್ಲಿ ಅದಕ್ಕೆ ಹಿನ್ನೆಲೆಯಲ್ಲಿ ಎಂತಹ ತಯಾರಿ ನಡೆಯಬೇಕು ಎಂಬುದರ ಬಗೆಗೂ ನಮ್ಮ ಪಕ್ಷ ಸ್ಪಷ್ಟ ನಿಲುವನ್ನು ತಾಳಿದೆ. ಕೇಂದ್ರ - ರಾಜ್ಯಗಳ ಸಂಬಂಧದ ಪ್ರಶ್ನೆಯನ್ನು ಚಾರಿತ್ರಿಕವಾಗಿ ವಿಶ್ಲೇಷಿಸಿ ಅವುಗಳ ಕುಂದು ಕೊರತೆಗಳನ್ನು ಅರಿಯುವುದರ ಜೊತೆಗೇ ಪರಿಹಾರಗಳನ್ನು ಸೂಚಿಸಿದೆ. ಕೇಂದ್ರದ ಅಪಾಯಕಾರಿ ಧೋರಣೆಗಳ ವಿರುದ್ಧದ ಹೋರಾಟಗಳಿಗೂ ಈ ವಿಶ್ಲೇಷಣೆಯೇ ಬುನಾದಿ ಹಾಕಿದೆ. ಎಡರಂಗದ ನಮ್ಮ ಮುಖ್ಯಮಂತ್ರಿಗಳು ರಾಷ್ಟ್ರ ಮಟ್ಟದ ಎಲ್ಲ ವೇದಿಕೆಗಳನ್ನೂ ನಮ್ಮ ದೃಷ್ಟಿಕೋನವನ್ನು ವಿವರಿಸಲು, ಹೋರಾಟ ಮುಂದುವರಿಸಲು ಉಪಯೋಗಿಸಿಕೊಂಡಿದ್ದಾರೆ. ನಾವು ಹೊಂದಿರುವ ತಾತ್ವಿಕ ನಿಲುವಿಗಾಗಿ ಹಲವು ತ್ಯಾಗಗಳನ್ನು ನಮ್ಮ ಸರ್ಕಾರಗಳು ಮಾಡಬೇಕಾಗಿ ಬಂದಿದೆ.

ಹಾಗೇ ಕೇಂದ್ರ-ರಾಜ್ಯಗಳ ಸಂಬಂಧ ಉತ್ತಮಗೊಳ್ಳುವುದರಿಂದ ಎಲ್ಲ ಸಮಸ್ಯೆಗಳೂ ಪರಿಹಾರವಾಗುತ್ತವೆಂಬ ಭ್ರಮೆಗಳು ನಮಗಿಲ್ಲ. ಆದರೆ ರಾಜ್ಯಗಳಿಗೆ ಸ್ವಾಯತ್ತತೆ ನೀಡುವುದು, ಕೇಂದ್ರದ ಸರ್ವಾಧಿಕಾರಿ ಹಿಡಿತವನ್ನು ಸಡಿಲಗೊಳಿಸುವುದರಿಂದ ಜನರಿಗೆ ಪಟ್ಟಭದ್ರ ಸಕ್ತಿಗಳ ವಿರುದ್ಧ ಹೋರಾಡುವ ಶಕ್ತಿಯನ್ನು ನೀಡುತ್ತದೆಂಬುದೇ ನಮ್ಮ ನಿಲುವು.

ನಮ್ಮ ಪಕ್ಷ ದೇಶದ ಏಕತೆಯನ್ನು ಬಯಸುತ್ತದೆ. ಆದ್ದರಿಂದಲೇ ಎಲ್ಲ ವಿಚ್ಛಿದ್ರಕಾರಿ ಶಕ್ತಿಗಳನ್ನು ನಾವು ವಿರೋಧಿಸುತ್ತೇವೆ. ನಾವು ಖಂಡಿತವಾಗಿಯೂ ಸಮರ್ಥ ಮತ್ತು ಪರಿಣಾಮಕಾರಿ ಕೇಂದ್ರವನ್ನು ಬಯಸುತ್ತೇವೆ. ಯಾಕೆಂದರೆ ಅಂತಹ ಸಮರ್ಥ ಕೇಂದ್ರ ಮಾತ್ರ ದೇಶವನ್ನು ರಕ್ಷಿಸಲು ಸಾಧ್ಯ ಹಾಗೇಯೇ ದೇಶದ ಆರ್ಥಿಕ ಜೀವನವನ್ನು ಕ್ರೋಢೀಕರಿಸಲು ಮತ್ತು ಕೇಂದ್ರದ ಇತರ ಜವಾಬ್ದಾರಿಗಳಾದ ವಿದೇಶಾಂಗ ನೀತಿ ಸಂಪರ್ಕ ವಿದೇಶಿವ್ಯವಹಾರ ಇತ್ಯಾದಿಗಳನ್ನು ನಿರ್ವಹಿಸಲು ಸಾಧ್ಯ.

ಆದರೆ ಇದರರ್ಥ ಕೇಂದ್ರ ಸರ್ವಾಧಿಕಾರಿಯಾಗುವುದಲ್ಲ. ರಾಜ್ಯಗಳ ಅಡಿಯಾಳುಗಳಲ್ಲ. ರಾಜ್ಯಗಳ ಪ್ರಜಾಪ್ರಭುತ್ವ ಹಕ್ಕುಗಳನ್ನು ದಮನಿಸುವ ಕಾರ್ಯಗಳನ್ನು ಕೇಂದ್ರ ನಡೆಸಕೂಡದು. ರಾಜ್ಯಗಳಿಗೆ ಸ್ವಾಯತ್ತತೆಯನ್ನೂ ನೀಡಬೇಕು. ಹಾಗೇ ಸ್ವಾಯತ್ತತೆ ನೀಡುವುದರಿಂದ ರಾಜ್ಯದ ಶಾಸಕಾಂಗಗಳಿಗೆ ರಾಜ್ಯದ ವಿಷಯಗಳ ಬಗೆಗೆ ಪೂರ್ಣ ಅಧಿಕಾರ ನೀಡುವುದರಿಂದ ಒಕ್ಕೂಟದ ಬಲ ವರ್ಧಿಸುತ್ತದೆ.

ಶ್ರೀನಗರದಲ್ಲಿ 1983 ರ ಅಕ್ಟೋಬರ್ 5-7 ರ ವರೆಗೆ ನಡೆದ ವಿರೋಧ ಪಕ್ಷಗಳ ಸಭೆ ಮುಂದೆ ಸಿ.ಪಿ.ಐ (ಎಂ) ಈ ಕೆಳಕಂಡ ಪ್ರಸ್ತಾವಗಳನ್ನು ಇರಿಸಿತು.

1. ರಾಜ್ಯಗಳ ಸ್ವಾಯತ್ತತೆಯನ್ನು ರಕ್ಷಿಸುವುದು. ಸಂವಿಧಾನದ 248 ನೇ ವಿಧಿಗೆ ತಿದ್ದುಪಡಿ ಮಾಡುವುದು. ರಾಜ್ಯದ ವಿಷಯಗಳ ಮೇಲೆ ಶಾಸಕಾಂಗಕ್ಕೆ ಹೆಚ್ಚಿನ ಅಧಿಕಾರವಿರಬೇಕು.

2. ಯೋಜನೆ ಬೆಲೆ ನಿರ್ಧಾರ, ವೇತನ ನಿರ್ಧಾರ ಇತ್ಯಾದಿಗಳ ಮೇಲಿನ ರಾಜ್ಯಗಳ ವ್ಯಾಪ್ತಿಯನ್ನು ವಿಸ್ತರಿಸುವುದು.

3. ಒಂದಕ್ಕಿಂತ ಹೆಚ್ಚು ರಾಜ್ಯಗಳಿಗೆ ಸಂಬಂಧಪಟ್ಟ ಭಾರೀ ಉದ್ಯಮಗಳನ್ನು ಕೇಂದ್ರದ ಪಟ್ಟಿಯಲ್ಲಿ ಸೇರಿಸುವುದು.

4. ಆರ್ಥಿಕ ಆಯೋಗ ಮತ್ತು ಹಣಕಾಸು ವಿತರಣೆ ವಿಧಿಗೆ ತಿದ್ದುಪಡಿ ತರುವುದು.

5. ಸಂವಿಧಾನ 356 ಮತ್ತು 357 ನೇ ವಿಧಿಗಳನ್ನು ತೆಗೆದು ಹಾಕುವುದು (ಇವು ರಾಜ್ಯ ಸರ್ಕಾರವನ್ನು ವಜಾಗೊಳಿಸುವ ಕೇಂದ್ರದ ಅಧಿಕಾರಕ್ಕೆ ಸಂಬಂಧಪಟ್ಟವು)

6. ರಾಜ್ಯದ ಶಾಸಕಾಂಗಗಳು ಸಮ್ಮತಿಸಿದ ಮಸೂದೆಗಳನ್ನು ರಾಷ್ಟ್ರಾಧ್ಯಕ್ಷರ ಸಮ್ಮತಿಗಾಗಿ ಕಾಯ್ದಿರಿಸುವುದಕ್ಕೆ ರಾಜ್ಯಪಾಲರುಗಳಿಗೆ ಅಧಿಕಾರ ನೀಡುವ ಸಂವಿಧಾನದ 200 ಮತ್ತು 201 ನೇ ವಿಧಿಗಳನ್ನು ಕೈಬಿಡುವುದು.


7. ರಾಜ್ಯಸಭೆಗೆ ನೇರ ಚುನಾವಣೆ ನಡೆಸುವುದು ಮತ್ತು ಎರಡೂ ಸಭೆಗಳಿಗೆ (ರಾಜ್ಯಸಭೆ ಮತ್ತು ಲೋಕಸಭೆ) ಸಮಾನ ಅಧಿಕಾರ ನೀಡುವುದು.

8. ಅಖಿಲ ಭಾರತ ಸೇವೆಗಳಾದ ಐ.ಎ.ಎಸ್ ಇತ್ಯಾದಿ ಸೇವೆಗಳ ಮೇಲಿನ ಕೇಂದ್ರ ಸರ್ಕಾರದ ಹಿಡಿತವನ್ನು ನಿಷೇಧಿಸುವುದು.

9. ಭಾಷೆಗಳ ಬಗೆಗೆ ಸರಿಯಾದ ನಿಲುವು ತಳೆಯುವುದು ಇಂಗ್ಲೀಷನ್ನು ಬದಿಗೊತ್ತಬೇಕು. ಅಂತರ್ ಸಂಪರ್ಕ ಭಾಷೆಯನ್ನು ಬೆಳೆಸುವ ಕೆಲಸವನ್ನು ಜನತೆಗೆ ಬಿಡಬೇಕು.

10. ಚುನಾವಣೆಗಳಿಗೆ ತಿದ್ದುಪಡಿ ಮಾಡುವುದು. ಇಂದಿನ ಪದ್ಧತಿಯಲ್ಲಿ ಅಲ್ಪ ಮತ ಪಡೆದವನು ಚುನಾಯಿತನಾಗುವ ಸಾಧ್ಯತೆ ಇದೆ. ಈ ಸಾಧ್ಯತೆಯನ್ನು ಇಲ್ಲವಾಗಿಸುವುದು.

11. ಜಮ್ಮು ಮತ್ತು ಕಾಶ್ಮೀರದ ಇಂದಿನ ವಿಶೇಷ ಸ್ಥಾನಮಾನವನ್ನು ಉಳಿಸಿಕೊಳ್ಳುವುದು.



18-6-1989

ಬಂಟ್ವಾಳ ತಾಲೋಕಿನಾದ್ಯಂತ ಜನಜಾಗೃತಿ ಸಭೆಗಳು

ಸಿ.ಪಿ.ಐ. (ಎಂ) ಬಂಟ್ವಾಳ ತಾಲೋಕು ಸಮಿತಿ ಇತ್ತೀಚಿನ ರಾಜ್ಯದ ರಾಜಕೀಯ ಬೆಳವಣಿಗೆ ಕುರಿತು ತಾಲೋಕಿನ ಜನತೆಯಲ್ಲಿ ಜಾಗೃತಿಯನ್ನುಂಟು ಮಾಡಲು ವ್ಯಾಪಕ ಕಾರ್ಯಕ್ರಮ ಗಳನ್ನು ಅವಿಶ್ರಾಂತವಾಗಿ ನಡೆಸುತ್ತಾ ಬರುತ್ತಿದೆ.

ಕೇಂದ್ರ ಸರ್ಕಾರ ಜನತಾದಳ ಸರ್ಕಾರವನ್ನು ಅಕ್ರಮವಾಗಿ ಉರುಳಿಸಿ ರಾಷ್ಟ್ರಪತಿ ಆಡಳಿತ ಜಾರಿಗೊಳಿಸಿದ ಸರ್ವಾಧಿಕಾರಿ ಹಾಗೂ ಜನವಿರೋಧಿ ಕೃತ್ಯವನ್ನು ಜನತೆಗೆ ವಿವರಿಸುವ ಸಾರ್ವಜನಿಕ ಸಭೆಗಳನ್ನು ಸಂಘಟಿಸಿದೆ. ಅದೇರೀತಿಯಲ್ಲಿ ಸಿ.ಪಿ.ಐ. (ಎಂ) ತ್ರಿಪುರ ನಾಯಕರ ಮೇಲೆ ಕಾಂಗ್ರೆ ಗೂಂಡಾಗಳು ನಡೆಸಿದ ಹಿಂಸಾತ್ಮಕ ಖಂಡಿಸುವ ರೈತರ-ಕಾರ್ಮಿಕರ ಪ್ರಶ್ನೆಗಳನ್ನು ಬಗೆಹರಿಸಲು ಒತ್ತಾಯಿಸಿ ವಿವಿಧ ಚಳುವಳಿಯನ್ನು ನಡೆಸಿದೆ. ಈ ಕುರಿತು ನಡೆಸಿದ ಜನರ ಹೋರಾಟಗಳ ವಿವರವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.

ಮೇ 12 ರಂದು ಜರುಗಿದ ತಾಲೋಕು ಸಮಿತಿ ಸಭೆಯು ತ್ರಿಪುರಾದಲ್ಲಿ ಮಾಜಿ ಮುಖ್ಯ ಮಂತ್ರಿ ಹಾಗೂ ಸಿ.ಪಿ.ಐ. (ಎಂ) ಪಾಲಿಟ್ ಬ್ಯೂರೋ ಸದಸ್ಯ ಕಾ॥ ನೃಪೇನ್ ಚಕ್ರವರ್ತಿಯವರ ಮೇಲೆ ನಡೆದ ಕೊಲೆ ಪ್ರಯತ್ನವನ್ನು ಹಾಗೂ ಕಛೇರಿ ಮೇಲಿನ ದಾಳಿಯನ್ನು ಖಂಡಿಸಿ ಪ್ರಧಾನಿಯವರಿಗೆ ತಂತಿ ಸಂದೇಶ ಕಳುಹಿಸಲಾಗಿದೆ. ಮೇ 20 ರಂದು ಕಡಂಬಳಿಕೆಯಲ್ಲಿ ಬಹಿರಂಗ ಸಭೆಯನ್ನು ನಡೆಸಲಾಯಿತು ಸಭೆಯಲ್ಲಿ ಮಾತನಾಡಿದ ಪಕ್ಷದ ಜಿಲ್ಲಾ ಕಾರ್ಯದರ್ಶಿ ಕಾ॥ಕೆ.ಆರ್. ಶ್ರೀಯಾಸ್ ರವರು ನೆಹರು ರೋಜಗಾರ್ ಯೋಜನೆಯಿಂದ ನಿರುದ್ಯೋಗ ಸಮಸ್ಯೆಗೆ ಪರಿಹಾರ ಸಾಧ್ಯವಿಲ್ಲವೆಂದು ಇದು ಚುನಾವಣಾ ದೃಷ್ಟಿಯಲ್ಲಿ ಜನತೆಗೆ ರಾಜೀವ್‌ಗಾಂಧೀ ಬಗೆಯುತ್ತಿರುವ ದೊಡ್ಡ ಮೋಸವೆಂದರು.

ಮೇ 17 ಮತ್ತು 18 ರಂದು ತಾಲೋಕಿನ 31 ಗ್ರಾಮಗಳನ್ನು ಸಂಚರಿಸಿ ವಾಹನ ಜಾಥ ನಡೆಸಿ ಸಹಸ್ರಾರು ಜನತೆಯನ್ನು ತಲುಪಿ ಹತ್ತಾರು ಸಭೆಗಳನ್ನು ನಡೆಸಲಾಯಿತು. ಮೇ 21 ರಂದು ಕಕ್ಕೆಪದವು ನಲ್ಲಿ ಸಾರ್ವಜನಿಕ ಸಭೆ ನಡೆಸಿ ದೂರದರ್ಶನ ಮತ್ತು ಆಕಾಶವಾಣಿಗಳು ಕಾಂಗ್ರೆನ ಸುತ್ತೋಲೆಗಳಾಗಿವೆ ಎಂದು ಈ ಸಭೆಯಲ್ಲಿ ಖಂಡಿಸಲಾಯಿತು. 22 ರಂದು ಪಕ್ಷದ ಸರ್ವಸದಸ್ಯರ ಸಭೆ ನಡೆಸಲಾಯಿತು. ಭೂನ್ಯಾಯ ಮಂಡಳಿಯ ಮುಂದಿರುವ ಭೂವಿವಾದಗಳನ್ನು ತನಿಖೆ ಮಾಡದೆ ಮುಂದೂಡಿರುವ ಕ್ರಮವನ್ನು ಖಂಡಿಸಿದೆ. ಮೇ 27 ರಂದು ಮೊಳಲಿಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಪ್ರಜಾಪ್ರಭುತ್ವದ ಹಕ್ಕುಗಳನ್ನು ನಾಶ ಮಾಡುತ್ತಿರುವ ಕಾಂಗ್ರೆನ ಅಪಾಯಕಾರಿ ರಾಜಕೀಯ ನೀತಿಯನ್ನು ಎದುರಿಸಲು ಕರೆ ನೀಡಿದೆ. 28 ರಂದು ಉಳಿಗ್ರಾಮದ ಹೆಗ್ಗಣಗುರಿ ಎಂಬಲ್ಲಿ ಸಾರ್ವಜನಿಕ ಸಭೆ ನಡೆಸಲಾಯಿತು ವಾಮದ ಪದವಿನಲ್ಲಿ ನಡೆದ ಸಾರ್ವಜನಿಕ ಸಭೆಗೆ ಮೊದಲು ನೂರಾರು ಜನರ ಮೆರವಣಿಗೆ ನಡೆಸಲಾಯಿತು. ಈಗೇ ತಾಲೋಕಿನ ಹತ್ತಾರು ಕಡೆ ನಡೆದ ಸಭೆಗಳಲ್ಲಿ ಪಕ್ಷದ ಜಿಲ್ಲಾ ಕಾರ್ಯದರ್ಶಿ ಕಾ॥ ಕೆ.ಆರ್. ಶ್ರೀಯಾಸ್. ತಾಲೋಕು ಕಾರ್ಯದರ್ಶಿ ಕಾ॥ ಬಿ. ವಾಸುಗಟ್ಟಿ, ಹೂವಯ್ಯ ಬಂಗೇರ, ಚನ್ನಪ್ಪಬಂಗೇರ, ಬಿ. ರುಕ್ಕಯ್ಯ ಪೂಜಾರಿಯವರುಗಳು ನೇತೃತ್ವ ವಹಿಸಿ ಮಾತನಾಡಿದರು.

ಕಳಸದಲ್ಲಿ ಬಹಿರಂಗ ಸಭೆ

ರಾಜ್ಯದ ರಾಜಕೀಯ ಪರಿಸ್ಥಿತಿ ಕುರಿತು ಜನತೆಯಲ್ಲಿ ಜಾಗೃತಿಯನ್ನುಂಟುಮಾಡಲು ಚಿಕ್ಕಮಗಳೂರು ಜಿಲ್ಲೆಯ ಕಳಸದಲ್ಲಿ ಮೇ 28 ರಂದು ನೂರಾರು ಜನರು ಪಾಲ್ಗೊಂಡಿದ ಸಾರ್ವಜನಿಕ ಸಭೆಯೊಂದನ್ನು ನಡೆಸಲಾಯಿತು. ಈ ಸಭೆಯಲ್ಲಿ ರಾಜ್ಯದಲ್ಲಿ ಜನತಾದಳ ಸರ್ಕಾರವನ್ನು ಅಕ್ರಮವಾಗಿ ವಜಾಗೊಳಿಸಿದ ಕಾಂಗ್ರೆನ ಪ್ರಜಾಪ್ರಭುತ್ವ ವಿರೋಧಿ ರಾಜೀವ್‌ಗಾಂಧಿಯ ಕ್ರಮವನ್ನು ತೀವ್ರವಾಗಿ ಖಂಡಿಸಿ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಯನ್ನು ಸೋಲಿಸುವಂತೆ ಕರೆ ನೀಡಲಾಯಿತು. ಸಭೆಯನ್ನುದ್ದೇಶಿಸಿ ಪಕ್ಷದ ರಾಜ್ಯ ಸಮಿತಿ ಸದಸ್ಯರಾದ ಕಾ॥ ಎಸ್.ಆರ್.ಆರಾಧ್ಯ ಹಾಗೂ ಸ್ಥಳೀಯ ಕಾರ್ಮಿಕ ನಾಯಕ ಕಾ॥ ಅಣ್ಣೆಯವರು ಮಾತನಾಡಿದರು.

ಎ.ಬಿ..ಎಲ್. ಕಾರ್ಮಿಕ ಸಂಘದ ಚುನಾವಣೆಯಲ್ಲಿ ಸಿ.ಐ.ಟಿ.ಯು. ಗೆ ಪ್ರಚಂಡ ಜಯ

ಗುಲ್ಬರ್ಗಾ ಜಿಲ್ಲೆ ಶಹಾಬಾದ್‌ನ ಎ.ಬಿ.ಎಲ್. ಕಾರ್ಮಿಕ ಸಂಘದ ಚುನಾವಣೆಯಲ್ಲಿ ಸಿ.ಐ.ಟಿ.ಯು. ಸಂಘ ಇಂಟಕ್ ಮತ್ತು ಸ್ವತಂತ್ರ ಅಭ್ಯರ್ಥಿಗಳನ್ನು ಸೋಲಿಸಿ ಪ್ರಚಂಡ ಬಹುಮತದಿಂದ ಜಯಗಳಿಸಿದೆ.

ಏಪ್ರಿಲ್ 19 ರಂದು ಜರುಗಿದ ಈ ಚುನಾವಣೆಯಲ್ಲಿ ಪದಾಧಿಕಾರಿಗಳ ಎಲ್ಲಾ 8ಸ್ಥಾನಗಳು ಸಿ.ಐ.ಟಿ.ಯು. ವಶವಾಗಿದೆ. ಕಾರ್ಯಕಾರಿಸಮಿತಿಯ 22ಸ್ಥಾನಗಳಲ್ಲಿ 21 ರಲ್ಲಿ ಜಯ ಗಳಿಸಿದ್ದಾರೆ. 1923 ಕಾರ್ಮಿಕರಲ್ಲಿ 1720ಮಂದಿ ಚುನಾವಣೆಯಲ್ಲಿ ಪಾಲ್ಗೊಂಡರು. ಅತ್ಯಂತ ಹೆಚ್ಚು ಮತ ಪಡೆದವರಲ್ಲಿ ಸಂಘದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಕಾ॥ ಎ.ಬಿ.ದಾಸ ರವರು 1071ಮತ ಪಡೆದರೆ ಕಾರ್ಯದರ್ಶಿ ಕಾ॥ ಫಾಳಪ್ಪಧನ್ನಾ1040 ಮತ ಪಡೆದರು.

ಚುನಾಯಿತ ಪದಾಧಿಕಾರಿಗಳು

		ಪಡೆದ ಮತ
ಅಧ್ಯಕ್ಷರು:	ಕಾ॥ಎ.ಬಿ. ದಾಸ	1071
ಕಾರ್ಯದರ್ಶಿ:	ಫಾಳಪ್ಪಧನ್ನಾ	1040
ಉಪಾಧ್ಯಕ್ಷರು:	ಧರ್ಮವೀರ ಚವ್ಹಾಣ	912
	ಎಸ್.ಆರ್. ಸರವಾಡ್	804
ಸಂಘಟನಾ ಕಾರ್ಯದರ್ಶಿ:	ಜಿ. ರಮೇಶ್	964
ಜಂಟಿ ಕಾರ್ಯದರ್ಶಿ	ಅಣ್ಣಾರಾವ	875
	ದೇವೀಂದ್ರಪ್ಪಾ ನಾಯಕವಾಡ	992
ಖಜಾಂಚಿ:	ಶಾಂತಾರಾಮ	898

ಬೀಡಿ ಡಿಪೋ ಮುಚ್ಚಿ ಸಹಸ್ರಾರು ಕಾರ್ಮಿಕರು ಬೀದಿಪಾಲು

ಕಾಸರಗೋಡು ಜಿಲ್ಲೆಯಲ್ಲಿ ದ.ಕ. ಜಿಲ್ಲೆಯ ಬೀಡಿ ಮಾಲಕರು ನಡೆಸುತ್ತಿರುವ ಭಾರತ್. ಟೆಲಿಫೋನ್ ಇತ್ಯಾದಿ ಬೀಡಿಗಳ ಡಿಪೋಗಳನ್ನು ಮುಚ್ಚಿ 6.000 ಬೀಡಿ ಕಾರ್ಮಿಕರನ್ನು ನಿರುದ್ಯೋಗಕ್ಕೆ ಮತ್ತು ಉಪವಾಸಕ್ಕೆ ತಳ್ಳಿದ ಬೀಡೀ ಮಾಲಕರ ಅಮಾನವೀಯ ಕೃತ್ಯವನ್ನು ಸಿ.ಐ.ಟಿ.ಯು. ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯು ಉಗ್ರವಾಗಿ ಖಂಡಿಸಿದೆ. ಜೂನ್ 3 ರಂದು ಕೆ. ಮೋಣಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ ಜಿಲ್ಲಾ ಸಮಿತಿಯು, ಮುಚ್ಚಿದ ಡಿಪೋಗಳನ್ನು ಕೂಡಲೇ ತೆರೆದು ಕಾರ್ಮಿಕರಿಗೆ ಕೆಲಸ ಕೊಡಬೇಕೆಂದು ಮಾಲಕರನ್ನು ಒತ್ತಾಯಿಸಲು ತೀರ್ಮಾನಿಸಿತು. ಕಾರ್ಮಿಕರನ್ನು ಉಪವಾಸ ಹಾಕುವ ಕುಕೃತ್ಯವನ್ನು ಮಾಲಕರು ಮುಂದುವರಿಸಿದರೆ ದ.ಕ. ಜಿಲ್ಲೆಯಲ್ಲಿ ಸಂಬಂಧಪಟ್ಟ ಬೀಡಿ ಮಾಲಕರ ವಿರುದ್ಧ ತೀವ್ರ ಹೋರಾಟ ನಡೆಸಲು ತೀರ್ಮಾನಿಸಿದ ಸಭೆಯು, ದ.ಕ. ಜಿಲ್ಲೆಯ ಕಾರ್ಮಿಕರು.ಕಾರ್ಮಿಕ ವರ್ಗದ ಪರಂಪರೆಗಳಿಗೆ ಅನುಗುಣವಾಗಿ ಕಾಸರಗೋಡು ಕಾರ್ಮಿಕರ ರಕ್ಷಣೆಗೆ ಸಿದ್ಧರಾಗಲು ಕರೆ ನೀಡಿದೆ.

ಅಗಲಿದ ಎನ್.ಎಲ್.

ನೆಂದಿಕೂರು ಲಕ್ಷ್ಮೀನಾರಾಯಣ ಉಪಾಧ್ಯಾಯರು ಮಂಗಳೂರಿನ ಹಿರಿಯ ಕಾಲೇಜಿನಲ್ಲಿ ಬಿ.ಎ. ಪದವೀಧರರಾದರು. 1940 ಕ್ಕೆ ಮೊದಲೇ ದಕ್ಷಿಣ ಕನ್ನಡದಿಂದ ಹೊರಟು ಮುಂಬಯಿ ಸೇರಿ, ಗೋಷ್ಠದಲ್ಲಿ ಕಮ್ಯೂನಿಸ್ಟರಾದರೂ. ಬ್ರಿಟಿಷರ ಕೈದಿಯಾಗುವುದು ಅನಿವಾರ್ಯವಾಯಿತು. 'ಎನ್.ಎಲ್' ಜತೆ ಸೇರಿದ ಅವರ ತಮ್ಮ ಎನ್.ಕೆ. ಉಪಾಧ್ಯಾಯ ಸೆರೆಮನೆಯ ಸವಿ ಕಂಡರು.

ಬಿಡುಗಡೆಯ ಬಳಿಕ ಎನ್.ಎಲ್. ಕಮ್ಯೂನಿಸ್ಟ್ ಚಳುವಳಿಯನ್ನು ಸಂಘಟಿಸಲು ಮುಂದಾದರು. 'ಎಸ್ಕೆ' ಸಮರಾಭ್ಯಾಸದ ಅನಂತರ, ಪಕ್ಷದ ಸಂಘಟನೆ ಕೈಗೊಂಡರು. ಮಹಾಯುದ್ಧ ಮುಗಿದೊಡನೆ ಬ್ರಿಟಿಷರು ತಮ್ಮ ತಾಯ್ನಾಡಿಗೆ ಹೊರಟರು. ಭಾರತ ಸ್ವತಂತ್ರವಾಯಿತು. ಆ ಸ್ವಾತಂತ್ರ್ಯಕ್ಕೆ ಅರ್ಥ ನೀಡಲು ದೇಶದ ದುಡಿಯುವ ಜನತೆ ಮುಂದಾಯಿತು. ಆಳುವವರೊಡನೆ ಬಡವರ ಹೋರಾಟ. ಜಮೀನ್ದಾರರು, ಅರಸರು, ಬಂಡವಾಳಗಾರರು-ಇವರನ್ನೆಲ್ಲಾ ಜನಸಾಮಾನ್ಯರು ಇದಿರಿಸಿದರು. 'ಕ್ರಾಂತಿ ಚಿರಾಯುವಾಗಲಿ!' ಎಂಬ ಜಯಘೋಷ. ಕೈಯಲ್ಲಿ ಕೆಂಪು ಬಾವುಟ. . . . . ಜನಸಮುದಾಯಕ್ಕೆ ಇದಿರು ಆಳುವರ್ಗ. ಅವರ ಸೆರೆಮನೆಗಳಲ್ಲಿ ಜನನಾಯಕರಿಗೆ ಸ್ವಾಗತ.

ಎನ್.ಎಲ್. ಉಪಾಧ್ಯಾಯರೂ ಅವರ ಹಿರಿತನದಲ್ಲಿ ಸಂಘಟಿತರಾದ ಶ್ರಮಜೀವಿಗಳೂ ಹೋರಾಡಿದ್ದು ಹೀಗೆ ಕನ್ನಡನಾಡಿನ ಹತ್ತು ಹದಿನೆಂಟು ಕಡೆ ಜನ ಜಾಗೃತರಾದರು.

ಈ ವರ್ಷದ ಮೇ ತಿಂಗಳಲ್ಲಿ ಅಗಲಿದವರು ಎನ್.ಎಲ್. ಉಪಾಧ್ಯಾಯರು ಅವರು ಅಗಲಿದರೂ ಅಮರರು.

ನಿರಂಜನ
31 ಮೇ 1987

ರಾಜೀವ್ ಕಿತ್ತೊಗೆದು ರಾಷ್ಟ್ರ ಉಳಿಸಿ

ಯುವಜನತೆಗೆ ಕರೆ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ಮೈಸೂರು ಜಿಲ್ಲಾ 3ನೇ ಸಮ್ಮೇಳನ ಜೂನ್ 10 ರಂದು ಮೈಸೂರು ನಗರದಲ್ಲಿ ಜರುಗಿತು. ರಾಜ್ಯ ಕಾರ್ಯದರ್ಶಿ ಕಾ॥ ಶಿವರಾಂ ರವರು ಸಮ್ಮೇಳನ ಉದ್ಘಾಟಿಸಿ ಮಾತನಾಡುತ್ತಾ ದೇಶವನ್ನು ಎಲ್ಲಾ ವಿಭಾಗದಲ್ಲೂ ಅಧೋಗತಿಗಿಳಿಸುತ್ತಿರುವ ರಾಜೀವ್ ಗಾಂಧಿ ಸರ್ಕಾರವನ್ನು ಮುಂಬರುವ ಚುನಾವಣೆಯಲ್ಲಿ ಕಿತ್ತೊಗೆದು ಎಡ-ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಬಲಪಡಿಸಲು ಯುವಜನತೆ ಸಕ್ರಿಯ ಪಾತ್ರ ವಹಿಸಬೇಕೆಂದು ಅವರು ಕರೆ ನೀಡಿದರು.

ಮೊದಲಿಗೆ ಸ್ಥಾಪಕ ಸದಸ್ಯ ಕಾ॥ ಮೋಹನ್‌ಕುಮಾರ್ ರವರು ಧ್ವಜಾರೋಹಣ ಮಾಡಿ ಮುಖ್ಯ ಅತಿಥಿಗಳಾಗಿ ಮಾತನಾಡಿ ಅಂತರಾಷ್ಟ್ರೀಯ ಮತ್ತು ರಾಷ್ಟ್ರೀಯವಾಗಿ ಬೆಳೆಯುತ್ತಿರುವ ವಿಮೋಚನಾ ಹೋರಾಟಗಳಲ್ಲಿ ಯುವಜನತೆ ವಹಿಸುತ್ತಿರುವ ಪಾತ್ರದ ಬಗ್ಗೆ ವಿವರಿಸಿ ನಮ್ಮ ದೇಶದಲ್ಲಿ ಜಾತೀಯ ಮತೀಯ ಶಕ್ತಿಗಳ ಹಿಂದೆ ಯುವಜನತೆ ಜೊತೆಗೂಡುವ ಅಪಾಯಕಾರಿ ಪ್ರವೃತ್ತಿಯಿಂದ ಪಾರುಮಾಡಿ ಪ್ರಗತಿಪರ ಚಳುವಳಿಯತ್ತ ಬರುವಂತೆ ಆ ಜನತೆಗೆ ಬಾಧಿಸುತ್ತಿರುವ ಸಮಸ್ಯೆಗಳಿಗೆ ಸ್ಪಂದಿಸಿ ಸಂಘಟಿಸುವಲ್ಲಿ ಡಿ.ವೈ.ಎಫ್.ಐ. ಮಹತ್ವದ ಪಾತ್ರವಹಿಸಬೇಕೆಂದು ಹೇಳಿದರು.

ಜಿಲ್ಲೆಯ 50 ಪ್ರತಿನಿಧಿಗಳು ಸಮ್ಮೇಳನದಲ್ಲಿಭಾಗವಹಿಸಿದ್ದರು.ಉಪಾಧ್ಯಕ್ಷ ಕಾ॥ಜಾರ್ಜ್ ಮಂಡಿಸಿದ ವರದಿಯ ಮೇಲೆ 10 ಮಂದಿ. ಸತ್ವಪೂರ್ಣ ಚರ್ಚೆಯಲ್ಲಿ ಪಾಲ್ಗೊಂಡಿದ್ದರು ರಾಜ್ಯ ಅಧ್ಯಕ್ಷ ಕಾ॥ಹೆಚ್.ಎನ್.ನಾಗಮೋಹನದಾಸ್ ರವರು ಸಮಾರೋಪ ಭಾಷಣಮಾಡಿ ಸಂಘಟನೆಯ ಬಹುಮುಖ ಚಟುವಟಿಕೆಗಳ ಬಗ್ಗೆ ವಿವರಿಸಿ ಈ ಸಮ್ಮೇಳನ ನಿಮ್ಮ ಮುಂದಿನ ಸಂಘಟನೆ ಕಟ್ಟಿ ಬೆಳೆಸಲು ಸ್ಫೂರ್ತಿ ನೀಡಲಿ ಎಂದು ಹಾರೈಸಿದರು. 14 ಜನರ ಜಿಲ್ಲಾ ಸಮಿತಿಗೆ ಕಾ॥ ಜಾರ್ಜ್ (ಅಧ್ಯಕ್ಷ) ಕಾ॥ ಬಸವರಾಜ್ (ಕಾರ್ಯದರ್ಶಿ) ಬಿ.ಎಂ.ಶಿವಣ್ಣ (ಸಹ ಕಾರ್ಯದರ್ಶಿ) ದೇವರಾಜ್ (ಉಪಾಧ್ಯಕ್ಷ) ಪುಟ್ಟಸ್ವಾಮಿ (ಖಜಾಂಚಿ) ಯವರು ಆಯ್ಕೆಯಾದರು.

ಬ್ರೂವರೀಸ್ ಕಾರ್ಮಿಕರ ಮೇಲೆ ಗೂಂಡಾ ಹಲ್ಲೆ

ಜೂನ್ 1 ರಂದು ಬೆಂಗಳೂರಿನ ತುಮಕೂರು ರಸ್ತೆಯಲ್ಲಿರುವ ಕರ್ನಾಟಕ ಬ್ರೂವರೀಸ್ ಅಂಡ್ ಡಿಸ್ಟಿಲ್ಲರೀಸ್ ಕಾರ್ಖಾನೆಯ ಮುಂದೆ ಮಾಲೀಕರ ಕಾರ್ಮಿಕ ವಿರೋಧಿ ನೀತಿ ಖಂಡಿಸಿ ಬಹಿರಂಗ ಸಭೆ ನಡೆಸುವ ಸಂದರ್ಭದಲ್ಲಿ ಮ್ಯಾಟಡಾರ್‌ನಲ್ಲಿ ಬಂದ ಮಾಲೀಕರ ಗೂಂಡಾಗಳು ಸಿ.ಐ.ಟಿಯು. ಕಾರ್ಯಕರ್ತರನ್ನು ತೀವ್ರವಾಗಿ ಗಾಯಗೊಳಿಸಿದ್ದಾರೆ. ನೆಲಮಂಗಲ ಸಬ್ ಇನ್ಸ್‌ಪೆಕ್ಟರ್ ಪಾಲಾಕ್ಷಯ್ಯನವರ ಮುಂದೆಯೇ ರೌಡಿಗಳು ಕಬ್ಬಿಣದ ಸಲಾಕೆ, ಮಚ್ಚುಗಳಿಂದ ತೀವ್ರ ರೀತಿಯ ಹಲ್ಲೆ ನಡೆಸುತ್ತಿದ್ದರೂ ಮೂಕ ಪ್ರೇಕ್ಷಕನಂತೆ ನೋಡುತ್ತಾ ದಾಳಿಗೆ ಉತ್ತೇಜನ ನೀಡಿದ ಸಬ್‌ಇನ್‌ಸ್ಪೆಕ್ಟರ್‌ರನ್ನು ಅಮಾನತಿನ 'ಲ್ಲಿಡಬೇಕೆಂದು ಮಾಲೀಕ ಮತ್ತು ರೌಡಿಗಳ ಮೇಲೆ ಸೂಕ್ತಕ್ರಮ ಕೈಗೊಳ್ಳಬೇಕೆಂದು ರಾಜ್ಯಪಾಲರನ್ನು ಒತ್ತಾಯಿಸಿದೆ.

ಕರ್ನಾಟಕದಲ್ಲಿ ಗವರ್ನರ್ ಆಡಳಿತ ಬಂದ ಮೇಲೆ ರೌಡಿಗಳ ಹಲ್ಲೆ ಹೆಚ್ಚುತ್ತಿದೆ ಪ್ರಜೆಗಳ ರಕ್ಷಣೆಗೆ ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಗಾಗಿ ದಬ್ಬಾಳಿಕೆ ದೌರ್ಜನ್ಯವನ್ನು ಪ್ರತಿಭಟಿಸಬೇಕೆಂದು ಸಿ.ಐ.ಟಿ.ಯು.

ಬೆಂಗಳೂರು ಜಿಲ್ಲಾ ಸಮಿತಿ ಕಾರ್ಮಿಕ ವರ್ಗಕ್ಕೆ ಕರೆ ನೀಡುತ್ತದೆ. ಈ ಘಟನೆ ಪ್ರತಿಭಟಿಸಿ ಕಾರ್ಮಿಕರ ಬೃಹತ್ ಮೆರವಣಿಗೆ ಮತ್ತು ಸಾರ್ವಜನಿಕ ಸಭೆಯನ್ನು ಏರ್ಪಡಿಸಲಾಗುವುದೆಂದು ಕಾರ್ಮಿಕ ಸಂಘದ ಧಾರೀಣ ಹಾಗೂ ಸಿ.ಐ.ಟಿ.ಯು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಾ॥ ಕೆ.ಎಸ್.ಸುಬ್ರಮಣ್ಯಂರವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಉಡುಪಿ - ಜನಜಾಗೃತಿ ಸಭೆಗಳು

ಕರ್ನಾಟಕದಲ್ಲಿ ಜನತಾದಳ ಸರ್ಕಾರವನ್ನು ಸಂವಿಧಾನ ಬಾಹಿರವಾಗಿ ವಜಾಗೊಳಿಸಿದ ಕಾಂಗ್ರೆ ಸರ್ವಾಧಿಕಾರಿ ನೀತಿ ಪ್ರತಿಭಟಿಸಿ ವ್ಯಾಪಕ ಪ್ರಚಾರ ಪ್ರಕ್ಷೋಭೆ ನಡೆಸಲು ಸಿ.ಪಿ.ಐ.(ಎಂ) ರಾಜ್ಯ ಸಮಿತಿ ನೀಡಿದ ಕರೆಯಂತೆ ಉಡುಪಿ ತಾಲೋಕಿನಾದ್ಯಂತ ವಾಹನ ಜಾಥ ಮೂಲಕ ಜನ ಜಾಗೃತಿ ಸಭೆಗಳನ್ನು ನಡೆಸಲಾಯಿತು.

ಕಾಂಗ್ರೆಸ್‌ನ 42 ವರ್ಷಗಳ ಆಡಳಿತ ದೇಶದಲ್ಲಿ ಬಡತನ, ನಿರುದ್ಯೋಗ ಬೆಲೆ ಏರಿಕೆಯನ್ನು ತಡೆಗಟ್ಟುವಲ್ಲಿ ವಿಫಲವಾಗಿದ್ದು ಕಾಂಗ್ರೇಸೇತರ ಸರ್ಕಾರಗಳನ್ನು ಅಕ್ರಮವಾಗಿ ವಜಾಗೊಳಿಸುವ ಪ್ರಜಾಪ್ರಭುತ್ವವನ್ನು ಗಾಳಿಗೆ ತೂರುವ ಕಾಂಗ್ರೆ ನೀತಿಯನ್ನೂ ಜನತೆಗೆ ವಿವರಿಸಲಾಯಿತು. ತ್ರಿಪುರಾದಲ್ಲಿ ಕಾಂಗ್ರೆ ಪಕ್ಷ. ಸಿ. ಪಿ. ಐ. (ಎಂ) ಪಕ್ಷದ ಮೇಲೆ ನಡೆಸುತ್ತಿರುವ ಹಿಂಸಾತ್ಮಕ ದಾಳಿಯನ್ನು ತೀವ್ರವಾಗಿ ಖಂಡಿಸುವ ಹಾಗೂ ಸರ್ವಾಧಿಕಾರಿ ಕಾಂಗ್ರೆ ಕೋಮುವಾದಿ ಶಕ್ತಿಗಳನ್ನು ಮುಂದಿನ ಚುನಾವಣೆಗಳಲ್ಲಿ ಸೋಲಿಸಲು ಕರೆ ನೀಡಲಾಯಿತು. ಈ ಜಾಗೃತಿ ಜಾಥದ ಮುಖಂಡತ್ವವನ್ನು ತಾಲೋಕು ಸಮಿತಿ ಮುಂದಾಳುಗಳಾದ ಕಾ॥ ಡೇವಿಡ್ ಎ.ಕರ್ಕಡ. ಎಚ್.ವಿಠ ಲ. ದೊಗು ಸುವರ್ಣ. ಸಂಜೀವನಾಯಕ್ ಮುಂತಾದವರು ವಹಿಸಿದ್ದರು.

2 ನೇ ಪುಟದಿಂದ

ಭಾಷೆಯನ್ನು ಕಡ್ಡಾಯವಾಗಿ ಹೇರಲು ಪ್ರಯತ್ನಿಸುವುದರಿಂದ ಉದ್ದೇಶವು ಸಫಲವಾಗುವುದಕ್ಕಿಂತ ಪ್ರತಿಕೂಲ ಪರಿಣಾಮ ಉಂಟಾಗುತ್ತದೆಂಬ ಅಂಶವನ್ನು ಸಹ ಇಲ್ಲಿ ಗಮನಿಸಬೇಕಾಗುತ್ತದೆ. ಎಲ್ಲಾ ಭಾರತೀಯ ಭಾಷೆಗಳ ಬೆಳವಣಿಗೆಗೂ ಮುಖ್ಯವಾಗಿ ಅಡ್ಡಿಯಾಗಿರುವ ಇಂಗ್ಲೀಷ್ ಭಾಷೆಯ ಪ್ರಾಬಲ್ಯವನ್ನು ಮುರಿದು ಆಡಳಿತ ಮತ್ತು ಶಿಕ್ಷಣ ರಂಗದಲ್ಲಿ ಕನ್ನಡ ಭಾಷೆಗೆ ಸೂಕ್ತ ಪ್ರಾಧಾನ್ಯತೆ ದೊರಕಿಸಲು ಕರ್ನಾಟಕದ ಸಮಸ್ತ ಜನತೆ ಹೋರಾಡಬೇಕಾಗಿದೆ.

ಹಿಡಿಯಷ್ಟು ಗಲಭೆಕೋರರ ಪಿತೂರಿ ಸಫಲಗೊಳ್ಳಬಾರದು

ಮೇ 19 ರಂದು ಜನತಾ ಚೀನಾದ ಗಣತಂತ್ರದ ಪ್ರಧಾನ ಮಂತ್ರಿ ಹಾಗೂ ಚೀನಾ ಕಮ್ಯುನಿಸ್ಟ್ ಪಕ್ಷದ ಪಾಲಿಟ್‌ಬ್ಯೂರೋದ ಸ್ಥಾಯೀ ಸಮಿತಿ ಸದಸ್ಯ ಲೀ ಪೆಂಗ್ ಪಕ್ಷದ ಕೇಂದ್ರ ಸಮಿತಿ ಮತ್ತು ಸರಕಾರೀ ಮಂಡಳಿ ನಡೆಸಿದ ಸಭೆಯಲ್ಲಿ ಪಕ್ಷದ, ಸರಕಾರದ ಹಾಗೂ ಸೇನೆಯ ಕಾರ್ಯಕರ್ತರನ್ನುದ್ದೇಶಿಸಿ ದೇಶದೊಳಗಿನ ಸದ್ಯದ ಬೆಳವಣಿಗೆಗಳ ಬಗ್ಗೆ ಮಾತನಾಡಿದರು. ಅವರ ಭಾಷಣದ ಒಂದು ಅಂಶ ಇಲ್ಲಿ ಕೊಡಲಾಗಿದೆ. ಇದರ ಹಿನ್ನಲೆಯಲ್ಲಿ ನಂತರ ಅಲ್ಲಿ ನಡೆದ ಘಟನೆಗಳ ಬಗ್ಗೆ ಬೂರ್ಜ್ವಾ ಅಪಪ್ರಚಾರವನ್ನು ಓದುಗರು ಅರ್ಥಮಾಡಿಕೊಳ್ಳಬಹುದು:

ಅಲ್ಲೋಲ ಕಲ್ಲೋಲ ಸೃಷ್ಟಿಸಲು ಪ್ರಯತ್ನಿಸುವ ಕೆಲವೇ ವ್ಯಕ್ತಿಗಳು ಪ್ರಜಾಸತ್ತಾತ್ಮಕವಾಗಿ ಹಾಗೂ ಕಾನೂನಾತ್ಮಕವಾಗಿ ಸಾಧಿಸಲಾಗದ ತಮ್ಮ ರಾಜಕೀಯ ಗುರಿಗಳನ್ನು ಈ ಮೂಲಕ ಸಾಧಿಸಲು ಬಯಸುತ್ತಿದ್ದಾರೆ ಎಂಬುದು ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ.

ಅವರು ಸುಳ್ಳು ವದಂತಿಗಳನ್ನು ಹರಡುತ್ತಿದ್ದಾರೆ. ಸರಕಾರ ಮತ್ತು ಪಕ್ಷದ ಮುಖಂಡರ ಹೆಸರಿಗೆ ಮಸಿ ಬಳಿಯಲು ಯತ್ನಿಸುತ್ತಿದ್ದಾರೆ. ಚೀನಾ ಹೊರಜಗತ್ತಿಗೆ ತನ್ನನ್ನು ತೆರೆದುಕೊಳ್ಳಲು ಮಹಾನ್ ಕೊಡುಗೆ ನೀಡಿದ ಕಾಮ್ರೇಡ್ ಡೆಂಗ್ ಕ್ಸಿಯಾವೋಪಿಂಗ್ ಮೇಲೆ ತಮ್ಮ ಪ್ರಹಾರ ಕೇಂದ್ರೀಕರಿಸಿದ್ದಾರೆ. ಅವರ ಉದ್ದೇಶ ರಾಷ್ಟ್ರೀಯ ಜನತಾ ಸಭೆ ಚುನಾಯಿಸಿದ ಜನತಾ ಸರಕಾರವನ್ನು ಕಿತ್ತೊಗೆಯುವುದು ಮತ್ತು ಜನತಾ ಪ್ರಜಾಸತ್ತಾತ್ಮಕ ಸರ್ವಾಧಿಕಾರದ ಪರಿಕಲ್ಪನೆಯನ್ನು ಪೂರ್ತಿಯಾಗಿ ನಿರಾಕರಿಸುವುದು.

ಅವರು ಎಲ್ಲೆಡೆ ಗಲಭೆ ಎಬ್ಬಿಸುತ್ತಾರೆ. ಗುಪ್ತ ಸಂಬಂಧ ಬೆಳೆಸುತ್ತಾರೆ. ಕಾನೂನುಬಾಹಿರ ಸಂಘಟನೆಗಳನ್ನು ರಚಿಸಿ ಪಕ್ಷ ಮತ್ತು ಸರಕಾರ ಅವನ್ನು ಮನ್ನಿಸುವಂತೆ ಬಲ ತರುತ್ತಾರೆ. ಅವರ ಪ್ರಯತ್ನ ಸಫಲವಾದರೆ ಸುಧಾರಣೆಗಳು, ಪ್ರಜಾಪ್ರಭುತ್ವ, ಕಾನೂನುಬದ್ಧತೆ, ಸಮಾಜವಾದೀ ಆಧುನೀಕರಣವೆಲ್ಲಾ ಸೊನ್ನೆಯಾಗುತ್ತದೆ..........

ಈ ರಾಜಕೀಯ ಪಿತೂರಿಯನ್ನು ಬಯಲಿಗೆಳೆಯಲು ಈ ಅಲ್ಲೋಲ ಕಲ್ಲೋಲದ ವಿರುದ್ಧ ಸ್ಪಷ್ಟ ನಿಲುವು ತಳೆಯುವುದರ ಒಂದು ಪ್ರಮುಖ ಉದ್ದೇಶ-ಯುವ ವಿದ್ಯಾರ್ಥಿ ಸಮೂಹ ಮತ್ತು ಹಿಡಿಯಷ್ಟು ಗಲಭೆಕೋರರ ನಡುವೆ ವ್ಯತ್ಯಾಸ ಕಾಣಬಹುದು. ಈ ಉದ್ದೇಶ ಹಾಗೂ ವಿದ್ಯಾರ್ಥಿಗಳ ಬಗ್ಗೆ ಪ್ರೀತಿಪೂರ್ಣ ಜಾಗರೂಕತೆಯಿಂದಾಗಿಯೇ ನಾವು ಮೊದಲಿಗೆ ಈ ಆಂದೋಲನದ ಬಗ್ಗೆ ತೀವ್ರ ಸಹನೆ ಮತ್ತು ಸಂಯಮ ತೋರಿದೆವು. ಒಳ್ಳೆಯ ಜನರಿಗೆ ಮುಖ್ಯವಾಗಿ ಯುವ ವಿದ್ಯಾರ್ಥಿಗಳಿಗೆ ತೊಂದರೆಯಾಗದಿರಲಿ ಎಂದು. ಆದರೆ ತೆರೆಯ ಮರೆಯ ಹಿಡಿಯಷ್ಟು ಮಂದಿ ಈ ಸಹನೆಯನ್ನು ಸರಕಾರದ ಮತ್ತು ಪಕ್ಷದ ದೌರ್ಬಲ್ಯವೆಂದು ಬಗೆದರು. ಪರಿಸ್ಥಿತಿ ಹದಗೆಡಿಸಲು ಸುಳ್ಳು ಸುದ್ದಿಗಳನ್ನು ಸೃಷ್ಟಿಸಿ ಜನಸಮೂಹಗಳ ಮನಸ್ಸಿನಲ್ಲಿ ವಿಷ ತುಂಬುವುದನ್ನು ಮುಂದುವರಿಸಿದರು. ಇಂತಹ ಸನ್ನಿವೇಶದಲ್ಲಿ ನಾವು ಈ ಅಲ್ಲೋಲ ಕಲ್ಲೋಲವನ್ನು ಅಂತ್ಯಗೊಳಿಸಲು ದೃಢ ಹಾಗೂ ನಿರ್ಣಾಯಕ ಕ್ರಮ ಕೈಗೊಳ್ಳಲೇ ಬೇಕಾಗಿದೆ.

ಈ ಗಂಭೀರ ಸನ್ನಿವೇಶದಲ್ಲೂ ನಾವು ವಿದ್ಯಾರ್ಥಿಗಳ ದೇಶ ಪ್ರೇಮವನ್ನು ರಕ್ಷಿಸಲು ಬದ್ಧವಾಗಿದ್ದೇವೆ. ಹಿಡಿಯಷ್ಟು ಗಲಭೆಕೋರರು ಮತ್ತು ಇತರರ ನಡುವೆ ಸ್ಪಷ್ಟ ವ್ಯತ್ಯಾಸ ಗುರುತಿಸುವುದನ್ನು ಮುಂದುವರಿಸುತ್ತೇವೆ. ವಿವಿಧ ಹಂತಗಳಲ್ಲಿ, ವಿವಿಧ ರೀತಿಯಲ್ಲಿ ಮಾತುಕತೆ ಕೂಡಾ ಮುಂದುವರಿಯುತ್ತದೆ. ವಿದ್ಯಾರ್ಥಿಗಳು ಎತ್ತಿದ ತರ್ಕಬದ್ಧ ಬೇಡಿಕೆಗಳಿಗೆ ಸ್ಪಷ್ಟ ಉತ್ತರ ನೀಡುತ್ತೇವೆ. ಅವರ ತರ್ಕಬದ್ಧ ಟೀಕೆಗಳಿಗೆ, ಸೂಚನೆಗಳಿಗೆ ಪೂರ್ಣ ಗಮನ ನೀಡುತ್ತೇವೆ.

ಸಹಾರಾವಿ ವೀರ ಸಂಗಾತಿಗಳಿಗೆ ಸಿ.ಪಿ.ಐ (ಎಂ) ಕಾಣಿಕೆ

ಮೇ 25 ಆಫ್ರಿಕಾ ದಿನ. ಅಂದು ಮೊರಾಕೋ ಪ್ರತಿಗಾಮಿ ಆಕ್ರಮಣಕಾರರು ಮತ್ತು ಅವರ ಅಮೆರಿಕನ್ ಸಾಮ್ರಾಜ್ಯಶಾಹೀ ಪೋಷಕರ ವಿರುದ್ಧ 16 ವರ್ಷಗಳಿಂದ ಸಹಾರಾವಿ ಜನತೆಯ ಧೀರ ಹೋರಾಟಗಾರರಿಗೆ ನೇತೃತ್ವ ನೀಡುತ್ತಿರುವ ಪೋಲಿಸಾರಿಯೋ ರಂಗದೊಡನೆ ಸೌಹಾರ್ದ ವ್ಯಕ್ತಪಡಿಸಲು ಸಿ.ಪಿ.ಐ (ಎಂ) ದೆಹಲಿ ರಾಜ್ಯ ಸಮಿತಿ ಒಂದು ಸಾರ್ವಜನಿಕ ಸಭೆ ಸಂಘಟಿಸಿತು. ಸಿ.ಪಿ.ಐ (ಎಂ) ಪಾಲಿಟ್‌ಬ್ಯೂರೋ ಸದಸ್ಯ ಮುಖರ್ಜೀವರ ಸಮರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ಸಹಾರಾವಿ ಅರಬ್‌ಜನವಾದಿ ಗಣತಂತ್ರದ ರಾಯಭಾರೀ ಹಬೀಬ್ ಕಿಂತಾವೋನ್ನ ಮುಖ್ಯ ಅತಿಥಿಯಾಗಿದ್ದರು. ದೆಹಲಿ ರಾಜ್ಯ ಕಾರ್ಯದರ್ಶಿ ಜೋಗಿಂದರ್ ಶರ್ಮಾ ಮತ್ತು ಪಾಲಿಟ್‌ಬ್ಯೂರೋ ಸದಸ್ಯರಾದ ಹರಿಕಿಶನ್ ಸಿಂಗ್‌ಸುರ್ಜೀತ್ ಪೋಲಿಸಾರಿಯೋ ರಂಗದ ನೇತೃತ್ವದಲ್ಲಿ ನಡೆಯುತ್ತಿರುವ ಹೋರಾಟಗಳನ್ನು ವಿವರಿಸಿದರು, ಸಾಮ್ರಾಜ್ಯಶಾಹೀ-ವಿರೋಧಿ ಸಮರದಲ್ಲಿ ಇದರ ಮಹತ್ವವನ್ನು ಅರಿವು ಮಾಡಿಕೊಟ್ಟರು.

ಇವರ ಧೀರ ಹೋರಾಟಗಳ ಮೂಲಕ ಮಾರಿಶಿಯಾನಾ ಮತ್ತು ಮೊರಾಕೊ ಕೂಡಾ ಪೋಲಿಸಾರಿಯೋ ರಂಗದೊಡನೆ ಮಾತುಕತೆಗೆ ಸಿದ್ಧವಾಗಿರುವುದು ಇತ್ತೀಚಿನ ಮಹತ್ವದ ಬೆಳವಣಿಗೆ ಈ ಸಂದರ್ಭದಲ್ಲಿ ರಾಷ್ಟ್ರೀಯ ವಿಮೋಚನಾ ಹೋರಾಟಗಳಿಗೆ ಸಿ.ಪಿ.ಐ.(ಎಂ) ನ ಸತತ ಬೆಂಬಲದ ಸಂಕೇತವಾಗಿ ಒಂದು ಲಕ್ಷ ರೂ ಚೆಕ್ಕನ್ನು ಸಹಾರಾವಿರಾಯ ಬಾರಿಗೆ ಸಿ.ಪಿ.ಐ. (ಎಂ) ಪರವಾಗಿ ನೀಡಿದರು.

ಸೋವಿಯತ್ ಜನತಾ ಪ್ರತಿನಿಧಿಗಳ ಸಭೆ

'ಜನತಾ ಪ್ರತಿನಿಧಿಗಳ ಸಭೆ' ಸೋವಿಯತ್ ಒಕ್ಕೂಟದಲ್ಲಿ ಪ್ರಭುತ್ವ ಅಧಿಕಾರದ ಹೊಸ ಅತ್ಯುನ್ನತ ಸಂಸ್ಥೆ. ಮೇ 25 ರಂದು ಇದು ಕಾರ್ಯಾರಂಭ ಮಾಡಿತು.

2250 ಚುನಾಯಿತ ಪ್ರತಿನಿಧಿಗಳಿಂದ ಕೂಡಿದ ಈ ರಾಷ್ಟ್ರೀಯ ಶಾಸನ ಸಭೆಯ ಅಧಿಕಾರಗಳಲ್ಲಿ ಮುಖ್ಯವಾದದ್ದು- ಸೋವಿಯತ್ ಸಂವಿಧಾನದ ತಿದ್ದುಪಡಿ, ಅಂಗೀಕಾರ, ಗಡಿಗಳ ನಿರ್ಣಯ, ಒಕ್ಕೂಟದ ಅಂಗ ಗಣರಾಜ್ಯಗಳ ಗಡಿಗಳಲ್ಲಿ ಬದಲಾವಣೆಗೆ ಅಂಗೀಕಾರ, ದೇಶದ ಸರಕಾರೀ ವ್ಯವಹಾರಗಳ ಬಗ್ಗೆ ನಿರ್ಣಯ, ಆಂತರಿಕ ಹಾಗೂ ವಿದೇಶ ನೀತಿಗಳಿಗೆ ಮಾರ್ಗನಿರ್ದೇಶನ, ಆರ್ಥಿಕ, ಸಾಮಾಜಿಕ ಅಭಿವೃದ್ಧಿಯ ಪ್ರಮುಖ ಯೋಜನೆಗಳಿಗೆ ಅನುಮತಿ ಇತ್ಯಾದಿ.

ಇತ್ತೀಚೆಗೆ ನಡೆದ ಚುನಾವಣೆಗಳಲ್ಲಿ 2249 ಪ್ರತಿನಿಧಿಗಳು ಚುನಾಯಿಸಲ್ಪಟ್ಟಿದ್ದರು. ಒಂದು ಜಿಲ್ಲೆ ಮಾತ್ರ ತನ್ನ ಪ್ರತಿನಿಧಿಯನ್ನು ಇನ್ನೂ ಚುನಾಯಿಸಿಲ್ಲ. ಪ್ರತಿನಿಧಿಗಳಲ್ಲಿ 65 ರಾಷ್ಟ್ರೀಯತೆಗಳ ಜನರಿದ್ದಾರೆ. 88 ಶೇಕಡಾ ಮಂದಿ ಮೊದಲಬಾರಿಗೆ ದೇಶದ ಅತ್ಯುನ್ನತ ಶಾಸನ ಸಭೆಯಲ್ಲಿ ಭಾಗವಹಿಸುವವರು.

87 ಶೇಕಡಾದಷ್ಟು ಚುನಾಯಿತ ಪ್ರತಿನಿಧಿಗಳು ಸೋವಿಯತ್ ಕಮ್ಯುನಿಸ್ಟ್ ಪಕ್ಷದ ಸದಸ್ಯರು ಅಥವಾ ಅಭ್ಯರ್ಥಿ ಸದಸ್ಯರು ಸುಮಾರು 10% ಪ್ರತಿನಿಧಿಗಳು ವಿವಿಧ ಹಂತಗಳಲ್ಲಿ ಪಕ್ಷದ ಪದಾಧಿಕಾರಿಗಳು.

ಪ್ರತಿನಿಧಿ ಸಭೆ ಸೋವಿಯತ್ ಸಮಾಜದ ಎಲ್ಲಾ ವಿಭಾಗಗಳನ್ನು ನಿಜವಾದ ಅರ್ಥದಲ್ಲಿ ಪ್ರತಿನಿಧಿಸುತ್ತಿದೆ. 24.8% ಪ್ರತಿನಿಧಿಗಳು ವಿವಿಧ ಉದ್ದಿಮೆಗಳಲ್ಲಿ ದುಡಿಯುವ ಕಾರ್ಮಿಕರು. 18.9 ಕೃಷಿ ವಲಯದ ಕಾರ್ಮಿಕರು. 23.7% ಬೇರೆ ವಲಯಗಳ ಸಾಮಾನ್ಯ ಕಾರ್ಮಿಕರು ಮತ್ತು ಸಾಮೂಹಿಕ ಕೃಷಿಕರು. 27.4% ವೈಜ್ಞಾನಿಕ ಮತ್ತು ಇತರ ಬುದ್ಧಿ ಜೀವಿ ವಿಭಾಗಳಿಂದ ಬಂದವರು. 2249 ಪ್ರತಿನಿಧಿಗಳಲ್ಲಿ 1806 ಮಂದಿ 30 ರಿಂದ 60 ವರ್ಷ ವಯಸ್ಸಿನವರು 187 ಮಂದಿ 30 ವರ್ಷಕ್ಕಿಂತಲೂ ಕಮ್ಮಿ ವಯಸ್ಸಿನವರು. 352 ಮಹಿಳೆಯರು. 20% ದಷ್ಟು ಪ್ರತಿನಿಧಿಗಳು ವಿಜ್ಞಾನ ಪದವಿ ಪಡೆದವರು. 1702 ಪ್ರತಿನಿಧಿಗಳು ಉನ್ನತ ಶಿಕ್ಷಣ ಪಡೆದವರು 528 ಮಾಧ್ಯಮಿಕ ಅಥವಾ ವಿಶೇಷ ಮಾಧ್ಯಮಿಕ ಶಿಕ್ಷಣ ಪಡೆದವರು. ಈ ಪ್ರತಿನಿಧಿ ಸಭೆ ಚಿಕ್ಕದಾದ ಸಂಸದನ್ನು ಇದನ್ನು ಸೋವಿಯತ್ ಒಕ್ಕೂಟದ ಅತ್ಯುಚ್ಚ ಸೋವಿಯತ್ ಎಂದು ಹೆಸರಿಸಲಾಗಿದೆ-ಆರಿಸಿತು.

ಮಿಖಾಯಿಲ್ ಗೋರ್ಬಚೆವ್‌ರವರನ್ನು ಸಭೆ ಈ ಸುಪ್ರೀಂಸೋವಿಯತ್‌ನ ಅಧ್ಯಕ್ಷರಾಗಿ ಭಾರೀ ಬಹುಮತ (95%)ದಿಂದ ಆರಿಸಿತು. ಇದಕ್ಕೆ ಮೊದಲು ಗೋರ್ಬಚೆವ್ ಸುಪ್ರೀಂ ಸೋವಿಯತ್ ನ ಅಧ್ಯಕ್ಷ ಮಂಡಳಿಯ ಮುಖ್ಯಸ್ಥರಾಗಿದ್ದರು.

ಪಂಜಾಬಿನಲ್ಲಿ ಭಯೋತ್ಪಾದಕರಿಂದ ಕಗ್ಗೊಲೆ

ಮೇ 19 ರಂದು ಪಂಜಾಬಿನಲ್ಲಿ ರಾಜ್ಯಪಾಲರು ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಿದ ಎರಡನೇ ವಾರ್ಷಿಕದ ಸಂದರ್ಭದಲ್ಲಿ ಪತ್ರಿಕಾ ಸಮ್ಮೇಳನದಲ್ಲಿ ಮಾತನಾಡುತ್ತಾ ರಾಷ್ಟ್ರಪತಿ ಆಳ್ವಿಕೆಯಲ್ಲಿ ಕಾನೂನು ವ್ಯವಸ್ಥೆ ಸುಧಾರಿಸಿದೆಯೆಂದು ಹೇಳಿಕೊಂಡ ಕೆಲವೇ ಗಂಟೆಗಳಲ್ಲಿ ಪಂಜಾಬಿನ ಜನತೆಗೆ ದಶಕಗಳ ಕಾಲ ಸೇವೆ ಸಲ್ಲಿಸಿದ ಸಿ.ಪಿ.ಐ. (ಎಂ) ಫಿರೋಜ್‌ಪುರ ಜಿಲ್ಲಾ ಸಮಿತಿ ಸದಸ್ಯ ಹಾಗು, ಜಿಲ್ಲಾ ಕಿಸಾನ್ ಸಭಾದ ಅಧ್ಯಕ್ಷ ಕಾಂ. ದಿಲೀಪ್ ಸಿಂಗ್ ಮನೆಗೆ ಖಾಲಿಸ್ತಾನಿ ಭಯೋತ್ಪಾದಕರು ದಾಳಿಯಿಟ್ಟು 65 ವರ್ಷ ವಯಸ್ಸಿನ ದಿಲೀಪ್ ಸಿಂಗ್ ಮತ್ತು ಅವರ ಹೆಂಡತಿ, ಮಗ, ಮಗಳು, ಸೊಸೆ ಹಾಗು ನಾಲ್ಕು ಮತ್ತು ಎಂಟು ವರ್ಷದ ಎರಡು ಮೊಮ್ಮಕ್ಕಳನ್ನು ಕೊಲೆ ಮಾಡಿದರು. ಇನ್ನೊಬ್ಬ ಮಗ ಆಸ್ಪತ್ರೆಯಲ್ಲಿದ್ದಾರೆ.

ಈ ಕೊಲೆಯನ್ನು ತೀವ್ರವಾಗಿ ಖಂಡಿಸಿರುವ ಸಿ.ಪಿ.ಐ. (ಎಂ) ಪಾಲಿಟ್‌ಬ್ಯೂರೋ ರಾಜ್ಯ ಮತ್ತು ಕೇಂದ್ರ ಸರಕಾರಗಳು ಪರಿಸ್ಥಿತಿಯನ್ನು ಹತೋಟಿ ತರಲು ಅಗತ್ಯವಾದ ಒಂದು ಕ್ರಮವನ್ನು ಅಂದರೆ ಯಾವುದೇ ಭೇದಭಾವವಿಲ್ಲದೇ ಜನತೆಯನ್ನು ಪ್ರತ್ಯೇಕತಾವಾದ ವಿರುದ್ಧ ಅಣಿನೆರೆಸುವ ಕ್ರಮವನ್ನು ಕೈಗೊಳ್ಳುತ್ತಿಲ್ಲ ಎಂದು ದೂಷಿಸಿದೆ. ವಾಸ್ತವವಾಗಿ ಆಳುವ ಪಕ್ಷ ಮತ್ತು ಕೇಂದ್ರ ಸರ್ಕಾರ ರಾಜ್ಯದ ಗಂಭೀರ ಪರಿಸ್ಥಿತಿಯನ್ನು ರಾಜಕೀಯ ಕಸರತ್ತು ನಡೆಸಲು ಬಳಸುತ್ತಿದೆ ಎಂದು ಪಾಲಿಟ್‌ಬ್ಯೂರೋ ಹೇಳಿದೆ.

ಮೇ 10 ರಂದೇ ಖ್ಯಾತ ಪಂಜಾಬಿ ಕವಿ ಹಾಗೂ ನಾಟಕಕಾರರಾದ, ಪಂಜಾಬೀ ವಿಶ್ವವಿದ್ಯಾಲಯದಲ್ಲಿ ರೀಡರ್ ಆಗಿದ್ದ ಡಾ. ರವೀಂದ್ರ ಸಿಂಗ್ ರವಿಯವರನ್ನು ಭಯೋತ್ಪಾದಕರು ಕಗ್ಗೊಲೆ ಮಾಡಿದರು. ಅವರು ಪ್ರತ್ಯೇಕತಾವಾದದ ವಿರುದ್ಧ ಧೀರ ನಿಲುವು ತಳೆದದ್ದೇ ಈ ಕೊಲೆಗೆ ಕಾರಣ. ಕೋಮು ಸೌಹಾರ್ದ ಹಾಗೂ ರಾಷ್ಟ್ರೀಯ ಐಕ್ಯತೆಗೆ ಬೆದರಿಕೆಯೊಡ್ಡಿದ್ದ ಶಕ್ತಿಗಳ ವಿರುದ್ಧ ಲೇಖನಗಳನ್ನು, [illegible] [illegible] ಡಾ॥ ರವಿ ಪ್ರಮುಖ ಪಾತ್ರ ವಹಿಸುತ್ತಿದ್ದರು. ಅವರು ಕೇಂದ್ರೀ ಪಂಜಾಬೀ ಲೇಖಕ ಸಭಾದ ಪ್ರಧಾನ ಕಾರ್ಯದರ್ಶಿಗಳಾಗಿದ್ದರು. ಜನವಾದೀ ಲೇಖಕ ಸಂಘ ಈ ಕೊಲೆಯನ್ನು ಬಲವಾಗಿ ಖಂಡಿಸಿ, ಕೊಲೆಗಾರರನ್ನು [illegible] ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದೆ.

ಮುಂಬೈನಲ್ಲಿ ಒಂದು ಲಕ್ಷ ಕಾರ್ಮಿಕರ ಯಶಸ್ವಿ ಮುಷ್ಕರ

ಮೇ 17 ರಂದು ಮುಂಬೈಯ ಒಂದು ಲಕ್ಷಕ್ಕೂ ಹೆಚ್ಚು ಕಾರ್ಮಿಕರು ಸಿ.ಐ.ಟಿ.ಯು ಕರೆಯ ಮೇರೆಗೆ ಒಂದು ದಿನದ ಮುಷ್ಕರ ನಡೆಸಿದರು. 1982 ರ ಬೆಲೆ ಸೂಚ್ಯಂಕ ಸರಣಿಯ ಮೂಲಕ ತುಟ್ಟಿಭತ್ಯ ಕಡಿತ, ವೃತ್ತಿ ತೆರಿಗೆಯಲ್ಲಿ ತೀವ್ರ ಏರಿಕೆ, ಮುಂಬೈ ಹಾಗೂ ರಾಜ್ಯದಲ್ಲೆಲ್ಲಾ ರೋಗಗ್ರಸ್ತಗೊಳ್ಳುತ್ತಿರುವ ಉದ್ದಿಮೆಗಳ ಕಾರ್ಮಿಕರ ಪರಿಸ್ಥಿತಿ, ಬೆಲೆಯೇರಿಕೆ, ನಿರುದ್ಯೋಗ ಈ ವಿಷಯಗಳ ಮೇಲೆ 17 ರಂದು ಎಲ್ಲಾ ಎಡ, ಪ್ರಜಾಪ್ರಭುತ್ವ, ಜಾತ್ಯಾತೀತ ಶಕ್ತಿಗಳು ಮುಂಬೈ ಬಂದ್‌ಗೆ ಕರೆನೀಡಿದ್ದವು. ಆದರೆ ಕೊನೇ ಗಳಿಗೆಯಲ್ಲಿ ಜನತಾದಳ ಮತ್ತು ಸಂಬಂಧಿತ ಕಾರ್ಮಿಕ ಸಂಘಗಳು ಇದರಿಂದ ನುಣುಚಿಕೊಂಡರೂ ಸಿ.ಐ.ಟಿ.ಯು ನ ಸ್ವಾತಂತ್ರ ಕರೆಯ ಮೇರೆಗೆ ನಡೆದ ಈ ಮುಷ್ಕರ ಮುಂಬೈಯ ಪತ್ರಿಕೆಗಳ ಗಮನವನ್ನು ಸೆಳೆಯಿತು.

ಮುಷ್ಕರಕ್ಕೆ ಪೂರ್ವಸಿದ್ಧತೆಯಾಗಿ ಮೇ 15 ರಂದು ದಕ್ಷಿಣ ಮುಂಬೈ ಮತ್ತು ಪಶ್ಚಿಮ ಮುಂಬೈ ಪ್ರದೇಶದಲ್ಲಿ ಜೀಪುಗಳು, ಮೋಟಾರುಸೈಕಲುಗಳು, ಆಟೋರಿಕ್ಷಾ, ಟ್ರಕ್ಕುಗಳ ಮೆರವಣಿಗೆ ಹಾಗೂ ಹಲವಾರು ಬೀದಿ ಸಭೆಗಳನ್ನು ನಡೆಸಲಾಗಿತ್ತು.

ವಾಸ್ತವವಾಗಿ ಇದು ಸಂಪೂರ್ಣ 'ಮುಂಬೈ ಬಂದ್' ಆಗಿ ಏಪ್ರಿಲ್ 20ರಂದೇ ನಡೆಯಬೇಕಾಗಿತ್ತು. ಜನತಾದಳ, ಸಿ.ಐ.ಟಿ.ಯು., ಎ.ಐ.ಟಿ.ಯು.ಸಿ., ಹೆಚ್.ಎಂ.ಕೆ.ಪಿ. ಹೆಚ್.ಎಂ.ಎಸ್., ಮತ್ತು ಸರ್ವಶ್ರಮಿಕ ಸಂಘ ಸೇರಿಕೊಂಡು ಇದಕ್ಕೆ ಕರೆ ನೀಡಿದ್ದವು. ಬಂದ್‌ಗೆ ಪ್ರಚಾರ-ಪ್ರಕ್ಷೋಭೆ ನಡೆಯುತ್ತಿದ್ದಂತೆಯೇ ಜನತಾದಳ, ಹೆಚ್.ಎಂ.ಕೆ.ಪಿ. ಮುಖಂಡ ಜಾರ್ಜ್ ಫರ್ನಾಂಡಿಸ್ ಇತರರೊಡನೆ ಸಮಾಲೋಚಿಸದೇನೇ ಶಿವಸೇನೆಗೆ ಬಂದ್‌ನಲ್ಲಿ ಪಾಲ್ಗೊಳ್ಳಲು ಮನವಿ ಮಾಡಿದರು. ಈ ವರ್ತನೆಯನ್ನು ಎಡ ಪಕ್ಷಗಳು ಸಂಘಗಳು ಟೀಕಿಸಿದವು. ನಿರೀಕ್ಷಿಸಿದಂತೆಯೇ ಶಿವಸೇನೆ ಫರ್ನಾಂಡಿಸ್ ಮನವಿ ತಿರಸ್ಕರಿಸಿತು. ಏಪ್ರಿಲ್ 17 ರಂದು ಜನತಾದಳ ಹಾಗೂ ಸಂಬಂಧಿತ ಕಾರ್ಮಿಕ ಸಂಘಗಳು ಬಂದ್‌ಗೆ ಸರಿಯಾದ ಸಿದ್ಧತೆಯಾಗಿಲ್ಲವೆಂದು ನೆವ ಹೇಳಿ ಅದನ್ನು ಮುಂದೂಡಬೇಕೆಂದರು. ಚರ್ಚೆಯ ನಂತರ ಮೇ 17 ರಂದು ಬಂದ್ ನಡೆಸಬೇಕು, ಆದರೆ ಈ ಬಾರಿ ಯಾರೂ ಹಿಂದೆಗೆಯಬಾರದು ಎಂದು ಸ್ಪಷ್ಟವಾಗಿ ಹೇಳಲಾಯಿತು. ಆದರೆ ಮತ್ತೆ ಸಿದ್ಧತೆ ನಡೆದಿಲ್ಲವೆಂದು ಹೇಳಿ ಅವು ಹಿಂದೆಗೆದವು. ಎ.ಐ.ಟಿ.ಯು.ಸಿ. ಕೂಡಾ ಅವು ಹಿಂದೆಗೆದುಕೊಂಡ ಮೇಲೆ ಮುಷ್ಕರ ನಡೆಸುವುದು ಸರಿಯಲ್ಲ ಎಂದಿತು. ಆದರೆ ಸಿ.ಐ.ಟಿ.ಯು. ಸ್ವತಂತ್ರವಾಗಿ ಮುಷ್ಕರಕ್ಕೆ ಕರೆ ನೀಡಿತು. ಲಾಲ್ ನಿಶಾನ್ ಪಾರ್ಟಿಯ ನೇತೃತ್ವದ ಸರ್ವ ಶ್ರಮಿಕ ಸಂಘ ಮಾತ್ರ ಇದಕ್ಕೆ ಬೆಂಬಲ ನೀಡಿತು. ಆದರೂ ಮುಷ್ಕರದಲ್ಲಿ ಸಿ.ಐ.ಟಿ.ಯು.ನೇತೃತ್ವದಲ್ಲಿಲ್ಲದ ಕಾರ್ಮಿಕರೂ ಭಾಗವಹಿಸಿದ್ದು ಕಾರ್ಮಿಕರು ಸಿದ್ಧರಾಗಿಲ್ಲ ಎಂಬುದು ಕೇವಲ ನೆವ ಎಂದು ಸಿದ್ಧಪಡಿಸಿತು. ಶಿವಸೇನೆಗೆ ಫರ್ನಾಂಡಿಸ್ ಮನವಿ, ಮೇ 6 ರಂದು ನಡೆದ ರಾಷ್ಟ್ರೀಯ ರಂಗದ ಸಾರ್ವಜನಿಕ ಸಭೆಯಲ್ಲಿ ಶಿವಸೇನೆಯ ಕೋಮುವಾದದ ಬಗ್ಗೆ ಪ್ರಸ್ತಾಪವೇ ಬರದಂತೆ ವಹಿಸಿದ ಜಾಗರೂಕತೆ, ಜನತಾದಳ ಬಾರಿ-ಬಾರಿಗೆ ಮಾತು ತಪ್ಪಿಸಿ ಬಂದ್‌ನಿಂದ ಹಿಂಜರಿದದ್ದು ಇವೆಲ್ಲಾ ಮುಂಬರುವ ಚುನಾವಣೆಗಳ ಹಿನ್ನೆಲೆಯಲ್ಲಿ ಒಂದು ದೊಡ್ಡ ಯೋಜನೆಯ ಭಾಗವೇನೋ ಎಂದು ಮುಂಬೈಯ ಪತ್ರಿಕೆಗಳು ಶಂಕೆ ವ್ಯಕ್ತಪಡಿಸಿವೆ.

ಡಾ.ರವಿ ಯವರ ಕೆಲಸವನ್ನು ಪೂರ್ಣಗೊಳಿಸಬೇಕೆಂದು ಅವರು ಬುದ್ಧಿಜೀವಿಗಳಿಗೆ ಕರೆ ನೀಡಿದೆ.

ಮೇ 20 ರಂದು ಇನ್ನೊಬ್ಬ ಪ್ರಮುಖ ಸಿ.ಪಿ.ಐ. (ಎಂ) ಕಾರ್ಯಕರ್ತ ಕಾಂ.ಮಂಗಲ್ ಸಿಂಗ್ ರವರು ಹುತಾತ್ಮರಾದರು. ಇದು ನಡೆದದ್ದು ಅಮೃತಸರ ಜಿಲ್ಲೆಯ ಪಟಾಲಾ ಕಾಲುವ್‌ನಲ್ಲಿ. ಅವರ ಮಗ ಸುಂದರ್ ಸಿಂಗ್ ತೀವ್ರವಾಗಿ ಗಾಯಗೊಂಡಿದ್ದಾರೆ.

ಬಕ್ರೇಶ್ವರ್ ವಿದ್ಯುತ್ ಸ್ಥಾವರಕ್ಕೆ ಪ.ಬಂಗಾಳ ಕಾರ್ಮಿಕರಿಂದ ೧ ಕೋಟಿ ೬೩ ಲಕ್ಷ ರೂ!

ಮೇ 31 ರಂದು ಸಿ.ಐ.ಟಿ.ಯು [illegible] ಸಿ.ಐ.ಟಿ.ಯು. [illegible] 1.63 ಕೋಟಿ [illegible]

KRNW/BGS-312 MAG(2) PRB DECR 319-78/79

ಹೆಚ್ಚೆಚ್ಚು ಜನವಿರೋಧಿ ಸ್ವರೂಪ ಪಡೆಯುತ್ತಿವೆ

1 ನೇ ಪುಟದಿಂದ

ಉದ್ದೇಶ ರಾಜ್ಯ ಸರಕಾರಗಳ ಹಕ್ಕುಗಳನ್ನು, ಸಂವಿಧಾನದ ಒಕ್ಕೂಟ ಅಂಶಗಳನ್ನು ಮೊಟಕು ಮಾಡುವುದಷ್ಟೇ ಎಂದಿದೆ. ಪಂಚಾಯತ್ ಚುನಾವಣೆಗಳು ನಡೆಯದಿದ್ದರು ಕಾಂಗ್ರೆಸ್ (ಐ) ಆಳ್ವಿಕೆಯ ರಾಜ್ಯಗಳಲ್ಲೇ. ಕಾಂಗ್ರೆಸ್ (ಐ) ಸರಕಾರಗಳ ಈ ಲೋಪಕ್ಕೆ ರಾಜೀವ್ ಗಾಂಧಿ ಈ ನಿಟ್ಟಿನಲ್ಲಿ ಉತ್ತಮ ಕಾರ್ಯನಿರ್ವಹಿಸಿದ ರಾಜ್ಯಸರಕಾರಗಳನ್ನು ಶಿಕ್ಷಿಸುತ್ತಿದ್ದಾರೆ. ಸರ್ಕಾರಿಯಾ ಆಯೋಗ ಸೂಚಿಸಿದ ಎರಡು ವಿಧಗಳಲ್ಲಿ ಯಾವುದಾದರೊಂದನ್ನು ಅನುಸರಿಸಿದ್ದರೆ ಕೇಂದ್ರ-ಸಂಬಂಧಗಳನ್ನು ಏರುಪೇರು ಮಾಡುವ ಈ ಮಸೂದೆಯ ಅಗತ್ಯವಿರುತ್ತಿರಲಿಲ್ಲ ಎಂದು ಪಾಲಿಟ್‌ಬ್ಯೂರೋ ಅಭಿಪ್ರಾಯಪಟ್ಟಿದೆ.

ಸರ್ವಾಧಿಕಾರಶಾಹಿಯ ದುಷ್ಟಲಕ್ಷಣಗಳು

ಕರ್ನಾಟಕ ಸರಕಾರವನ್ನು ವಜಾಮಾಡಿ ವಿಧಾನ ಸಭೆಯನ್ನು ವಿಸರ್ಜಿಸಿದ ಕೇಂದ್ರ ಸರಕಾರದ ಕ್ರಮವನ್ನು ಪಾಲಿಟ್‌ಬ್ಯೂರೋ ಖಂಡಿಸಿದೆ.

ಕೇರಳದ ಎಲ್.ಡಿ.ಎಫ್. ಸರ್ಕಾರ ಹಾಗೂ ಪಶ್ಚಿಮ ಬಂಗಾಳದ ಎಡರಂಗ ಸರಕಾರದ ವಿರುದ್ಧ ಕೇಂದ್ರದ ಪಕ್ಷಪಾತ ನೀತಿಗಳನ್ನು ಖಂಡಿಸಿದೆ. ಈ ವರ್ಷ ಭತ್ತದ ಬೆಳೆ ಚೆನ್ನಾಗಿದ್ದರೂ, ಪಂಜಾಬ್, ಹರ್‍ಯಾಣಗಳಲ್ಲಿ ಭತ್ತಸಂಗ್ರಹ ಚೆನ್ನಾಗಿ ನಡೆದಿದ್ದರೂ ಸದಾ ಅಕ್ಕಿಯ ಕೊರತೆ ಇರುವ ಕೇರಳಕ್ಕೆ ಪೂರೈಕೆಯನ್ನು ಕಡಿತಮಾಡಲಾಗಿದೆ. ಬಂಗಾಳದ ಬಕ್ರೇಶ್ವರ್ ಸ್ಥಾವರ, ಹಲ್ದಿಯಾ ಯೋಜನೆ, ಸೆಣಬು ಉದ್ಯಮದ ನಿರ್ಲಕ್ಷ್ಯದಲ್ಲಿ ಈ ಪಕ್ಷಪಾತ ಕಂಡುಬರುತ್ತಿದೆ.

ತ್ರಿಪುರಾದಲ್ಲಿ ಪಕ್ಷದ ಕಚೇರಿಗಳನ್ನು ನಾಶಮಾಡಲು, ಅಲ್ಲಿನ ಮಾಜೀ ಉಪಮುಖ್ಯಮಂತ್ರಿ, ಮಂತ್ರಿಗಳು ಸೇರಿದಂತೆ ಪಕ್ಷದ ಮುಖಂಡರ ಕೊಲೆ ಪ್ರಯತ್ನವನ್ನು ಪ್ರಜಾಪ್ರಭುತ್ವದ ಮೇಲೆ ಕಾಂಗ್ರೆಸ್ (ಐ) ನ ಒಂದು ಗಂಭೀರ ಪ್ರಹಾರ, ಸರ್ವಾಧಿಕಾರಶಾಹಿಯ ದುಷ್ಟ ಲಕ್ಷಣ ಎಂದಿರುವ ಪಾಲಿಟ್‌ಬ್ಯೂರೋ ಇದರ ವಿರುದ್ಧ ದನಿ ಎತ್ತಬೇಕೆಂದು ಪ್ರಜಾಪ್ರಭುತ್ವವಾದೀ ಶಕ್ತಿಗಳಿಗೆ ಕರೆ ನೀಡಿದೆ.

ಕೋಮು ಅಪಾಯ

ರಾಮಜನ್ಮಭೂಮಿ/ಬಾಬ್ರಿಮಸೀದಿ ವಿವಾದ ಹುಟ್ಟಿಸಿದ ಕೋಮು ಪರಿಸ್ಥಿತಿ ಹದಗೆಡುತ್ತಿರುವ ಬಗ್ಗೆ ಪಾಲಿಟ್‌ಬ್ಯೂರೋ ತೀವ್ರ ಆತಂಕ ವ್ಯಕ್ತಪಡಿಸಿದೆ. ನ್ಯಾಯಾಲಯದ ತೀರ್ಪು ತಮ್ಮ ಬೇಡಿಕೆಗಳಿಗೆ ವಿರುದ್ಧವಾದರೆ ಅದನ್ನು ತಾವು ಒಪ್ಪುವುದಿಲ್ಲ ಎಂಬ ಬಿ.ಜೆ.ಪಿ. ಹಾಗೂ ಆರ್.ಎಸ್.ಎಸ್.ನ ಹಠಮಾರೀ ನಿಲುವನ್ನು ಪಾಲಿಟ್‌ಬ್ಯೂರೋ ಖಂಡಿಸಿದೆ. ಈ ವಿವಾದದ ಮೇಲೆ ಕೋಮುವಾದಿ ಅಪಪ್ರಚಾರ ಉಂಟು ಮಾಡಿದ ಗಂಭೀರ ಪರಿಸ್ಥಿತಿಯಿಂದಾಗಿ ಈಗಾಗಲೇ ಮಥುರಾ ಮತ್ತು ಹಜಾರಿಬಾಗ್‌ಗಳಲ್ಲಿ ದಂಗೆಗಳು ನಡೆದಿವೆ. ಆದರೂ ಪ್ರಧಾನ ಮಂತ್ರಿ ರಾಷ್ಟ್ರೀಯ ಸಮಗ್ರತಾ ಮಂಡಳಿಯ ಸಭೆ ಕರೆಯುವುದಾಗಿ ಹೇಳಿದರೂ ಇದುವರೆವಿಗೆ ಅದಕ್ಕೆ ದಿನಾಂಕ ಗೊತ್ತುಪಡಿಸದಿರುವ ಬಗ್ಗೆ ಪಾಲಿಟ್‌ಬ್ಯೂರೋ ಆಶ್ಚರ್ಯ ವ್ಯಕ್ತಪಡಿಸಿದೆ. ಮೇ 9 ರ ರಾಷ್ಟ್ರೀಯ ಸಮಾವೇಶದಲ್ಲಿ ತಿಳಿಯಪಡಿಸಿದಂತೆ ಕೋಮು ಅಪಾಯದ ವಿರುದ್ಧ ಪ್ರತಿಭಟನೆಯನ್ನು ಬಲಪಡಿಸಬೇಕು ಎಂದು ಪಕ್ಷದ ಎಲ್ಲಾ ಘಟಕಗಳಿಗೆ, ಪ್ರಜಾಪ್ರಭುತ್ವವಾದೀ ವಿಭಾಗಗಳಿಗೆ ಕರೆ ನೀಡಿದೆ.

ಜಾತ್ಯಾತೀತ ಪಕ್ಷಗಳಿಗೆ ಮತ್ತೊಮ್ಮೆ ಮನವಿ

ಮುಂಬರುವ ಲೋಕಸಭಾ ಚುನಾವಣೆಗಳಲ್ಲಿ, ಕಾಂಗ್ರೆಸ್ (ಐ) ನ್ನು ಸೋಲಿಸಲು ಸಾಧ್ಯವಾಗುವಂತೆ ಎಡ ಮತ್ತು ಜಾತ್ಯಾತೀತ ಶಕ್ತಿಗಳ ಐಕ್ಯತೆಯನ್ನು ಬೆಸೆಯುವ ತನ್ನ ಪ್ರಯತ್ನಗಳನ್ನು ಮುಂದುವರೆಸಲು ಪಾಲಿಟ್‌ಬ್ಯೂರೋ ನಿರ್ಧರಿಸಿದೆಯೆಂದು ಹೇಳಿಕೆ ತಿಳಿಸುತ್ತದೆ. ಜನತಾದಳ ಬಿ.ಜೆ.ಪಿ. ಯೊಂದಿಗೆ ಚುನಾವಣಾ ಹೊಂದಾಣಿಕೆ ಮಾಡಿಕೊಳ್ಳಲು ಪ್ರಯತ್ನಿಸುವುದರ ಬಗ್ಗೆ ಹೇಳುತ್ತಾ ಇದು ರಾಜೀವ್‌ಗಾಂಧಿ ಕೈಗಳನ್ನು ಬಲಪಡಿಸುತ್ತದಷ್ಟೆ ಎಂದು ಪಾಲಿಟ್‌ಬ್ಯೂರೋ ಹೇಳಿದೆ. ಯಾಕೆಂದರೆ ಇದರಿಂದ ತಾನು ರಾಷ್ಟ್ರೀಯ ಐಕ್ಯತೆಯ, ಅಲ್ಪ ಸಂಖ್ಯಾತರ ರಕ್ಷಕ ಎಂದು ಹೇಳಿಕೊಳ್ಳಲು ಕಾಂಗ್ರೆಸ್ (ಐ) ಗೆ ನೆರವಾದಂತಾಗುತ್ತದೆ.

ಕೋಮುವಾದಿಗಳೊಂದಿಗೆ ಯಾವುದೇ ಸ್ನೇಹ, ತಿಳುವಳಿಕೆ ಅಥವಾ ಹೊಂದಾಣಿಕೆ ಕಾಂಗ್ರೆಸ್ (ಐ) ನ್ನು ದೂರಗೊಳಿಸುವ, ಅದನ್ನು ಸೋಲಿಸುವ ಉದ್ದೇಶವನ್ನು ಭಂಗಗೊಳಿಸುತ್ತದೆ. ಬಿ.ಜೆ.ಪಿ. ಈ ಕೋಮುವಾದಿಗಳಲ್ಲಿ ಅತ್ಯಂತ ದೊಡ್ಡ ಶಕ್ತಿ. ಆದ್ದರಿಂದ ತಾವು ಈಗ ಹಿಡಿದಿರುವ ಹಾದಿಯನ್ನು ಬಿಡಲೇಬೇಕೆಂದೂ ಇಲ್ಲವಾದರೆ ಇದರಿಂದ ದುಷ್ಪರಿಣಾಮವಾಗುತ್ತದೆ ಎಂದೂ ಪಾಲಿಟ್‌ಬ್ಯೂರೋ ಜನತಾ ದಳ ಹಾಗೂ ಇತರ ಜಾತ್ಯಾತೀತ ಶಕ್ತಿಗಳಿಗೆ ಮತ್ತೊಮ್ಮೆ ಮನವಿ ಮಾಡಿಕೊಂಡಿದೆ. ಕಾಂಗ್ರೆಸ್ (ಐ)ಯನ್ನು ಸೋಲಿಸಲು ಎಲ್ಲಾ ಎಡ ಮತ್ತು ಜಾತ್ಯಾತೀತ ಪಕ್ಷಗಳನ್ನು ಒಟ್ಟುಗೂಡಿಸುವ ಪ್ರಯತ್ನಗಳನ್ನು ಮುಂದುವರಿಸುವ ಜೊತೆಗೇ ಸಿ.ಪಿ.ಐ. (ಎಂ) ಮತ್ತು ಎಡಪಕ್ಷಗಳು ಕೋಮುವಾದೀ ಶಕ್ತಿಗಳ ವಿರುದ್ಧ ಹಾಗೂ ರಾಷ್ಟ್ರೀಯ ಐಕ್ಯತೆಯ ರಕ್ಷಣೆಗಾಗಿ ತಮ್ಮ ಹೋರಾಟ ಮುಂದುವರಿಸಲು ದೃಢನಿರ್ಧಾರ ಮಾಡಿದೆ ಎಂದು ಪಾಲಿಟ್‌ಬ್ಯೂರೋ ಸ್ಪಷ್ಟಪಡಿಸಿದೆ.

ನಡುನಡುವೆ ಏಳಬಹುದಾದ ಭಿನ್ನಾಭಿಪ್ರಾಯಗಳನ್ನು ಮೀರಿನಿಂತು ಎಡಐಕ್ಯತೆಯನ್ನು ಬಲಗೊಳಿಸುವುದರ ಮೇಲೆ ಪಾಲಿಟ್‌ಬ್ಯೂರೋ ವಿಶೇಷ ಒತ್ತು ನೀಡಿದೆ. ಇದರಿಂದ ಸದ್ಯದ ಕ್ಲಿಷ್ಟ ರಾಜಕೀಯ ಸನ್ನಿವೇಶದಲ್ಲಿ ಎಡಶಕ್ತಿಗಳು ತಮ್ಮ ಪಾಲಿನ ಪಾತ್ರವನ್ನು ನಿರ್ವಹಿಸಲು ಸಾಧ್ಯವಾಗುತ್ತದೆ ಎಂದು ಅದು ಹೇಳಿದೆ.

ಎನ್ನೆಲ್, ಕೊನೆಯ ದಿನಗಳಲ್ಲಿ

“ವರ್ಗ ದೃಷ್ಟಿಕೋನವನ್ನಿಟ್ಟುಕೊಂಡು ರಾಜಕೀಯವಾಗಿ ಮುನ್ನುಗ್ಗಬೇಕು. ಜನತಾದಳದ ಬೊಮ್ಮಾಯಿ ಸರಕಾರವನ್ನು ಕಿತ್ತೊಗೆದ ನಂತರ ರಾಜ್ಯದಲ್ಲುಂಟಾಗಿರುವ ಗೊಂದಲಮಯ ಪರಿಸ್ಥಿತಿಯಲ್ಲಿ ರಾಜ್ಯಾದ್ಯಂತ 300ಕ್ಕೂ ಹೆಚ್ಚು ಸಾರ್ವಜನಿಕ ಸಭೆಗಳನ್ನು ನಡೆಸಬೇಕೆಂಬ ರಾಜ್ಯ ಸಮಿತಿಯ ನಿರ್ಣಯ ಸಕಾಲಿಕವಾಗಿದೆ. ಅದನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಕುರಿತು ಸೆಕ್ರೆಟಾರಿಯೇಟ್ ಮಾರ್ಗದರ್ಶನ ನೀಡಲಿ” ಎಂಬ ಕೊನೆ ಸಂದೇಶವನ್ನು ನೀಡಿದವರು. ನಮ್ಮನ್ನಗಲಿದ ಸ್ವಾತಂತ್ರ್ಯ ಹೋರಾಟಗಾರ ಮತ್ತು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಸಂಸ್ಥಾಪಕರಲ್ಲೊಬ್ಬರಾದ ಕಾ.ಎನ್.ಎಲ್. ಉಪಾಧ್ಯಾಯರು ತಾ.15-5-89ರಂದು ನಾನು ಸೆಕ್ರೆಟಾರಿಯೇಟ್ ಸಭೆಗೆ ಹೋಗುವ ಮುಂಚೆ ಎನ್.ಎಲ್. ಅವರನ್ನು ಭೇಟಿಯಾಗಿ ಅಂದಿನ ಸಭೆಯಲ್ಲಿ ಚರ್ಚೆಗೆ ಬರತಕ್ಕ ವಿಷಯಗಳ ಕುರಿತು ವಿಚಾರ ವಿನಿಮಯ ಮಾಡಿದಾಗ ರಾಜ್ಯದಲ್ಲಿ ಉದ್ಭವಿಸಿರುವ ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಪಕ್ಷದ ಗುರುತರವಾದ ಜವಾಬ್ದಾರಿ ಕುರಿತು ಅವರು ಮೇಲಿನ ಅಭಿಪ್ರಾಯ ವ್ಯಕ್ತಮಾಡಿದರು. ಹಾಗೆಯೇ ಪಕ್ಷದ ಸದಸ್ಯತ್ವದ ಕುರಿತು ಚರ್ಚಿಸಲಾಗುವುದೆಂದು ಹೇಳಿದಾಗ “ಕರ್ನಾಟಕದಲ್ಲಿ ನಮ್ಮ ಹೋರಾಟಗಳ ಹಿನ್ನಲೆಯಲ್ಲಿ ಪಕ್ಷದ ಸದಸ್ಯತ್ವ ಏನೂ ಸಾಲದು. ಎಲ್ಲಿಯೋ ತಪ್ಪು ಮಾಡುತ್ತಿದ್ದೇವೆ. ಸೂರಿ, ಓ.ಆರ್‌ಗೆ ಹೇಳು. ಈ ಹೊತ್ತಿನ ಮೀಟಿಂಗಿನಲ್ಲಿ ಚರ್ಚೆ ಮಾಡಲಿ. ಅವರು ಮನಸ್ಸು ಮಾಡಿದರೆ ಆಗುತ್ತದೆ” ಎಂದು ತಮ್ಮದೇ ಶೈಲಿಯಲ್ಲಿ ತೊದಲುತ್ತ ಹೇಳಿದ ಕೊನೆಯ ಮಾತದು. ಕರ್ನಾಟಕದಲ್ಲಿ ಪಕ್ಷದ ಬೆಳವಣಿಗೆಯ ಕುರಿತು ತನ್ನ ಅನಿಸಿಕೆಗಳನ್ನು ಹೇಳಿ ಮುಗಿಸಬೇಕೆಂಬ ಆತುರದಿಂದಲೋ ಏನೋ ,ಅದನ್ನು ಮುಗಿಸಲಿಕ್ಕೆ ತಾನು ಹೆಚ್ಚು ದಿವಸ ಬದುಕಿರಲಾರನೆಂಬ ಸಂಶಯದಿಂದಲೋ ಏನೋ “1943ರವರೆಗೆ ಮುಗಿಸಿದ್ದೇನೆ. ನಾಗರಾಜನಿಗೆ ಹೇಳಪ್ಪ, ದಿನಾ ಬಂದು ಬರೆದುಕೊಂಡು ಹೋಗಲಿ. ನನಗೂ ಹೇಳಿ ಹೇಳಿ ಸಾಕಾಯಿತು” ಎಂಬ ಉದ್ಗಾರ ಹೊರ ಹೊಮ್ಮಿದ್ದು ಮೇ 15ರಂದೇ. ಇನ್ನು ಹತ್ತು ದಿವಸಗಳಲ್ಲಿ ಸಾಯುವವನಿದ್ದೇನೆ. ಅನಿಸಿಕೆಗಳನ್ನು ಹೇಳಿ ಮುಗಿಸಬೇಕೆಂಬ ಆತುರದಿಂದ ಆ ಮಾತುಗಳು ಹೊರಹೊಮ್ಮಿರ ಬೇಕು. ಒಂದು ವರ್ಷದಿಂದಲೂ, ಡಯಾಲಿಸಸ್ ಪ್ರಾರಂಭವಾದಂದಿನಿಂದಲೂ ತನ್ನ ಅನಿಸಿಕೆಗಳನ್ನು ಹೇಳಿ ಮುಗಿಸ ಬೇಕೆಂಬ ಆತುರತೆ ಇತ್ತು. ಅವರಿಗೆ ಹೇಳಲಿಕ್ಕಾಗುತ್ತಿಲ್ಲ. ಆದಕಾರಣ ನಾನು ಹೋಗುತ್ತಿಲ್ಲ ಎಂದು ನಾಗರಾಜ ನನಗೆ ಹೇಳಿದಾಗ, ವಾರದಲ್ಲಿ 2-3 ದಿವಸ ನಾನೇ ಬಂದು ಬರೆದು ಕೊಳ್ಳುತ್ತೇನೆಂದು ಎನ್.ಎಲ್. ಅವರಿಗೆ ನಾನು ಮಾತು ಕೊಟ್ಟಿದ್ದರೂ ಕೂಡ ಕಾರ್ಯ ಬಾಹುಲ್ಯದಿಂದ ಅದು ಸಾಧ್ಯವಾಗದೆ ಎನ್.ಎಲ್ ಅವರ “ಕರ್ನಾಟಕದಲ್ಲಿ ಪಕ್ಷದ ಬೆಳವಣಿಗೆ”ಯ ಕುರಿತು ಅನಿಸಿಕೆಗಳು ಮುಗಿಯದ ಕತೆಯಾಗಿಯೇ ಉಳಿಯಿತು.

ಕಾ॥ ಎನ್.ಎಲ್. ನಿಧನಕ್ಕೆ ಸಂತಾಪ

ಧಾರವಾಡದ ಶ್ರೀನಗರ ಸಿ.ಪಿ.ಐ.(ಎಂ) ಶಾಖೆ ಸಭೆ ಜೂನ್ 3 ರಂದು ಕಾ॥ ದೇಶಪಾಂಡೆಯವರ ಅಧ್ಯಕ್ಷತೆಯಲ್ಲಿ ಜರುಗಿತು. ಸ್ವಾತಂತ್ರ್ಯ ಚಳುವಳಿ ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಹಾಗೂ ರಾಜ್ಯದಲ್ಲಿ ಕಮ್ಯೂನಿಸ್ಟ್ ಪಕ್ಷ ಸ್ಥಾಪಿಸಿ ಅದರ ಬೆಳವಣಿಗೆಗಾಗಿ ದುಡಿಯುವ ಜನತೆಯ ನಾಯಕರಾಗಿದ್ದ ಕಾ॥ ಎನ್.ಎಲ್. ಉಪಾಧ್ಯಾಯರ ನಿಧನಕ್ಕೆ ಶಾಖೆಯ ಸಂಗತಿಗಳು ತುಂಬುಹೃದಯದ ಶ್ರದ್ಧಾಂಜಲಿ ಅರ್ಪಿಸಿದರು ಎಂದು ಶಾಖೆಯ ಕಾರ್ಯದರ್ಶಿ ಕಾ॥ ಆರ್. ಚಂದ್ರರವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಪಕ್ಷದ ಧಾರವಾಡ ಜಿಲ್ಲಾ ಸಮಿತಿ ಆಶ್ರಯದಲ್ಲಿ ಮೇ 28 ರಂದು ಪಕ್ಷದ ಕಛೇರಿಯಲ್ಲಿ ಸೇರಿದ್ದ ಸರ್ವ ಸದಸ್ಯರ ಸಭೆ ಕಾ॥ ಎನ್.ಎಲ್ ರ ನಿಧನಕ್ಕೆ ಸಂತಾಪ ಸೂಚಿಸಿ ಸಭೆ ನಡೆಸಿತು. ಕಾ॥ ವಿ.ಎಂ. ಪೂಜಾರ ಅಧ್ಯಕ್ಷತೆ ವಹಿಸಿ ಕಾ॥ ಎಂ. ಸದಾನಂದರವರು ಮಾತನಾಡಿ ಉಪಾಧ್ಯಾಯರ ತ್ಯಾಗ ಹಾಗೂ ಹೋರಾಟಮಯ ಜೀವನ ಕಮ್ಯೂನಿಸ್ಟ್ ಚಳುವಳಿಗೆ ಅವರ ನಿಷ್ಠೆ ಎಲ್ಲರಿಗೂ ಮಾರ್ಗದರ್ಶನವೆಂದು ಹೇಳಿದರು.

ಸಭೆ ಮೌನ ಆಚರಿಸಿ ಅಗಲಿದ ನಾಯಕರಿಗೆ ಗೌರವ ಸೂಚಿಸಿತು.

ಪ್ರೆಸ್ ಕಾರ್ಮಿಕರ ಸಂತಾಪ

ಮಂಗಳೂರಿನ ಎಸ್.ಕೆ. ಪ್ರೆಸ್ ವರ್ಕರ್ಸ್ ಯೂನಿಯನ್ ವಿಶೇಷ ಸಭೆ ಮೇ 29ರಂದು ಜರುಗಿ ಅಗಲಿದ ಎನ್.ಎಲ್ ರಿಗೆ ಸಂತಾಪ ವ್ಯಕ್ತ ಪಡಿಸಿತು. ರಾಜ್ಯದ ದುಡಿಯುವ ವರ್ಗ ಹಾಗೂ ಕಮ್ಯೂನಿಸ್ಟ್ ಚಳುವಳಿಗೆ ಅಪಾರ ನಷ್ಟವಾಗಿದೆ ಎಂದು ಹೇಳಿಕೆಯಲ್ಲಿ ತಿಳಿಸಿದೆ.

ವಿದ್ಯಾರ್ಥಿ ಶಾಖೆ.

4-6-89 ರಂದು ಧಾರವಾಡದಲ್ಲಿ ಸಭೆಸೇರಿದ್ದ ವಿದ್ಯಾರ್ಥಿ ಶಾಖೆ ಸಭೆಯಲ್ಲಿ “ಹಿರಿಯ ಸಂಗಾತಿ ಎನ್.ಎಲ್. ಅವರ ನಿಧನದಿಂದಾಗಿ ಹಿರಿಯ ಸಂಗಾತಿಯನ್ನು ಕಳೆದು ಕೊಂಡಂತಾಗಿದೆ. ಕರ್ನಾಟಕದ ಪ್ರಗತಿ ಪರ ಚಳುವಳಿಗೆ ತುಂಬಾ ಹಾನಿಯಾಗಿದೆ ಹಾಗೂ ಬರ್ವ ಮಾರ್ಕ್ಸ್‌ವಾದಿ ಚಿಂತಕರನ್ನು ಕಳೆದುಕೊಂಡಂತಾಗಿದೆ. ಎನ್.ಎಲ್. ಅವರು ಯಾವ ಉದ್ದೇಶಕ್ಕೆ ಸ್ವಾರ್ಥ ರಹಿತವಾಗಿ ಅಹೋರಾತ್ರಿ ದುಡಿದಿರುವರೋ ಅದನ್ನು ಸಾಧಿಸಲು ನಾವು ಪಣತೊಡುತ್ತೇವೆ” ಎಂಬ ಗೊತ್ತುವಳಿಯನ್ನು ಪಾಸುಮಾಡಿ ಎರಡು ನಿಮಿಷ ಮೌನ ಆಚರಿಸಲಾಯಿತು.

ಬೆಳಗಾವಿ

ಸಿ.ಪಿ.ಐ. ಮುಖಂಡರಾದ ಕಾ. ಕೃಷ್ಣ ಮೇಣಸೆಯವರೂ, ಗೋಕಾಕದಿಂದ ಸಮದರ್ಶಿ ಪತ್ರಿಕೆಯ ಸಂಪಾದಕರಾಗಿರುವ. ಧಾರವಾಡಕರ ಅವರೂ ತಂತಿ ಮೂಲಕ ಎನ್.ಎಲ್. ಅವರ ನಿಧನಕ್ಕೆ ಶೋಕ ವ್ಯಕ್ತಮಾಡಿ, ಅವರ ಅಗಲುವಿಕೆಯಿಂದ ಕಾರ್ಮಿಕ ವರ್ಗದ ಚಳುವಳಿಗೆ ತುಂಬಲಾರದ ಹಾನಿಯಾಗಿದೆಂದು ಹೇಳಿ ತಮ್ಮ ಅಪಾರ ದುಃಖವನ್ನು ವ್ಯಕ್ತಮಾಡಿದ್ದಾರೆ.

ಪುಸ್ತಕ ಪರಿಚಯ

ಕಾವ್ಯದಲ್ಲಿ ಯುದ್ಧ ವಿರೋಧಿ ನಿಲುವುಗಳು
ಲೇಖಕ: ಹೆಚ್. ಶೇಷಗಿರಿ ರಾವ್
ಪ್ರಕಾಶಕರು: ಪುಷ್ಪ ಪ್ರಕಾಶನ
ಹೂವಿನ ಹಡಗಲಿ.
ಬೆಲೆ: 4-00ರೂ.

“ಸಮುದಾಯ” 86 ರಲ್ಲಿ ಹಮ್ಮಿಕೊಂಡ ‘ನೂರು ಅಡಿಗಳ ಬಣ್ಣದ ನಡೆ ಅಣುಸಮರಕ್ಕೆ ಜನತೆಯ ತಡೆ’ ಯುದ್ಧವಿರೋಧಿ ಶಾಂತಿಪರ ಜಾಥಾ ಅತ್ಯಂತ ಅರ್ಥಪೂರ್ಣವಾದದ್ದು. ರೇಗನ್-ಗೋರ್ಬಚೇವ್‌ರವರನ್ನು ಎರಡು ಬಲಿಷ್ಠ ರಾಷ್ಟ್ರಗಳು ಎಂದು ಒಂದೇ ತಕ್ಕಡಿಯಲ್ಲಿಟ್ಟು ಇಡೀ ಪ್ರಪಂಚ ತೂಗಿ ನೋಡುತ್ತಿದ್ದಾಗ ಗೋರ್ಬಚೇವ್ ಹೇಗೆ ರೇಗನ್ನರಿಗಿಂತ ತೀರಾ ಭಿನ್ನ ಎಂದು ಕಂಡುಕೊಳ್ಳಲು ಹಾಗೂ ಶಾಂತಿ ಎಷ್ಟು ಮುಖ್ಯ ಎಂದು ಜನರ ಮನದಲ್ಲಿ ಬಿತ್ತಲು ಹಮ್ಮಿಕೊಂಡ ಜಾಥಾ ಹಲವರಲ್ಲಿ ಚಿಂತನೆಯ ಕಾವನ್ನು ಹುಟ್ಟು ಹಾಕಿದೆ.

ಈ ಜಾಥಾಗೆಂದೇ ಹಲವರು ಕವನ, ಹಾಡು ಬರೆದರು. ಬೀದಿ ಬೀದಿಗಳಲ್ಲಿ ಈ ಹಾಡುಗಳನ್ನು ಹಾಡಲಾಯಿತು. ಯುದ್ಧದ ಅನುಭವ ಇರದ ತಲೆ ಮಾರೂ ಸಹ ಯುದ್ಧದ ಭೀಕರತೆ ಯ ಬಗ್ಗೆ ಚಿಂತಿಸಿದರು. ತಮ್ಮ ಅರಿವಿನ ಪರಿಧಿಯಲ್ಲಿದ್ದ ಪ್ರತಿಮೆಗಳ ಮೂಲಕವೇ ಯುದ್ಧ ವಿರೋಧಿ ಭಾವನೆಗಳಿಗೆ ಜೀವ ತುಂಬಿದರು.

ಹೀಗಾಗಿಯೇ ಪ್ರೀತಿಯ ಹುಡುಗಿಯ ಕಣ್ಣಾಲಿ, ಸ್ವಾತಿಯ ಮುತ್ತು, ಯುಗಾದಿ, ಮೃಗ ಪಕ್ಷಿಗಳೆಂಬ ಎಲ್ಲವೂ ಈ ಹಾಡು ಕವನಗಳಲ್ಲಿ ತಲೆ ಹಾಕಿದವು. ಈ ಎಲ್ಲಾ ಕ್ರಿಯೆಗಳ ಮಧ್ಯೆಯೇ ಹೆಚ್.ಶೇಷಗಿರಿ ರಾವ್ ಈ ಎಲ್ಲಾ ಕವನಗಳನ್ನು ಒಟ್ಟುಗೂಡಿಸಿ ಕಾವ್ಯದಲ್ಲಿ ಯುದ್ಧ ವಿರೋಧಿ ನಿಲುವುಗಳು ಹಾದು ಬಂದ ರೀತಿಯನ್ನು ಗುರುತಿಸುವ ಗುರುತರವಾದ ಕೆಲಸಕ್ಕೆ ಕೈಹಚ್ಚಿದ್ದಾರೆ.

ಬೇಂದ್ರೆ, ಡಿವಿಜಿ, ದಿನಕರ ದೇಸಾಯಿ, ಜಡಭರತ ರಿಂದ ಇತ್ತೀಚಿನ ವಿ.ಬಡಿಗೇರ, ಹೆಚ್. ಚನ್ನಬಸಪ್ಪರವರ ಕವನಗಳವರೆಗೆ ಶಾಂತಿಪರ ಘೋಷಣೆಗಳು ಹೊಮ್ಮಿದುದರ ಬಗ್ಗೆ ಶೇಷಗಿರಿ ರಾವ್ ಮಾಡಿರುವ ಪ್ರಯತ್ನ ಸ್ವಾಗತಾರ್ಹ.

ಶೇಷಗಿರಿರಾವ್‌ರವರೇ ಪುಸ್ತಕದ ಆರಂಭದಲ್ಲಿ ಲೇಖನ ಮಿತಿಗಳನ್ನೂ ಗುರುತಿಸಿ ಬಿಟ್ಟಿದ್ದಾರೆ. ಪುಸ್ತಕಗಳ ಅಭಾವ ಇದರಲ್ಲಿ ಮುಖ್ಯವಾದದ್ದು. ಹೀಗಾಗಿ ಈ ಕೊರತೆ ಇಡೀ ಪುಸ್ತಕ ದಲ್ಲಿ ಕಾಣಿಸಿಕೊಂಡಿದೆ. ಇದರೊಂದಿಗೇ ಶೇಷಗಿರಿರಾವ್‌ರವರು ಯುದ್ಧದ ಅನುಭವವಿರದ ತಲೆಮಾರು ಯುದ್ಧ ವಿರೋಧಿ, ಶಾಂತಿ ಪರ ತುಡಿತಗಳನ್ನು ಹೊಮ್ಮಿಸುತ್ತಿರುವುದರ ಬಗ್ಗೆ ಹಾಗೂ ಈ ಹಿಂದೆ ಹೊಮ್ಮಿಸುತ್ತಿದ್ದ ಕವನಗಳ ಪರಿಗೂ ಇತ್ತೀಚಿನ ರೀತಿಗೂ ಕಾವ್ಯಾಂಶದಲ್ಲಿ ಆಗಿರುವ ಬದಲಾವಣೆ ಕುರಿತು ಇನ್ನಷ್ಟು ಆಳವಾಗಿ ಕೆದಕಿದ್ದರೆ. ಪುಸ್ತಕ ಅತ್ಯಂತ ಮೌಲ್ಯಯುತ ದಾಖಲೆಯಾಗಿ ಬಿಡುತ್ತಿತ್ತು.

ಈ ಎಲ್ಲಾ ಕೊರತೆಗಳನ್ನು ಶೇಷಗಿರಿರಾವ್ ಮುಂದಿನ ಮುದ್ರಣದಲ್ಲಿ ಸೇರಿಸಿದರೆ ಸ್ವಾಗತಾರ್ಹ

Printed and published by P.RAMACHANDRA RAO on behalf of communist party of India (Marxist), Karnataka State committee L-56 K.V. Temple Street, Sulthanpet, Bangalore-560 053. Phone.No. 75331. Editor. P.RAMACHAN